ಕನ್ನಡ ಮತ್ತು ಸಂಸ್ಕೃತಿ ಇಲಾಖೆ

**ಸ್ವಾತಂತ್ರ್ಯ ಅಮೃತ ಮಹೋತ್ಸವ ಪುಸ್ತಕ ಮಾಲೆ**

## ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ

# ಕೊಪ್ಪಳ


ಪ್ರಧಾನ ಸಂಪಾದಕರು

**ಡಾ. ಬಿ.ವಿ. ವಸಂತಕುಮಾರ್**

ಸಂಪಾದಕರು

**ಡಾ. ಮೃತ್ಯುಂಜಯ ರುಮಾಲೆ**

ಲೇಖಕರು

**ಮಹೇಶ ಬಳ್ಳಾರಿ**



**ಕರ್ನಾಟಕ ಸಾಹಿತ್ಯ ಅಕಾಡೆಮಿ**

ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು-೫೬೦ ೦೦೨

ದೂರವಾಣಿ: ೦೮೦-೨೨೨೧೧೭೩೦ / ೨೨೧೦೬೪೬೦

www.karnatakasahithyaacademy.org

ಇ-ಮೇಲ್: sahithya.academy@gmail.com

**KOPPALA:** An Introducing Book on the Places in Karnataka that Played a Major Role in the Freedom Struggle, Written by Mahesh Ballary, Published by Kariyappa N., Registrar, Karnataka Sahithya Academy, Kannada Bhavana, J.C. Road, Bengaluru-560002.

ಹಕ್ಕು: ಕರ್ನಾಟಕ ಸಾಹಿತ್ಯ ಅಕಾಡೆಮಿ

**ಪ್ರಧಾನ ಸಂಪಾದಕರು**
ಡಾ. ಬಿ.ವಿ. ವಸಂತಕುಮಾರ್
ಅಧ್ಯಕ್ಷರು, ಕರ್ನಾಟಕ ಸಾಹಿತ್ಯ ಅಕಾಡೆಮಿ

**ಸಂಪಾದಕ ಮಂಡಳಿ**
ಡಾ. ಎಸ್. ಜಿ. ರಾಮದಾಸ ರೆಡ್ಡಿ
ಡಾ. ಮೃತ್ಯುಂಜಯ ರುಮಾಲೆ
ಶ್ರೀ ನರೇಂದ್ರಕುಮಾರ್ ಎಸ್.ಎಸ್.
ಡಾ. ಪ್ರಕಾಶ ಗ. ಖಾಡೆ
ಶ್ರೀಮತಿ ಕೋಡಿಬೆಟ್ಟು ರಾಜಲಕ್ಷ್ಮಿ

**ಲೇಖಕರು**
ಮಹೇಶ ಬಳ್ಳಾರಿ

ಮೊದಲ ಮುದ್ರಣ: ೨೦೨೨
ಪ್ರತಿಗಳು: ೧೦೦೦
ಬೆಲೆ: ರೂ. ೩೦/-
ಪುಟ: ೫೬

ಮುಖಪುಟ ಚಿತ್ರ: ಮುರಳೀಧರ ವಿ. ರಾಥೋಡ್

ಪ್ರಕಾಶಕರು:
ಕರಿಯಪ್ಪ ಎನ್., ರಿಜಿಸ್ಟ್ರಾರ್
ಕರ್ನಾಟಕ ಸಾಹಿತ್ಯ ಅಕಾಡೆಮಿ

ಮುದ್ರಕರು
**ರಶ್ಮಿ ಪ್ರಿಂಟರ್ಸ್**
ಸುಧಾಮನಗರ, ಬೆಂಗಳೂರು
ಮೊ: ೯೯೦೧೯೧೬೫೮೧

**ಬಸವರಾಜ ಬೊಮ್ಮಾಯಿ**
ಮುಖ್ಯಮಂತ್ರಿ

ವಿಧಾನಸೌಧ
ಬೆಂಗಳೂರು-560 001



## ಶುಭ ಸಂದೇಶ

ಭಾರತ ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂದರ್ಭದಲ್ಲಿ ದೇಶದಾದ್ಯಂತ ದೇಶಪ್ರೇಮವನ್ನು ಬೆಳೆಸುವ ಸಾವಿರಾರು ಕಾರ್ಯಕ್ರಮಗಳು ನಡೆಯುತ್ತಿರುವ ಹೊತ್ತಿನಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಕರ್ನಾಟಕದ ೩೧ ಜಿಲ್ಲೆಗಳಲ್ಲಿ ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿರುವ ೭೫ ಸ್ಥಳಗಳನ್ನು ಗುರುತಿಸಿ, ೭೫ ಪುಸ್ತಕಗಳನ್ನು ಹೊರತರುತ್ತಿರುವುದು ಸಂತೋಷದ ವಿಚಾರ.

ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಕರ್ನಾಟಕದ ಕೊಡುಗೆ ಬಹಳ ಮಹತ್ವದ್ದು. ಕರ್ನಾಟಕದ ಹಲವು ಮಹನೀಯರು ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕಾಗಿ ನಡೆಸಿದ ತ್ಯಾಗ ಬಲಿದಾನಗಳು ಅಪಾರ. ಅಂತೆಯೇ ಕರ್ನಾಟಕದ ಸಾವಿರಾರು ಸ್ಥಳಗಳು ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿ ನಿಂತಿವೆ. ವಿದುರಾಶ್ವತ್ಥ, ಈಸೂರು, ಶಿವಪುರಗಳನ್ನೂ ಒಳಗೊಂಡಂತೆ ಕರ್ನಾಟಕದ ೩೧ ಜಿಲ್ಲೆಗಳ ಸಾವಿರಾರು ಸ್ಥಳಗಳಲ್ಲಿ ಭಾರತದ ಸ್ವಾತಂತ್ರ್ಯ ಸಂಗ್ರಾಮವು ನಡೆದುದಕ್ಕೆ ಸಾಕ್ಷಿಯಾಗಿ ಹಲವಾರು ಕುರುಹುಗಳು, ಅವಶೇಷಗಳು, ಸ್ಮಾರಕಗಳು ಇತಿಹಾಸದ ಪುಟಗಳಲ್ಲಿ ದಾಖಲಾಗಿವೆ. ಆದಾಗ್ಯೂ ಇನ್ನೂ ದಾಖಲಾಗಬೇಕಾದ ಸಂಗತಿಗಳು ಉಳಿದಿವೆ. ಭಾರತ ಸ್ವಾತಂತ್ರ್ಯದ ಅಮೃತೋತ್ಸವದ ಸಂದರ್ಭದಲ್ಲಿ ಈ ಎಲ್ಲ ಅಂಶಗಳನ್ನು ದಾಖಲಿಸುವ ಕೆಲಸ ತುರ್ತಾಗಿ ಆಗಬೇಕಾಗಿದೆ.

ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿರುವ ಕರ್ನಾಟಕದ ವಿವಿಧ ಸ್ಥಳದಲ್ಲಿ ನಡೆದ ಘಟನೆಗಳು, ತ್ಯಾಗ, ಬಲಿದಾನಗಳು, ಹೋರಾಟಗಳು ಇತ್ಯಾದಿ

ವಿವರಗಳೆಲ್ಲವನ್ನೂ ಪುಸ್ತಕ ರೂಪದಲ್ಲಿ ದಾಖಲಿಸುವ ಮೂಲಕ, ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ಕೊಡುಗೆಯ ಮೇಲೆ ಬೆಳಕು ಚೆಲ್ಲುವ ಪ್ರಯತ್ನವನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿ ಮಾಡಿದೆ. ಇದು ನಿಜಕ್ಕೂ ಒಂದು ಸಂಶೋಧನಾತ್ಮಕ ಪ್ರಯತ್ನವೇ ಸರಿ.

ಈ ಸಾರ್ಥಕ ಕಾರ್ಯವನ್ನು ಯಶಸ್ವಿಗೊಳಿಸಿದ ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷರು ಹಾಗೂ ಬಳಗದವರನ್ನು ನಾನು ಮನಃಪೂರ್ವಕವಾಗಿ ಅಭಿನಂದಿಸುತ್ತೇನೆ.

ಎಲ್ಲರಿಗೂ ಭಾರತ ಸ್ವಾತಂತ್ರ್ಯ ಅಮೃತ ಮಹೋತ್ಸವದ ಶುಭಾಶಯಗಳು.

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ
ಕರ್ನಾಟಕ ಸರ್ಕಾರ

**ವಿ ಸುನಿಲ್ ಕುಮಾರ್**

ಸ್ವಾತಂತ್ರ್ಯದ ಅಮೃತಮಹೋತ್ಸವ

ಇಂಧನ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು



ಕರ್ನಾಟಕ ಸರ್ಕಾರ

## ಶುಭ ಸಂದೇಶ

**‘ಜಯ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ’**

ಜಗತ್ತಿನಲ್ಲಿ ಭಾರತ ಒಂದು ವಿಶಿಷ್ಟವಾದ ಮಹತ್ವದ ರಾಷ್ಟ್ರ. ವಿಶ್ವಕ್ಕೆ ವಿಶ್ವಮಾನವನನ್ನು, ವಿಶ್ವಕುಟುಂಬವನ್ನು, ವಿಶ್ವನಾಥನನ್ನು, ಜಗನ್ಮಾತೆಯನ್ನು ನೀಡಿರುವ ಆಧ್ಯಾತ್ಮದ ಪುಣ್ಯಭೂಮಿ. ವೇದ, ಉಪನಿಷತ್ತುಗಳ ಕಾಲದಿಂದ ಹಿಡಿದು, ರಾಮ, ಕೃಷ್ಣ, ಶಿವ, ಬುದ್ಧ, ಬಸವ, ಗಾಂಧಿ, ಅಂಬೇಡ್ಕರ್, ಮೈತ್ರೇಯಿ, ಗಾರ್ಗಿ, ಅರುಂಧತಿ, ಸೀತೆ, ಮಂಡೋದರಿ, ಮೀರಾ, ಅಕ್ಕಮಹಾದೇವಿ ಮೊದಲಾದ ಪೌರಾಣಿಕ, ಐತಿಹಾಸಿಕ ವ್ಯಕ್ತಿತ್ವಗಳ ಅಂತಃಶಕ್ತಿಯಿಂದ ಜಗತ್ತನ್ನು ಬೆಳಗಿದ ದೇಶ ಭಾರತ. ಇಂಥ ದೇಶದ ಮೇಲೆ ಅಲೆಗ್ಸಾಂಡರನಿಂದ ಹಿಡಿದು ಮೊಘಲರಾದಿಯಾಗಿ ಬ್ರಿಟಿಷರವರೆಗೆ ಆಕ್ರಮಣ ಮಾಡಲು ಪ್ರಯತ್ನಿಸಿ, ಸೋತು ಭಾರತೀಯ ಸಂಸ್ಕೃತಿಯ ಅಗಾಧತೆಗೆ ಶರಣಾಗಿ ಭಾರತೀಯರೇ ಆಗಿಹೋಗಿದ್ದಾರೆ. ಹಾಗೇ ಭಾರತವನ್ನು ಭಾರತವನ್ನಾಗಿ ಉಳಿಸಿರುವ ಮಹಾನ್ ಶಕ್ತಿಯೇ ಸ್ವಾತಂತ್ರ್ಯದ ತೀವ್ರ ತುಡಿತ.

ಭಾರತದ ಸ್ವಾತಂತ್ರ್ಯ ಸಂಗ್ರಾಮ ಸುಮಾರು ಮುನ್ನೂರು ವರ್ಷಗಳಿಗೂ ಹಳೆಯದು. ಇಡೀ ಭಾರತವೇ ಬ್ರಿಟಿಷರ ವಿರುದ್ಧ ಹೋರಾಡಿ ದಾಸ್ಯದಿಂದ ಮುಕ್ತವಾಗಿ ಸ್ವಾತಂತ್ರ್ಯವನ್ನು ಪಡೆದುಕೊಂಡು ಈಗ ೭೫ ವರ್ಷಗಳಾಗಿವೆ. ಈ ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂದರ್ಭವನ್ನು ಅರ್ಥಪೂರ್ಣವಾಗಿ ಆಚರಿಸಬೇಕಾದ್ದು ನಮ್ಮೆಲ್ಲರ ಕರ್ತವ್ಯ.

ಇಡೀ ದೇಶವನ್ನೇ ಜಾಗೃತಗೊಳಿಸಿದ ಭಾರತದ ಸ್ವಾತಂತ್ರ್ಯ ಸಂಗ್ರಾಮ,

ನಮ್ಮ ಕರ್ನಾಟಕದಲ್ಲಿಯೂ ಸಹ ಸ್ವಾತಂತ್ರ್ಯ ಸಂಗ್ರಾಮದ ಪಾಂಚಜನ್ಯವನ್ನು ಮೊಳಗಿಸಿತು. ಕರ್ನಾಟಕದ ಕಲಿಗಳು ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿ, ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ವಿಶಿಷ್ಟ ಕೊಡುಗೆ ನೀಡಿರುವುದನ್ನು ಸ್ಮರಿಸಬೇಕಿದೆ. ಕರ್ನಾಟಕದಲ್ಲಿ ಸಾವಿರಾರು ಸ್ವಾತಂತ್ರ್ಯ ಹೋರಾಟದ ಘಟನೆಗಳನ್ನು ಸಾರುವ ಐತಿಹಾಸಿಕ ಸ್ಥಳಗಳಿವೆ. ಅಂಥ ಸ್ಥಳಗಳು ಅರಿವಿಗೆ ಬಾರದೆ ಮರೆಯಾಗಿ ಹೋಗುತ್ತಿವೆ. ಸ್ವಾತಂತ್ರ್ಯದ ಹಣತೆ ಹೊತ್ತಿಸಿದ ಪ್ರಮುಖ ಸ್ಥಳಗಳಲ್ಲಿ ತ್ಯಾಗ, ಬಲಿದಾನಗಳನ್ನು ನೆನಪಿಸುವ ನಿಟ್ಟಿನಲ್ಲಿ ಮತ್ತು ಇಂದಿನ ಪೀಳಿಗೆಗೆ ತಿಳಿಸಿಕೊಡುವ ಕೆಲಸ ಈ ಅಮೃತ ಮಹೋತ್ಸವದ ಸಂದರ್ಭದಲ್ಲಿ ಆಗುತ್ತಿರುವುದು ಸಂತಸದ ವಿಷಯ. ಈ ನಿಟ್ಟಿನಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಒಂದು ಬೃಹತ್ ಆಂದೋಲನವನ್ನು ಹಮ್ಮಿಕೊಂಡಿದೆ. ಅದರ ಅಂಗವಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ಐತಿಹಾಸಿಕ ಮಹತ್ವಗಳನ್ನು ತಿಳಿಸಿಕೊಡುವ ೭೫ ಸ್ಥಳಗಳ ಬಗ್ಗೆ ೭೫ ವಿವಿಧ ಲೇಖಕರಿಂದ ಒಟ್ಟು ೭೫ ಪುಸ್ತಕಗಳನ್ನು, ಅದರ ತಲಾ ೧೦೦೦ ಪ್ರತಿಯಂತೆ ೭೫೦೦೦ ಪ್ರತಿಗಳನ್ನು ಎರಡು ತಿಂಗಳಲ್ಲಿ ಬರೆಯಿಸಿ, ಮುದ್ರಿಸಿ ಓದುಗರಿಗೆ ತಲುಪಿಸುತ್ತಿರುವುದು ನಿಜಕ್ಕೂ ಹೆಮ್ಮೆಯ ವಿಷಯ. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರತಿಯೊಬ್ಬರನ್ನೂ ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ.

ನಾವೆಲ್ಲರೂ ಕೂಡಿ ನಮ್ಮ ನಮ್ಮ ಮನೆಮನಗಳಿಂದ ನಾಡು, ನುಡಿ, ಸಾಹಿತ್ಯ, ಸಂಸ್ಕೃತಿ, ಪರಂಪರೆಗಳನ್ನು ಬೆಳೆಸೋಣ. ರಸಋಷಿ ಕುವೆಂಪು ಅವರು ಹೇಳಿರುವ 'ಜಯ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ' ಎಂಬ ಆದರ್ಶದೊಂದಿಗೆ ಕರ್ನಾಟಕದ ಮೂಲಕ ಭಾರತವನ್ನೂ, ಭಾರತದ ಮೂಲಕ ಕರ್ನಾಟಕವನ್ನೂ ಅಭಿನ್ನಗೊಳಿಸೋಣ, ಬಲಿಷ್ಠಗೊಳಿಸೋಣ. ಭವ್ಯ ಕರ್ನಾಟಕ, ಭವ್ಯ ಭಾರತ ನಿರ್ಮಿಸೋಣ.



**(ವಿ ಸುನಿಲ್ ಕುಮಾರ್)**
ಇಂಧನ, ಕನ್ನಡ ಮತ್ತು ಸಂಸ್ಕೃತಿ
ಇಲಾಖೆ ಸಚಿವರು

## ಪ್ರಧಾನ ಸಂಪಾದಕರ ಮಾತು

ಸ್ವಾತಂತ್ರ್ಯ ಎಂಬುದು ಲೌಕಿಕವಾಗಿಯೂ ಲೋಕೋತ್ತರವಾಗಿಯೂ ಮಹೋನ್ನತವಾದ ಮೌಲ್ಯ. ಭಾರತೀಯ ಸಂಸ್ಕೃತಿಯು ಧರ್ಮ, ಅರ್ಥ, ಕಾಮ, ಮೋಕ್ಷಗಳನ್ನು ಪುರುಷಾರ್ಥವೆಂದು ಕರೆದಿದೆ. ಮೋಕ್ಷವೆಂದರೆ ಬಿಡುಗಡೆ, ಸ್ವಾತಂತ್ರ್ಯ ಎಂದರ್ಥ. ಹುಟ್ಟು ಸಾವುಗಳಿಂದ ಬಿಡುಗಡೆ ಎಂಬುದು ಲೋಕೋತ್ತರವಾದ ಅರ್ಥವಾದರೆ, ಸಾವಿಲ್ಲದ, ನೋವಿಲ್ಲದ ಸ್ಥಿತಿಗಾಗಿ ಕಲ್ಯಾಣ ನಾಡಿನ ನಿರ್ಮಾಣಕ್ಕಾಗಿ ನಾವು ಗಳಿಸುವ ನಮ್ಮ ಸ್ವಯಂ ನಿಯಂತ್ರಣದ ಸ್ವಾತಂತ್ರ್ಯ ಎಂಬುದು ಲೌಕಿಕವಾದ ಅರ್ಥ. ಲೌಕಿಕ ಹಾಗೂ ಅಲೌಕಿಕಗಳು ಪರಸ್ಪರ ವಿರೋಧಿಗಳಲ್ಲ; ಅವು ಪರಸ್ಪರ ಪೂರಕವಾದವು. ಲೋಕವನ್ನು ಲೋಕೋತ್ತರದ ಔನ್ನತ್ಯಕ್ಕೆ ಏರಿಸುವ ದರ್ಶನವೇ ಭಾರತೀಯ ದರ್ಶನ. ಸ್ವಾತಂತ್ರ್ಯ ನಮ್ಮ ಧರ್ಮ, ನಮ್ಮ ಆತ್ಮ, ನಮ್ಮ ಜೀವನದ ಪರಮ ಪುರುಷಾರ್ಥ. ಅದನ್ನು ಬಯಲು ಎಂದೂ ಕರೆದಿದ್ದಾರೆ. ಅಂತಹ ಸ್ವಾತಂತ್ರ್ಯಕ್ಕಾಗಿ ಭಾರತವು ತನ್ನ ಪುರಾತನ ಕಾಲದಿಂದಲೂ ಬದುಕುತ್ತಾ ಬಂದಿದೆ. ಸ್ವಾತಂತ್ರ್ಯಕ್ಕೆ ಚ್ಯುತಿ ಬಂದಾಗಲೆಲ್ಲ ಭಾರತೀಯರು ಭರತಮಾತೆಯ ಪದತಲದಲ್ಲಿ ತಮ್ಮ ತನು–ಮನ–ಧನಗಳನ್ನು ಅರ್ಪಿಸಿದ್ದಾರೆ. ಅದನ್ನು ರಸಋಷಿ ಕುವೆಂಪು ಅವರು "ಇಂದು ರಕ್ತದ ಬಿಂದು ನಾಳೆ ಸೌಖ್ಯದ ಸಿಂಧು" ಎಂದು ಕರೆದಿದ್ದಾರೆ.

ನಮ್ಮ ದೇಶದ ಸ್ವಾತಂತ್ರ್ಯ ಎಂದರೆ ಅದು ತ್ಯಾಗ, ಬಲಿದಾನಗಳ ಫಲ. ಭಾರತದ ಮೇಲೆ ದಾಳಿ ಮಾಡಲು ಬಂದ ಅಲೆಗ್ಸಾಂಡರನಿಂದ ಹಿಡಿದು ಮೊಘಲರಾದಿಯಾಗಿ ಬ್ರಿಟಿಷರವರೆಗಿನ ಎಲ್ಲ ದಾಳಿಕೋರರ ಕ್ರೌರ್ಯವನ್ನು ಮೆಟ್ಟಿ ನಿಂತು ಭಾರತೀಯರು ಭಾರತಾಂಬೆಯ ಆತ್ಮಗೌರವವನ್ನು ಎತ್ತಿಹಿಡಿದಿರುವುದರ ಪ್ರತೀಕ ನಮ್ಮ ಸ್ವಾತಂತ್ರ್ಯ.

ಪ್ರಸ್ತುತ ೧೫.೦೮.೧೯೪೭ ರಂದು ನಾವು ಗಳಿಸಿದ ಸ್ವಾತಂತ್ರ್ಯದ ಅಮೃತಘಳಿಗೆಗೆ ಇದೀಗ ೧೫.೦೮.೨೦೨೧ಕ್ಕೆ ೭೫ನೆಯ ಸ್ವಾತಂತ್ರ್ಯ ಅಮೃತ ಮಹೋತ್ಸವ ಸಂಭ್ರಮ. ೧೫.೦೮.೨೦೨೨ಕ್ಕೆ ೭೫ ವರ್ಷಗಳನ್ನು ಪೂರೈಸಿ ೭೬ನೆಯ ಸ್ವಾತಂತ್ರ್ಯೋತ್ಸವದ ಆತ್ಮನಿರ್ಭರ ಭಾರತದ ನವನಿರ್ಮಾಣದ ಅವಕಾಶಗಳ ಸಂಭ್ರಮ. ಈ ಒಂದು ವರ್ಷ ಕಾಲ ಭಾರತ ಸರ್ಕಾರ, ಕರ್ನಾಟಕ ಸರ್ಕಾರ "ಸ್ವಾತಂತ್ರ್ಯದ ಅಮೃತ ಮಹೋತ್ಸವ"ವನ್ನು ಆಚರಿಸುತ್ತಿದೆ. ಅದರ ಅಂಗವಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಆಗಸ್ಟ್– ೨೦೨೧ರ ತಿಂಗಳು ಪೂರ್ತಿ "ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ" ಎಂಬ ಹೆಸರಿನಲ್ಲಿ ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲಿ ನಡೆದಿರುವ ಸ್ವಾತಂತ್ರ್ಯ ಹೋರಾಟ ಕುರಿತ ಆನ್ಲೈನ್ ಉಪನ್ಯಾಸಗಳನ್ನು ನಡೆಸಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಾನ್ಯ ಸಚಿವರಾದ ಶ್ರೀ ಸುನಿಲ್ ಕುಮಾರ್ ಅವರು ಸ್ವಾತಂತ್ರ್ಯದ ಅಮೃತ ಮಹೋತ್ಸವವನ್ನು ರಾಜ್ಯಾದ್ಯಂತ ಬೃಹತ್ ಸ್ವರೂಪದಲ್ಲಿ ಅರ್ಥಪೂರ್ಣವಾಗಿ ಆಚರಿಸಬೇಕೆಂದು ತೀರ್ಮಾನಿಸಿದ್ದಾರೆ. ಅವರಿಗೆ ರಾಜ್ಯದ ೭೫ ಸ್ಥಳಗಳಲ್ಲಿ ೭೫ ಸ್ವಾತಂತ್ರ್ಯ ಜಾಥಾಗಳು ನಡೆಯಬೇಕು, ಎಲ್ಲ ಜಿಲ್ಲೆಗಳಿಂದ ರಥಯಾತ್ರೆ ಆಗಬೇಕು, ಬೆಂಗಳೂರು ಮಹಾನಗರದಲ್ಲಿ ಮೂರು ದಿನಗಳ ಸಮಾವೇಶ, ಪ್ರದರ್ಶನಿ, ಪುಸ್ತಕ ಮಾರಾಟ ಮೊದಲಾದ ಹತ್ತು ಹಲವು ಚಟುವಟಿಕೆಗಳನ್ನು ನಡೆಸುವ ಮೂಲಕ ಹೊಸ ತಲೆಮಾರಿಗೆ ಸ್ವಾತಂತ್ರ್ಯದ ಅಮೃತವನ್ನುಣಿಸಬೇಕೆಂಬ ಕನಸಿದೆ. ಅದರ ಭಾಗವಾಗಿ ಅವರು ರಾಜ್ಯದ ೭೫ ಸ್ವಾತಂತ್ರ್ಯ ಹೋರಾಟದ ಸ್ಥಳಗಳನ್ನು ಗುರುತಿಸಿ ೭೫ ಕಿರುಹೊತ್ತಿಗೆಗಳನ್ನು ಬರೆಸಿ ಪ್ರಕಟಿಸುವ ಜವಾಬ್ದಾರಿಯನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿಗೆ ವಹಿಸಿದ್ದಾರೆ. ನಮಗೆ ಜವಾಬ್ದಾರಿ ವಹಿಸಿದ್ದು ದಿನಾಂಕ: ೩೦.೧೧.೨೦೨೧ರಂದು ಮಾನ್ಯ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ. ಅಂದಿನಿಂದಲೇ ಕಾರ್ಯಪ್ರವೃತ್ತರಾದ ನಾವು ರಾಜ್ಯದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಎಲ್ಲ ಜಿಲ್ಲಾ ಸಹಾಯಕ ನಿರ್ದೇಶಕರಿಂದ ಸ್ಥಳಗಳ ಮಾಹಿತಿ ಪಡೆದೆವು. ಜೊತೆಗೆ ರಾಜ್ಯದ ಐದು ಜನರನ್ನು ಸಂಪಾದಕರನ್ನಾಗಿ ನಿಯೋಜಿಸಿ ದಿನಾಂಕ: ೦೩.೧೨.೨೦೨೧ರಂದು ಅಕಾಡೆಮಿಯಲ್ಲಿ ಸಂಪಾದಕರ ಸಭೆ ನಡೆಸಿದೆವು. ಸಂಪಾದಕರಾಗಿ ಡಾ. ಮೃತ್ಯುಂಜಯ ರುಮಾಲೆ, ಹೊಸಪೇಟೆ, ಡಾ. ಎಸ್. ಜಿ. ರಾಮದಾಸ ರೆಡ್ಡಿ, ಮೈಸೂರು, ಡಾ. ಪ್ರಕಾಶ ಗ. ಖಾಡೆ, ಬಾಗಲಕೋಟೆ,



ಶ್ರೀ ನರೇಂದ್ರಕುಮಾರ್ ಎಸ್.ಎಸ್., ಬೆಂಗಳೂರು ಹಾಗೂ ಶ್ರೀಮತಿ ರಾಜಲಕ್ಷ್ಮಿ ಕೋಡಿಬೆಟ್ಟು, ಮಂಗಳೂರು ಇವರೊಂದಿಗೆ ಎಲ್ಲ ಸ್ಥಳಗಳ ಬಗ್ಗೆ ಚರ್ಚಿಸಿ ೭೫ ಸ್ಥಳಗಳನ್ನು ಆಯ್ಕೆ ಮಾಡಿದೆವು. ಒಬ್ಬೊಬ್ಬ ಸಂಪಾದಕರಿಗೆ ೧೫ ಸ್ಥಳಗಳನ್ನು ಹಂಚಿ, ೧೫ ಲೇಖಕರಿಂದ ೧೫ ಕಿರುಪುಸ್ತಕಗಳನ್ನು ಬರೆಯಿಸಿಕೊಡುವ ಜವಾಬ್ದಾರಿ ನೀಡಿದೆವು. ಎರಡು ತಿಂಗಳ ಅವಧಿಯಲ್ಲಿ ಈ ೭೫ ಪುಸ್ತಕಗಳು ಪ್ರಕಟವಾಗುತ್ತಿವೆ. ಈ ಕೃತಿಗಳು ಇತಿಹಾಸದ ಶಾಸ್ತ್ರೀಯ ಮಾದರಿ, ವರದಿಯ ಕಥನ ಮಾದರಿ ಹಾಗೂ ಸೃಜನಶೀಲ ಅಭಿವ್ಯಕ್ತಿಯ ಸಾಹಿತ್ಯ ಮಾದರಿಗಳಿಂದ ಕೂಡಿರುವುದು ಗಮನಾರ್ಹ. ಅತೀ ಕಡಿಮೆ ಅವಧಿಯಲ್ಲಿ ಕ್ಷೇತ್ರಕಾರ್ಯ ಮತ್ತು ಅಧ್ಯಯನ ಮಾಡಿ ಮೌಲಿಕವಾದ ಕೃತಿಗಳನ್ನು ಬರೆದುಕೊಟ್ಟಿರುವ ಎಲ್ಲಾ ಲೇಖಕರ, ಸಂಪಾದಕರ ಶ್ರಮ ಸಾರ್ಥಕತೆ ಪಡೆದಿದೆ. ಈ ನಿಟ್ಟಿನ ಅಧ್ಯಯನಗಳಿಗೆ ಈ ಕೃತಿಗಳು ಪ್ರೇರೇಪಿಸುತ್ತವೆ. ಇದೊಂದು ತುರ್ತಾದ ಆಂದೋಲನಾತ್ಮಕವಾದ ಪ್ರಯತ್ನ. ಇದಕ್ಕೆ ಸಂಪೂರ್ಣ ಸಹಕಾರ ನೀಡಿದ ಮಾನ್ಯ ಸಚಿವರಾದ ಶ್ರೀ ವಿ ಸುನಿಲ್ ಕುಮಾರ್ ಅವರಿಗೆ, ಎಲ್ಲಾ ಸಂಪಾದಕರಿಗೆ, ಎಲ್ಲಾ ಲೇಖಕರಿಗೆ, ಇಲಾಖೆಯ ಕಾರ್ಯದರ್ಶಿಗಳಾದ ಡಾ. ಎನ್. ಮಂಜುಳಾ ಅವರಿಗೆ, ನಿರ್ದೇಶಕರಾದ ಶ್ರೀ ಎಸ್. ರಂಗಪ್ಪ ಅವರಿಗೆ, ಜಂಟಿ ನಿರ್ದೇಶಕರಾದ ಶ್ರೀ ಅಶೋಕ್ ಎನ್. ಚಲವಾದಿ ಅವರಿಗೆ ಹಾಗೂ ಎಲ್ಲಾ ಅಧಿಕಾರಿ ವರ್ಗಕ್ಕೆ ಸಾಹಿತ್ಯ ಅಕಾಡೆಮಿಯ ಸರ್ವ ಸದಸ್ಯರಿಗೆ ಪ್ರೀತಿಯಿಂದ ವಂದಿಸುತ್ತೇನೆ. ಯೋಜನೆ ಪೂರ್ಣಗೊಳ್ಳಲು ವಿಶೇಷವಾಗಿ ನೆರವಾದ ಮಿತ್ರರಾದ ಶ್ರೀ ಮಾಲತೀಶ್ ಭಟ್, ಶ್ರೀ ಹರ್ಷ ನಾರಾಯಣ, ಶ್ರೀಮತಿ ನಯನಾ ಎಸ್. ಅವರನ್ನು ನೆನೆಯುತ್ತಾ ವಂದಿಸುತ್ತೇನೆ. ಕಡಿಮೆ ಅವಧಿಯಲ್ಲಿ ಹಗಲಿರುಳು ಶ್ರಮಿಸಿದ ದಣಿವರಿಯದ ದುಡಿಮೆಗಾರರಾದ ರಿಜಿಸ್ಟ್ರಾರ್ ಎನ್. ಕರಿಯಪ್ಪ, ನಮ್ಮ ಬಳಗ ವಿ. ಹರೀಶ್‌ಕುಮಾರ್, ಹರೀಶ್, ಸೈಯದ್ ಜಾವೀದ್, ಸುಚಿತ್ರ ಎಸ್. ಜಿ., ಗೋಪಾಲ ಎನ್., ಸುನೀಲ್ ಅವರಿಗೆ ಹಾಗೂ ಸುಂದರವಾಗಿ ಮುದ್ರಿಸಿದ ರಶ್ಮಿ ಪ್ರಿಂಟರ್ಸ್ ಬಳಗಕ್ಕೆ, ಮುಖಪುಟ ರಚಿಸಿಕೊಟ್ಟ ಶ್ರೀ ಮುರಳೀಧರ ವಿ. ರಾಥೋಡ್ ಅವರಿಗೆ ವಂದಿಸುತ್ತೇನೆ.

**ಬಿ. ವಿ. ವಸಂತಕುಮಾರ್**

ಅಧ್ಯಕ್ಷರು

# ಲೇಖಕರ ಮಾತು

ಭಾರತ ಸ್ವಾತಂತ್ರ್ಯದ 'ಅಮೃತ ಮಹೋತ್ಸವ'ದ ಅಂಗವಾಗಿ ಕರ್ನಾಟಕದಲ್ಲಿನ ಸ್ವಾತಂತ್ರ್ಯ ಹೋರಾಟದ 75 ಸ್ಥಳಗಳ ಕುರಿತಾಗಿ, 75 ಕಿರುಪುಸ್ತಕಗಳನ್ನು ಪ್ರಕಟಿಸಬೇಕೆಂಬ ಕರ್ನಾಟಕ ಸಾಹಿತ್ಯ ಅಕಾಡೆಮಿಯ 'ಸ್ವರಾಜ್ಯ–75' ಅಂಗವಾಗಿ ಪ್ರಕಟಿಸುತ್ತಿರುವ 75 ಪುಸ್ತಕಗಳ ಯೋಜನೆಯು ನೆಲದ ಇತಿಹಾಸ ಮತ್ತು ಹೋರಾಟದ ಪ್ರತಿಬಿಂಬಗಳಾಗಿ ಮುಂದಿನ ಪೀಳಿಗೆಗೆ ಸಹಕಾರಿಯಾಗಲಿದೆ.

ತಿರುಳ್ಗನ್ನಡ ನಾಡು 'ಕೊಪ್ಪಳ' ಮೊದಲು ಬ್ರಿಟಿಷರಿಂದ ಮತ್ತು ಆನಂತರ ಹೈದರಾಬಾದ್ ನಿಜಾಮನ ಕಪಿಮುಷ್ಟಿಯಿಂದ ಪಾರಾಗಲು ಎರಡು ಸಲ ಹೋರಾಟ ನಡೆಸಬೇಕಾಯಿತು. ಮೊದಲನೆಯದು ಸ್ವಾತಂತ್ರ್ಯ ಹೋರಾಟವಾದರೆ ಎರಡನೆಯದು 'ವಿಮೋಚನಾ' ಹೋರಾಟ.

ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಕೊಪ್ಪಳದ ಪಾತ್ರವು ಗಣನೀಯವಾಗಿದ್ದು, ಇಲ್ಲಿನ ಹೋರಾಟದ ಘಟನೆಗಳು, ಸಂದರ್ಭಗಳು ಮೈ ನವಿರೇಳಿಸುತ್ತವೆ, ರೋಮಾಂಚನವನ್ನು ಹುಟ್ಟಿಸುತ್ತವೆ.

ನಮ್ಮ ನೆಲದ ಇತಿಹಾಸವನ್ನು ನಾವು ಅರಿಯಬೇಕಾಗಿದೆ. ನಮ್ಮ ನೆಲದ ಹೋರಾಟದ ಹೆಜ್ಜೆಗಳ ಹರವನ್ನು ವಿಸ್ತರಿಸಬೇಕಾಗಿದೆ. ತಾಯಿನಾಡಿಗಾಗಿ ಹೋರಾಡಿದ ಎಲ್ಲ ದೇಶಭಕ್ತರ ತ್ಯಾಗಕ್ಕೆ ಕೋಟಿ ಕೋಟಿ ನಮನಗಳನ್ನು ಸಲ್ಲಿಸುತ್ತ 'ಕೊಪ್ಪಳ'ದ ಸ್ವಾತಂತ್ರ್ಯ ಹೋರಾಟದ ಪುಸ್ತಕ ಬರೆಯಲು ಅವಕಾಶ ಕೊಟ್ಟ ಕರ್ನಾಟಕ ಸಾಹಿತ್ಯ ಅಕಾಡೆಮಿಗೂ, ಸಂಪಾದಕರಾದ ನನ್ನ ವಿದ್ಯಾಗುರುಗಳು ಡಾ. ಮೃತ್ಯುಂಜಯ ರುಮಾಲೆ ಅವರಿಗೂ ಮತ್ತು ಈ ಕೃತಿ ರಚನೆಗೆ ಸಹಕಾರಿಯಾದ ಆಕರ ಗ್ರಂಥಗಳ ಲೇಖಕರು, ಸಂಪಾದಕರಿಗೂ ಧನ್ಯವಾದಗಳನ್ನು ಅರ್ಪಿಸುತ್ತೇನೆ.

**ಮಹೇಶ ಬಳ್ಳಾರಿ**

# ಪರಿವಿಡಿ


| | |
|---|---|
| ಶುಭ ಸಂದೇಶ | ೩ |
| ಶುಭ ಸಂದೇಶ | ೫ |
| ಪ್ರಧಾನ ಸಂಪಾದಕರ ಮಾತು | ೭ |
| ಲೇಖಕರ ಮಾತು | ೧೦ |
| ಕೊಪ್ಪಳದ ಸ್ವಾತಂತ್ರ್ಯ ಹೋರಾಟದ ಚಟುವಟಿಕೆಗಳು | ೧೩ |
| ಮೊದಲ ಹೆಜ್ಜೆ: ಟಿಪ್ಪುಸುಲ್ತಾನನ ಹೋರಾಟ | ೧೪ |
| ಜಮೀನುದಾರ ವೀರಪ್ಪ ದೇಸಾಯಿಯವರ ಸಶಸ್ತ್ರ ಬಂಡಾಯ–೧೮೧೯ | ೧೫ |
| ಮುಂಡರಗಿ ಭೀಮರಾಯರ ಹೋರಾಟ | ೧೯ |
| ಗಾಂಧಿ ಯುಗ | ೨೫ |
| 'ಚರಕಾ ಚಲಾಯೇಂಗೆ–ಸ್ವರಾಜ್ಯ ಲೇಂಗೆ'– ರಾಷ್ಟ್ರೀಯ ಕಾರ್ಯಕ್ರಮವಾಗಿ ಖಾದಿ: ಕೊಪ್ಪಳದಲ್ಲಿ ಖಾದಿ ಕೇಂದ್ರ | ೨೬ |
| ಗಾಂಧಿ ಮತ್ತು ಕರ್ನಾಟಕ: ಬೆಳಗಾವಿ ಅಧಿವೇಶನ–೧೯೨೪ | ೨೭ |
| ಬೆಳಗಾವಿ ಅಧಿವೇಶನದಲ್ಲಿ ಕೊಪ್ಪಳದ ದೇಶಭಕ್ತರು | ೨೭ |
| ಲಾಹೋರ ಅಧಿವೇಶನ–೧೯೨೮ | ೨೮ |
| ಕೊಪ್ಪಳಕ್ಕೆ ಗಾಂಧಿ: ಮಾರ್ಚ್ ೩, ೧೯೩೪ | ೨೯ |
| ಕಾಳಪ್ಪ ಪತ್ತಾರರ ಗಾಂಧೀಜಿಯ ಚಿತ್ರ ೫ ರೂ. ಗೆ ಹರಾಜು | ೨೯ |
| ಮಾರ್ತಾಂಡರಾವ್ ಮತ್ತು ಗೆಳೆಯರು | ೩೦ |
| ಗಾಂಧೀಜಿ ಹೆಜ್ಜೆಗಳ ಜನಜಾಗೃತಿ | ೩೧ |
| ಕೊಪ್ಪಳಕ್ಕೆ ಡಾ. ರಾಜೇಂದ್ರ ಪ್ರಸಾದ ಮತ್ತು ಆಚಾರ್ಯ ಕೃಪಲಾನಿ | ೩೧ |
| ಪ್ರಜಾಪರಿಷತ್ತಿಗೆ ಕೊಪ್ಪಳದ ದೇಶಪ್ರೇಮಿಗಳು | ೩೧ |
| ರಾಷ್ಟ್ರೀಯ ಜಾಗೃತಿ: ಗಣೇಶ ಪ್ರತಿಷ್ಠಾಪನೆ | ೩೧ |
| ರಾಷ್ಟ್ರೀಯ ಜಾಗೃತಿ: ಬಳ್ಳೊಳ್ಳಿಯವರ ಮಿಲ್ ಆವರಣದಲ್ಲಿ ದಸರಾ ಕಾರ್ಯಕ್ರಮಗಳು | ೩೨ |
| ರಾಷ್ಟ್ರೀಯ ಜಾಗೃತಿ: ವಾಚನಾಲಯಗಳ ಆರಂಭ | ೩೩ |

ರಾಷ್ಟ್ರೀಯ ಜಾಗೃತಿ: ವಿದ್ಯಾಸಂಸ್ಥೆಗಳು ೩೪
ಗೋವಿಂದರಾವ್ ಮತ್ತು ಸ್ವಾಮಿ ರಮಾನಂದ ತೀರ್ಥರ ಪ್ರವಾಸ ೩೫
ವಿಧಾಯಕ ಕಾರ್ಯಕ್ರಮಗಳು ೩೫
ಹೈದರಾಬಾದ ಕೋಟೆಯ ಮೇಲೆ ಭಾರತದ ಧ್ವಜ ಹಾರಿಸಿದ
ಕೊಪ್ಪಳದ ಬಸವಂತರಾವ್ ಕಾಟ್ರಳ್ಳಿ ೩೬
ನಿಜಾಮ ಸಿಂಹಾಸನದ ರಜತ ಮಹೋತ್ಸವ ಮತ್ತು
ವಂದೇ ಮಾತರಂ ಚಳುವಳಿ ೩೭
ಹೋರಾಟದ ಮುಖ್ಯ ವೇದಿಕೆಯಾಗಿ ಕೊಪ್ಪಳ ೩೮
'ಮಾಡು ಇಲ್ಲವೇ ಮಡಿ'–ಅಂತಿಮ ಹೋರಾಟ:
ಮುಂಬೈ ಅಧಿವೇಶನ ೩೯
ಮುಂಬೈ ಅಧಿವೇಶನದಲ್ಲಿ ಕೊಪ್ಪಳಿಗರು: ಚಲೇಜಾವ್
ಚಳುವಳಿಯಲ್ಲಿ ಕೊಪ್ಪಳ ೪೦
'ಚಲೇಜಾವ್ ಚಳುವಳಿ'ಗೆ ಪರ್ಯಾಯವಾದ
'ಆಜಾದ್ ಹೈದರಾಬಾದ್' ೪೧
'ಕ್ಯಾಬಿನೆಟ್ ಮಿಷನ್ ಆಗಮನ ಮತ್ತು ಸ್ವಾತಂತ್ರ್ಯದ
ಹೊಸ ಉತ್ಸಾಹ' ೪೨
ಸ್ವತಂತ್ರ ರಾಜ್ಯಕ್ಕೆ ನಿಜಾಮನ ನಿಯೋಗ: ಕ್ಯಾಬಿನೆಟ್ ಮಿಷನ್‌ಗೆ
ನಿಜಾಮನ ಮನವಿ ೪೨
ಬ್ರಿಟಿಷ್ ಸರಕಾರದ ಪ್ರಕಟಣೆ: ವೈಸರಾಯ್ ಆಗಿ
ಮೌಂಟ್ ಬ್ಯಾಟನ್ ಆಗಮನ ೪೭
ನಿಜಾಮನ ತಟಸ್ಥ ನೀತಿ: ಹೈದರಾಬಾದ್ ಸ್ವತಂತ್ರ
ರಾಜ್ಯ ಘೋಷಣೆ ೪೩
ರಾಜೀನಾಮೆ ಪರ್ವ ೪೬
ನಿಜಾಮನಿಗಿದ್ದ ಕುಮ್ಮಕ್ಕಿನ ಶಕ್ತಿಗಳು ೪೬
ಖಾಸಿಂ ರಜವಿ ಮತ್ತು ರಜಾಕಾರರು ೪೭
ಹದಗೆಟ್ಟ ಹೈದರಾಬಾದ್ ಮತ್ತು ವಿಮೋಚನೆಗಾಗಿ ಹೋರಾಟ ೪೮
ಆಪರೇಶನ್ ಪೋಲೋ: ಹೈದರಾಬಾದ್ ಪ್ರಾಂತ್ಯ
ಭಾರತದ ಒಕ್ಕೂಟಕ್ಕೆ ೪೯
ಆಕರ ಗ್ರಂಥಗಳು ೫೨
ಅಮೃತ ಮಹೋತ್ಸವ ಪ್ರಕಟಣೆ – ೭೫ ಕಿರುಪುಸ್ತಕಗಳ ಪಟ್ಟಿ ೫೩

# ಕೊಪ್ಪಳದ ಸ್ವಾತಂತ್ರ್ಯ ಹೋರಾಟದ ಚಟುವಟಿಕೆಗಳು

ಬೇರುಗಳು ಮರವನ್ನು ಗಟ್ಟಿಯಾಗಿ ಹಿಡಿದುಕೊಂಡಿದ್ದರೂ ಅವು ಮಾತ್ರ ಸದೃಶ್ಯವಾಗಿರುವುದಿಲ್ಲ. ನಮ್ಮ ನೆಲದ ಇತಿಹಾಸದ ಬೇರುಗಳೂ ಇದಕ್ಕೆ ಹೊರತಾಗಿಲ್ಲ. ಹಲವು ಪ್ರಕಾರದ ಐತಿಹ್ಯಗಳ ಆಧಾರದ ಮೇಲೆ ಒಂದು ಚಿತ್ರಣವನ್ನು ಪಡೆಯುತ್ತೇವೆಯಾದರೂ, ಅದು ಸಮಗ್ರವಾಗಿ ಲಭ್ಯವಾಗುವುದಿಲ್ಲ. ಕಿಡಕಿಯ ಮೂಲಕ ಕಾಣುವ ಆಕಾಶದ ಚಿತ್ರಣ ಕೇವಲ ಒಂದು ಭಾಗವಾಗಿರುತ್ತದೆಯೇ ಹೊರತು, ಇಡಿಯಾಗುವುದಿಲ್ಲ ಎನ್ನುವ ಅರಿವು ಇಟ್ಟುಕೊಂಡು ತಿರುಳ್ಗನ್ನಡ ನಾಡು ಕೊಪ್ಪಳ ಸ್ವಾತಂತ್ರ್ಯ ಹೋರಾಟದ ಚಟುವಟಿಕೆಗಳನ್ನು ಈ ಹೊತ್ತಿಗೆಯಲ್ಲಿ ಪ್ರಸ್ತುತ ಪಡಿಸಲು ಸಾಧ್ಯವಾದಷ್ಟೂ ಪ್ರಾಮಾಣಿಕ ಪ್ರಯತ್ನ ಮಾಡಿದ್ದೇನೆ.

ಕೊಪ್ಪಳವು ಹೈದರಾಬಾದ್–ಕರ್ನಾಟಕ ಪ್ರದೇಶದ ಆಡಳಿತಕ್ಕೆ ಒಳಪಟ್ಟು ನಿಜಾಮನ ಆಡಳಿತದಲ್ಲಿದ್ದ ಪ್ರದೇಶ. ಇಡೀ ಭಾರತಕ್ಕೆ ಭಾರತವೇ ಅಂದು ಆಗಸ್ಟ್ ೧೫, ೧೯೪೭ ರಂದು ಸ್ವಾತಂತ್ರ್ಯ ಪಡೆದ ಸಂಭ್ರಮದಲ್ಲಿದ್ದಾಗ ನಮ್ಮ ಪ್ರದೇಶಗಳು ಜೀವಂತ ಶವಗಳಂತಾಗಿದ್ದವು. ಸ್ವಾತಂತ್ರ್ಯ ಪಡೆಯಲೂ ನಾವು ಎರಡೆರಡು ಸಲ ಹೋರಾಟ ಮಾಡಬೇಕಾಯಿತು. ಮೊದಲನೆಯದು ಬ್ರಿಟಿಷರ ವಿರುದ್ಧ ಮತ್ತು ಎರಡನೆಯದು ನಿಜಾಮನ ವಿರುದ್ಧ. ಮೊದಲನೆಯದು 'ಸ್ವಾತಂತ್ರ್ಯ ಹೋರಾಟ'ವೆಂದು ದಾಖಲಾದರೆ, ಎರಡನೆಯದ್ದು 'ವಿಮೋಚನೆ' ಎಂಬ ಹೆಸರು ಪಡೆಯಿತು. ಶಬ್ದಗಳು, ಅರ್ಥಗಳು ಬೇರೆ ಬೇರೆಯಾದರೂ – ಈ ಪ್ರದೇಶಗಳ ಗುರಿ ಒಂದೇ ಆಗಿತ್ತು – ಅದು ಬೆಳಕು ಪಡೆಯುವುದು, ನೆಮ್ಮದಿಯ ನಿಟ್ಟುಸಿರು ಹೊಂದುವುದು, ರಕ್ತಸಿಕ್ತ ಚರಿತ್ರೆಗೆ ಮುಕ್ತಾಯ ಹೇಳಿ ಪ್ರಜಾಪ್ರಭುತ್ವದ ರಥವನ್ನು ಎಳೆಯುವುದು.

ಈಸ್ಟ್ ಇಂಡಿಯಾ ಕಂಪೆನಿ ವ್ಯಾಪಾರದ ಪರವಾನಿಗೆ ಪಡೆದು, ದೇಶೀಯ ರಾಜರ ದುರ್ಬಲತೆಯ ಲಾಭದ ಫಲವಾಗಿ ಗಟ್ಟಿಯಾದ ನೆಲೆಯೂರಿದರು. ೧೭ ಮತ್ತು ೧೮ ನೆಯ ಶತಮಾನದಲ್ಲಿ ಬ್ರಿಟಿಷ್ ಕಂಪೆನಿ ಆಡಳಿತದ ವಿರುದ್ಧ ಕೆಲ ಗಟ್ಟಿ ಬಂಡಾಯವನ್ನು ದೇಶೀ ರಾಜರು ತೋರಿದ್ದರೂ, ಬಹುಶಃ ಆ ಹೋರಾಟಗಳು ಬ್ರಿಟಿಷರನ್ನು (ಕಂಪೆನಿಯನ್ನು) ಈ ನೆಲದಿಂದ ಕಾಲ್ಕಿಳಿಸುವ ಉದ್ದೇಶ ಇರಲಿಕ್ಕಿಲ್ಲ. ೧೮೦೦ ರ ಸುಮಾರಿಗೆ ಬಹುತೇಕ ಭಾರತ (ಈಗಿನ ಪಾಕಿಸ್ತಾನ ಮತ್ತು ಬಾಂಗ್ಲಾದೇಶ ಒಳಗೊಂಡು) ಕಂಪೆನಿಯ ಕೈವಶವಾಗಿ, ಕೆಲವು ರಾಜರು ಅವರ ಪರವಾಗಿಯೇ ಇದ್ದರು. ಬ್ರಿಟಿಷ್ ಕಂಪೆನಿಯ ವಿರುದ್ಧ ೧೮೫೭ ರಲ್ಲಿ ನಡೆದ 'ಸಿಪಾಯಿ ದಂಗೆ' ಭಾರತೀಯರ 'ಮೊದಲ ಸ್ವಾತಂತ್ರ್ಯ ಸಂಗ್ರಾಮ'ವಾಗಿತ್ತು. 'ಸ್ವಾತಂತ್ರ್ಯ'ದ ನಿಜವಾದ ಅರ್ಥ ಮತ್ತು ಬ್ರಿಟಿಷ್ ಕಂಪೆನಿ ಆಳುತ್ತಿರುವುದು 'ನಮ್ಮ ನೆಲ', ನಾವು 'ಪರಾಧೀನ'ದಲ್ಲಿರುವ ಪರಿಕಲ್ಪನೆಯು ಇಡೀ ಭರತ ಖಂಡಕ್ಕೆ ಸಾರ್ವತ್ರಿಕವಾಗಿ ಮನದಟ್ಟಾಯಿತು. ನಂತರದ ಬೆಳವಣಿಗೆಯಲ್ಲಿ ಕಂಪೆನಿಯಿಂದ ಅಧಿಕಾರವನ್ನು ನೇರವಾಗಿ ಬ್ರಿಟನ್ ರಾಣಿ ತನ್ನ ಕೈಗೆ ತೆಗೆದುಕೊಂಡಾಗ ಬೆಂಕಿಯಿಂದ ಬಾಣಲೆಗೆ ಬಿದ್ದ ಪರಿಸ್ಥಿತಿ ನಮ್ಮದಾಗಿತ್ತು.

೧೮೫೭ ಕ್ಕಿಂತಲೂ ಮೊದಲು ಬ್ರಿಟಿಷ್ ಕಂಪನಿಯ ವಿರುದ್ಧ ನಡೆದ ಹೋರಾಟಗಳು, ಸಶಸ್ತ್ರ ಬಂಡಾಯಗಳು, ಚಳವಳಿಗಳು ಆಯಾ ಪ್ರದೇಶಗಳಿಂದ ಬ್ರಿಟಿಷ್ ಕಂಪೆನಿಯವರನ್ನು ಹೊರದಬ್ಬುವುದೇ ಆಗಿದ್ದವೆಂದರೆ ತಪ್ಪಾಗಲಿಕ್ಕಿಲ್ಲ. ಆ ದಿಸೆಯಲ್ಲಿ ೧೮೫೭ ಕ್ಕಿಂತಲೂ ಮೊದಲು ನಡೆದ ಕೊಪ್ಪಳ ಪ್ರದೇಶದ, ಕೊಪ್ಪಳ ಪ್ರಾಂತದ ಹೋರಾಟಗಳು ಬ್ರಿಟಿಷರ ವಿರುದ್ಧ ನಡೆದ ಸ್ವಾತಂತ್ರ್ಯ ಹೋರಾಟದ ಮೊದಲ ಹೆಜ್ಜೆಗಳೆಂದು ಪರಿಗಣಿಸಬಹುದು.

## ಮೊದಲ ಹೆಜ್ಜೆ : ಟಿಪ್ಪುಸುಲ್ತಾನನ ಹೋರಾಟ

ಕೊಪ್ಪಳದ ಸ್ವಾತಂತ್ರ್ಯ ಹೋರಾಟದ ಮೊದಲ ಹೆಜ್ಜೆಗಳಲ್ಲಿ ಟಿಪ್ಪು ಸುಲ್ತಾನನ ಗುರುತುಗಳನ್ನು ಕಾಣುತ್ತೇವೆ. ಕೊಪ್ಪಳ ಮತ್ತು ಬಹಾದ್ದೂರ ಬಂಡಿಯ ಕೋಟೆಗಳು ಟಿಪ್ಪುವಿನ ಅಧೀನದಲ್ಲಿದ್ದವು. ೧೭೯೯ ರಲ್ಲಿ ನಾಲ್ಕನೇ ಆಂಗ್ಲೋ–



ಮೈಸೂರು ಯುದ್ಧದಲ್ಲಿ ಬ್ರಿಟಿಷರ ವಿರುದ್ದ ಹೋರಾಡಿ ಮಡಿದ ಟಿಪ್ಪು ಸುಲ್ತಾನನ ಹೋರಾಟದಲ್ಲಿ ಸಹಜವಾಗಿ ಕೊಪ್ಪಳ ಮತ್ತು ಬಹದ್ದೂರ ಬಂಡಿಯ ಕೋಟೆಯಲ್ಲಿದ್ದು ಆಡಳಿತ ನಡೆಸುತ್ತಿದ್ದ ಆತನ ಸುಬೇದಾರರೂ ಭಾಗವಹಿಸಿದ್ದರು.

## ಜಮೀನುದಾರ ವೀರಪ್ಪ ದೇಸಾಯಿಯವರ ಸಶಸ್ತ್ರ ಬಂಡಾಯ – ೧೮೧೯

ಟಿಪ್ಪುವಿನ ಮರಣಾನಂತರ ಲಾರ್ಡ್ ವೆಲ್ಲೆಸ್ಲಿಯು ಮೈಸೂರಿನ ಒಡೆಯರೊಂದಿಗೆ ೧೮೦೦ ರಲ್ಲಿ ಮಾಡಿಕೊಂಡ ಒಪ್ಪಂದದಂತೆ ಕಡಪಾ, ಕರ್ನೂಲು, ಅನಂತಪುರ ಮತ್ತು ಬಳ್ಳಾರಿ ಪ್ರದೇಶಗಳನ್ನು ಆಂಗ್ಲರಿಗೆ ಮತ್ತು ಟಿಪ್ಪುವಿನ ವಿರುದ್ಧ ನಡೆದ ಹೋರಾಟದಲ್ಲಿ ತಮಗೆ ಸಹಾಯ ಮಾಡಿದ ಹೈದರಾಬಾದಿನ ನವಾಬನಾದ ನಿಜಾಮ ಅಲಿ ಖಾನನಿಗೆ ಗುತ್ತಿ ಮತ್ತು ದೋ–ಆಬ್ ಪ್ರದೇಶ (ರಾಯಚೂರು) ಜಿಲ್ಲೆಯನ್ನು ನೀಡುವಂತಾಯಿತು. ಹೀಗಾಗಿ ರಾಯಚೂರು ಜಿಲ್ಲೆಯ ಅಧೀನದಲ್ಲಿದ್ದ ಕೊಪ್ಪಳವು ಹೈದರಾಬಾದ್–ಕರ್ನಾಟಕದ ಶಾಶ್ವತ ಪ್ರದೇಶವಾಗಿ, ನಿಜಾಮನ ಆಡಳಿತಕ್ಕೆ ಒಳಪಟ್ಟಿತು.

ನಂತರದಲ್ಲಿ ಹೈದರಾಬಾದ್ ನಿಜಾಮನ ಅಧಿಕಾರಿಗಳು ಕೊಪ್ಪಳ ಭಾಗದಲ್ಲಿ ತಮ್ಮ ಅಧಿಕಾರದ ದುರ್ನಡತೆಯನ್ನು ಪ್ರದರ್ಶಿಸಿ, ಈ ಭಾಗದ ಪ್ರತಿಷ್ಠಿತ ದೇಸಾಯಿ ಮನೆತನದ ವೀರಪ್ಪ ದೇಸಾಯಿಯವರಿಗೆ ಗೌರವ ಕೊಡಲಿಲ್ಲ. ಜನಸಾಮಾನ್ಯರಿಗೂ ತೆರಿಗೆ ಸಂಗ್ರಹಿಸುವಾಗ ವಿವಿಧ ರೀತಿಯಲ್ಲಿ ತೊಂದರೆ ಕೊಡುತ್ತಿದ್ದರು. ನಿಜಾಮನ ಅಧಿಕಾರಿಗಳ ದರ್ಪ, ದಬ್ಬಾಳಿಕೆಗೆ ಬೇಸತ್ತು ಕೊಪ್ಪಳ ಮತ್ತು ಬಹದ್ದೂರ ಬಂಡಿಯ ಕೋಟೆಗಳನ್ನು ತನ್ನ ವಶಕ್ಕೆ ತೆಗೆದುಕೊಂಡ ವೀರಪ್ಪ ದೇಸಾಯಿ ನಿಜಾಮರ ವಿರುದ್ಧ ಆ ಮೂಲಕ ನಿಜಾಮರ ಪೋಷಕರಾಗಿದ್ದ ಬ್ರಿಟಿಷರ ವಿರುದ್ಧ ಸಮರ ಸಾರುವಂತಾಯಿತು.

ಮಹಾರಾಜಾಧಿರಾಜ ಬಿರುದಾಂಕಿತ ಗಟ್ಟಿ ಕಲಕೇರಿ ದೇಸಾಯಿ ಮನೆತನದ ಆರನೆಯ ಮಲ್ಲಪ್ಪ ದೇಸಾಯಿಯವರ ಹಿರಿಯ ಮಗನೇ ವೀರಪ್ಪ ದೇಸಾಯಿ. ಸುಸಂಸ್ಕೃತ ವ್ಯಕ್ತಿತ್ವದ, ಸದಾಚಾರ ಸಂಪನ್ನರು. ಕಲಕೇರಿ ಸೀಮೆಯ ಬಹದ್ದೂರರಾಗಿದ್ದರು. ಅಗರ್ಭ ಶ್ರೀಮಂತರು, ಮಹಾಸ್ವಾಭಿಮಾನಿಗಳು.

ಇವರ ಅಧೀನದಲ್ಲಿದ್ದ ಪರಗಣಗಳಾದ ಗದಗ, ಉಡಕುಂದಿ, ಸಿಂಧನೂರು, ಬಾದಾಮಿ ಪ್ರದೇಶಗಳನ್ನು ಪೇಶ್ವೆಯರು ವಶಪಡಿಸಿಕೊಂಡಿದ್ದರು. ವೀರಪ್ಪ ದೇಸಾಯಿಯವರು ತಮ್ಮ ಬಿಡದ ಪ್ರಯತ್ನದ ಕಾರಣ ಮರಳಿ ಈ ಪ್ರದೇಶಗಳನ್ನು ಪಡೆದುಕೊಳ್ಳುವಲ್ಲಿ ಯಶಸ್ವಿಯಾಗುತ್ತಲೇ, ನಿಜಾಮನ ಪ್ರಭಾವ ಕಡಿಮೆಯಾಗಹತ್ತಿತು. ನಿಜಾಮ ಸೈನ್ಯ ಏಕಾಂಗಿಯಾಗಿ ವೀರಪ್ಪ ದೇಸಾಯಿಯವರ ಬಂಡಾಯವನ್ನು ತಡೆಯಲು ಅಶಕ್ತವಾಯಿತು.

ಇದೇ ಸಂದರ್ಭದಲ್ಲಾದ ೩ ನೇ ಆಂಗ್ಲೋ–ಮರಾಠ (೧೮೧೭–೧೯) ಯುದ್ಧದಲ್ಲಿ ಕಲಕೇರಿ ದೇಸಾಯಿಯವರು ಮರಾಠರಿಗೆ ಸೈನ್ಯದ ಸಹಾಯವನ್ನು ಒದಗಿಸಿದರು. ಒಂದು ಕಡೆ ನಿಜಾಮರ ಪ್ರದೇಶದಲ್ಲಿ ವೀರಪ್ಪ ದೇಸಾಯಿಯವರ ಪ್ರಭಾವ ಹೆಚ್ಚಳ ಮತ್ತೊಂದು ಕಡೆ ಮರಾಠರಿಗೆ ವೀರಪ್ಪ ದೇಸಾಯಿಯವರು ಮಾಡಿದ ಸಹಾಯದಿಂದ ಕುಪಿತರಾದ ಬ್ರಿಟಿಷರು ಕಲಕೇರಿ ಸಂಸ್ಥಾನದ ಡಂಬಳ ಮತ್ತು ಗದಗ ವಶಪಡಿಸಿಕೊಳ್ಳುತ್ತಲೇ ವೀರಪ್ಪ ದೇಸಾಯಿ ಬಂಡೆದ್ದನು. ನಿಜಾಮ ಸೇನೆಯ ಸಂರಕ್ಷಣೆಯ ಹೊಣೆ ಹೊತ್ತಿದ್ದ ಬ್ರಿಟಿಷರು ನಿಜಾಮ ಸೈನ್ಯದ ಜೊತೆಗೂಡಿ ವೀರಪ್ಪ ದೇಸಾಯಿಯವರ ಅಧೀನದಲ್ಲಿದ್ದ ಕೊಪ್ಪಳ ಮತ್ತು ಬಹದ್ದೂರ ಬಂಡಿಯ ಕೋಟೆಗಳನ್ನು ವಶಪಡಿಸಿಕೊಳ್ಳಲು ಹೊಂಚು ಹಾಕುತ್ತಾರೆ.

ಆಗ ನಡೆದದ್ದೇ ಒಂದು ಘನಘೋರ ಹೋರಾಟ. ಈ ಸಶಸ್ತ್ರ ಬಂಡಾಯ ಈ ನೆಲದ ಸ್ವಾಭಿಮಾನದ ಸಂಕೇತ. ಇಚ್ಛಾಶಕ್ತಿಯ ಕೊರತೆಯಿಂದ ಈ ಹೋರಾಟದ ವಿಸ್ತಾರತೆ, ಹೋರಾಟದ ವ್ಯಾಪಕತೆಗೆ ಹೆಚ್ಚು ಮಹತ್ವ ನೀಡಲಾಗಿಲ್ಲ. ಕೇವಲ ಒಂದಿಷ್ಟು ಸಾಲುಗಳ ಸ್ಥಳೀಯ ಇತಿಹಾಸದ ಭಾಗವಾಗಿ ಹೋಗಿದ್ದು ಬಹುದೊಡ್ಡ ದುರಂತ.

ಬ್ರಿಗೇಡಿಯರ್ ಜನರಲ್ ಪ್ರಿಟ್ಜಲರ್ ನೇತೃತ್ವದ ತಂಡವು ಸೈನಿಕ ಕಾರ್ಯಾಚರಣೆ ಮೂಲಕ ವೀರಪ್ಪ ದೇಸಾಯಿಯವರ ಬಂಡಾಯ ಹತ್ತಿಕ್ಕಲು ಕೊಪ್ಪಳದ ಕಡೆ ಧಾವಿಸುತ್ತದೆ. ಕ್ಯಾಪ್ಟನ್ ಹಾಕಿನ್ಸ್ ಡೇವಿಸ್, ಲೆಫ್ಟಿನೆಂಟ್ ಜಾರ್ಜ್ ಜೊತೆಗೆ ಹೈದರಾಬಾದ್ ನಿಜಾಮನ ಅಧಿಕಾರಿಯಾಗಿದ್ದ ಎಡ್ರೋಸ್ ಖಾನ್ ಈ ಕಾರ್ಯಾಚರಣೆ ಹೊಣೆ ಹೊತ್ತ ಪ್ರಮುಖರು.



ಬ್ರಿಟಿಷರು ತಮ್ಮ ಅಧೀನದಲ್ಲಿದ್ದ ಗದಗ–ಡಂಬಳದ ಮೂಲಕ ಅಳವಂಡಿಯಲ್ಲಿ ಮೇ ೭, ೧೮೧೯ ರಂದು ಬಿಡಾರ ಹೂಡಿದರು. ಯುದ್ಧ ನೈಪುಣ್ಯತೆಯಲ್ಲಿ ಪಳಗಿದ್ದ ಬ್ರಿಟಿಷರು ಅಳವಂಡಿಯಲ್ಲಿ ಬಿಡಾರ ಹೂಡಲೂ ಒಂದು ಕಾರಣವಿತ್ತು. ವೀರಪ್ಪ ದೇಸಾಯಿಯವರ ಊರು ಕಲಕೇರಿಯಿಂದ ಕೊಪ್ಪಳಕ್ಕೆ ಅಳವಂಡಿ ಮಾರ್ಗವಾಗಿಯೇ ಬರಬೇಕಾಗಿತ್ತು. ಆದ್ದರಿಂದ ಅಳವಂಡಿಯಲ್ಲಿ ಠಿಕಾಣಿ ಹೂಡಿದರೆ ಕಲಕೇರಿಯಿಂದ ಕೊಪ್ಪಳಕ್ಕೆ ಸಿಗಬಹುದಾದ ಸೈನ್ಯದ ಮತ್ತಿತರ ನೆರವನ್ನು ತಪ್ಪಿಸಲು ಈ ಯೋಜನೆ ರೂಪಿಸಲಾಗಿತ್ತು.

ಮರುದಿನ, ಮೇ ೮ ರಂದು ಬ್ರಿಟಿಷ್ ಸೈನ್ಯದ ಒಂದು ತುಕಡಿ ಅಳವಂಡಿಯಲ್ಲಿಯೇ ಕಾವಲಿಗೆ ಉಳಿದು, ಮತ್ತೊಂದು ತುಕಡಿ ಕೊಪ್ಪಳಕ್ಕೆ ಧಾವಿಸಿ ಕೊಪ್ಪಳ ಕೋಟೆಯ ಎದುರು ಬಿಡಾರ ಹಾಕುತ್ತಿದ್ದಂತೆಯೆ ಬ್ರಿಟಿಷರ ಯುದ್ಧದ ಸಿದ್ಧತೆ ಚುರುಕಾಯಿತು.

ಕೇವಲ ೫೦೦ ಯೋಧರ ಸೈನ್ಯವನ್ನು ಹೊಂದಿದ್ದ ವೀರಪ್ಪ ದೇಸಾಯಿಯವರು ಸ್ವಾಭಿಮಾನ ಮತ್ತು ಕೆಚ್ಚೆದೆಯಿಂದ ಯುದ್ಧಕ್ಕೆ ಸಿದ್ಧವಾಗಿದ್ದರು. ಎತ್ತರದ ಕೊಪ್ಪಳ ಕೋಟೆಯ ಗುಡ್ಡದ ಮೇಲೆ ಸುಭದ್ರವಾಗಿ ನೆಲೆಸಿದ್ದರು. ವೀರಪ್ಪನವರ ಸಹೋದರ ಸೋಮಪ್ಪ ದೇಸಾಯಿ ಮತ್ತು ಬ್ರಿಗೇಡಿಯರ್ ಪ್ರಿಟ್ಜಲರ್ ನಡುವೆ ಮಾತುಕತೆ ವಿಫಲವಾಯಿತೆಂಬ ಮಾತುಗಳಿವೆ. ಕೆಚ್ಚೆದೆಯಿಂದ ತೋಪುಗಳ ಮೂಲಕ ಬಾಂಬುಗಳನ್ನು ವೀರಪ್ಪ ದೇಸಾಯಿಯವರ ಸೈನ್ಯ ಕೋಟೆಯ ಒಳಗಿಂದ ಸಿಡಿಸಲು ಆರಂಭಿಸಿತು. ಇದರಿಂದ ತುಂಬ ಒತ್ತಡ ಮತ್ತು ತೊಂದರೆ ಅನುಭವಿಸಿದ ಬ್ರಿಟಿಷ್ ಸೇನೆ ಸಾವರಿಸಿಕೊಂಡು ಹಂತ ಹಂತವಾಗಿ ಕೋಟೆಯ ಗೋಡೆಗಳನ್ನು ಒಡೆಯುತ್ತ ಹೋಯಿತಾದರೂ, ಎತ್ತರ ಗುಡ್ಡದ ಭದ್ರಕೋಟೆಯೊಳಗೆ ಕೆಳಗಿನಿಂದ ದಾಳಿ ಮಾಡುವ ಅಸಹಾಯಕತೆಗೆ ಒಳಗಾಗಿ ಮತ್ತೊಂದಿಷ್ಟು ಸುಸಜ್ಜಿತ ಸೈನ್ಯಕ್ಕಾಗಿ ಮೊರೆ ಹೋಗಲಾಯಿತು.

ಈ ನಡುವೆ ಕೊಪ್ಪಳ ಕೋಟೆಗೆ ಹೋಲಿಕೆ ಮಾಡಿದರೆ ಅಷ್ಟೇನು ಭದ್ರವಾಗಿಲ್ಲದ ಬಹದ್ದೂರ ಬಂಡಿಯ ಕೋಟೆಯನ್ನು ನಿಜಾಮನ ಸೇನಾಧಿಕಾರಿ ಮಹಮದ್ ಎಡ್ರೋಸ್ ಖಾನ್ ತನ್ನ ಮುಂದಾಳತ್ವದಲ್ಲಿ ಮುತ್ತಿಗೆ ಹಾಕಿ,

ವೀರಪ್ಪ ದೇಸಾಯಿಯವರ ಸೈನ್ಯಾಧಿಕಾರಿಯಾಗಿದ್ದ, ಅವರ ತಮ್ಮ ಸೋಮಪ್ಪ ದೇಸಾಯಿಯನ್ನು ಸೆರೆ ಹಿಡಿದ.

ಮೇ ೮ ರಂದೇ ಕೊಪ್ಪಳ ಕೋಟೆಯೆದುರು ಬಿಡಾರ ಹೂಡಿದರೂ, ಫಲ ದೊರಕದ ಸ್ಥಿತಿಯಲ್ಲಿದ್ದ ಬ್ರಿಟಿಷ್ ಸೈನ್ಯಕ್ಕೆ ನೆರವಾಗಲು ಮೇಜರ್ ಡೋವಿಶನ್ ನೇತೃತ್ವದಲ್ಲಿ ಸಿಕಂದರಾಬಾದಿನಿಂದ ೨೦೦ ಕುದುರೆಗಳ ಕುದುರೆ ದಳ, ಎರಡು ಬಟಾಲಿಯನ್ ಪದಾತಿ ದಳ, ಸಾವಿರದಷ್ಟು ಸುಸಜ್ಜಿತ ಸವಾರಿ ಸೈನಿಕರು, ೧೨ ರಿಂದ ೧೮ ಪೌಂಡ್ ತೂಕದವರೆಗಿನ ಗುಂಡು ಹಾರಿಸುವ ತೋಪುಗಳು ಮೇ ೨೩ ರಂದು ಕೊಪ್ಪಳ ಕೋಟೆಯೆದುರು ಬಂದು ನಿಂತಿತು. ಕ್ಯಾಪ್ಟನ್ ಕೋನ್ಸ್‌ನ ಮುಂದಾಳತ್ವದಲ್ಲಿಯೂ ಮದ್ರಾಸ್ ಸೈನ್ಯದ ಎರಡು ತುಕಡಿಗಳು ಬ್ರಿಟಿಷ್ ಸೈನ್ಯವೂ ಜೊತೆಯಾಯಿತು ಎಂದರೆ ವೀರಪ್ಪ ದೇಸಾಯಿಯವರ ಬಲಿಷ್ಠತೆ ಮತ್ತು ಯುದ್ಧದ ತಂತ್ರಗಾರಿಕೆಗೆ ಬ್ರಿಟಿಷರು ಹೆದರಿದ್ದು ಎದ್ದು ಕಾಣುತ್ತದೆ.

ಈ ಕಡೆ ಮೇ ೧೪ ರಂದು, ವೀರಪ್ಪ ದೇಸಾಯಿಯವರು ಎಡ್ರುಸ್ ಖಾನ್‌ನಿಗೆ ಪತ್ರ ಸಂದೇಶ ಕಳುಹಿಸಿ, ತನ್ನ ಕರಾರುಗಳಿಗೆ ಒಪ್ಪಬೇಕೆಂದು ಆಗ್ರಹ ಮಾಡುತ್ತಾನೆ. ಕರಾರಿಗೆ ಒಪ್ಪದಿದ್ದರೆ ಯುದ್ಧ ಮುಂದುವರಿಸುವುದಾಗಿಯೂ ಘೋಷಿಸುತ್ತಾನೆ.

ಸಣ್ಣ ಸೈನ್ಯ ಇಟ್ಟುಕೊಂಡ, ಕರಾರುವಕ್ಕಾದ ತಂತ್ರದ ಎದುರು ಅಚ್ಚರಿ ಮತ್ತು ದಿಗ್ಭ್ರಾಂತರಾದ ಬ್ರಿಟಿಷರು ಗುಡ್ಡವೇರಿ ಎತ್ತರದ ಕೊಟೆ ತಲುಪಲು ಕುದುರೆ, ಪ್ರಬಲ ಸವಾರರನ್ನು ಬಳಸಿಕೊಳ್ಳುತ್ತ ಹಂತ ಹಂತವಾಗಿ ಕೋಟೆಯ ತುದಿಯತ್ತ ದಾಪುಗಾಲಿಡುತ್ತಿದ್ದರು. ಮದ್ದುಗುಂಡುಗಳು ಮುಗಿಯುತ್ತ ಬಂದರೂ, ಧೃತಿಗೆಡದ ವೀರಪ್ಪ ದೇಸಾಯಿ ಸೈನ್ಯ ಮೇಲಿನಿಂದ ಕಲ್ಲು–ಗುಂಡುಗಳನ್ನುರುಳಿಸುತ್ತ ಎದುರಾಳಿಗಳ ದಿಕ್ಕು ತಪ್ಪಿಸುವ ಪರಿ ರೋಮಾಂಚಕವಾದುದು. ಹೊಸದಾಗಿ ತರಿಸಿಕೊಂಡ ತೋಪುಗಳ ಮೂಲಕ ಕೋಟೆಯ ಗೋಡೆ ಛಿದ್ರಗೊಳಿಸಿದ ಬ್ರಿಟಿಷರು ಪ್ರಬಲವಾಗುತ್ತ ನಡೆದದ್ದು ಕಂಡು ವೀರಪ್ಪ ದೇಸಾಯಿ ಕುದುರೆ ಏರಿ, ಗುಡ್ಡದ ಇಳಿಜಾರಿನಿಂದ, ದುರ್ಗಮ ದಾರಿಯಲ್ಲಿಯೂ ತಪ್ಪಿಸಿಕೊಂಡು ಹೋಗುತ್ತಾರೆ. ಬ್ರಿಟಿಷರು ಸಿಡಿಸಿದ ಗುಂಡು ಕಾಲಿಗೆ ತಗುಲಿ ಗಾಯವಾಗುತ್ತದೆ.



ಕಡೆಗೂ ತೀಕ್ಷ್ಣತೆ ಮತ್ತು ವೇಗತ್ವದ ಚಾಣಾಕ್ಷತೆಯಿಂದ ಬ್ರಿಟಿಷರ ಕೈಯಿಂದ ತಪ್ಪಿಸಿಕೊಂಡು ಸೈನ್ಯದೊಂದಿಗೆ ಪರಾರಿಯಾಗುತ್ತಾರೆ. ಇಲ್ಲಿಂದ ಹಲವು ರೋಚಕ ಕತೆಗಳು ಆರಂಭವಾಗುತ್ತವೆ. ಆನಂತರ ಅವರು ಏನಾದರೆಂಬ ನಿಖರತೆ ಬಹುಕಾಲದವರೆಗೂ ಪ್ರಶ್ನೆಯಾಗಿಯೇ ಉಳಿದಿತ್ತು. ನಿಜಾಮನು ಇವರನ್ನು ಕೊಲ್ಲಿಸಿದರೆಂದು ನಂಬಲಾಗಿತ್ತಾದರೂ, ಇತ್ತೀಚಿಗೆ ಇವರ ಮನೆತನದವರ ಆಸಕ್ತಿ ಮತ್ತು ಕಾಳಜಿಯ ಕಾರಣ ನಡೆಸಲಾದ ಸಂಶೋಧನೆಯಲ್ಲಿ ಕೊಪ್ಪಳ ಕೋಟೆಯಿಂದ ಶಿವಪುರಕ್ಕೆ ಹೋದರೆಂದು, ಶಿವಪುರದ ರೈತರು ಇವರಿಗೆ ಬಹುದೊಡ್ಡ ಸಹಾಯ ಮಾಡಿದರು ಎಂದು ತಿಳಿದು ಬರುತ್ತದೆ. ಶಿವಪುರವೆಂದರೆ ಈಗಿನ ಸುರಪುರ. ಅಲ್ಲಿಂದ ಕೆಲವು ದಿನಗಳ ನಂತರ ಮರಳಿ ಹುಟ್ಟೂರು ಕಲಕೇರಿಗೆ ಬಂದು, ಆನಂತರ ಸುತ್ತ–ಮುತ್ತಲ ಹಳ್ಳಿಗಳಲ್ಲಿ ಸೈನ್ಯದ ತುಕಡಿ ರಚಿಸಿಕೊಂಡು ಕಿತ್ತೂರಿಗೆ ಹೋಗಿ ಕಿತ್ತೂರಿನ ಅರಸ ಮಲ್ಲರುದ್ರಸರ್ಜನ ಜೊತೆ ಕೂಡಿಕೊಂಡು ಬ್ರಿಟಿಷರ ವಿರುದ್ದ ಸೇಡು ತೀರಿಸಿಕೊಂಡರೆಂಬ ಪ್ರತೀತಿ ಇದೆ.  ಮಲ್ಲಸರ್ಜನ ನಂತರ ಕಿತ್ತೂರು ಚೆನ್ನಮ್ಮರೊಂದಿಗೂ ಕೂಡಿ ಕಿತ್ತೂರು ಸ್ವತಂತ್ರವಾಗಲು ಹೋರಾಡಿದರೆಂಬ ಮಾತುಗಳಿವೆ. ಇವರ ನೆಲದ ಅಭಿಮಾನ, ಸ್ವಾಭಿಮಾನ ಯಾವೊಬ್ಬ ಹೋರಾಟಗಾರನಿಗಿಂತಲೂ ಕಡಿಮೆ ಇಲ್ಲ. ಇನ್ನಿಲ್ಲದ ದೂರ ನೆಲದ ರಾಬಿನ್‌ಹುಡ್ ಕುರಿತು ಮಾತನಾಡುವ, ಓದುವ, ಬರೆಯುವ ನಾವು ನಮ್ಮ ನೆಲದ ನಿಜವಾದ ಸ್ವಾಭಿಮಾನಿ ರಾಬಿನ್‌ವುಡ್‌ನನ್ನು ನೆನೆಯುವುದೇ ಇಲ್ಲ.

## ಮುಂಡರಗಿ ಭೀಮರಾಯರ ಹೋರಾಟ

ಸ್ವಾಭಿಮಾನಕ್ಕೆ ಧಕ್ಕೆ ಬಂದರೆ ಈ ನೆಲದ ಜನ ಸಹಿಸುವುದಿಲ್ಲ ಎನ್ನುವುದಕ್ಕೆ ಜಮೀನುದಾರರ ವೀರಪ್ಪ ದೇಸಾಯಿಯವರ ನಂತರ ಹೋರಾಟದ ಸಾಕ್ಷಿಯಾಗಿ ಬ್ರಿಟಿಷರ ವಿರುದ್ಧ ಎದೆಗುಂದದೆ ಹೋರಾಡಿದವರಲ್ಲಿ ಮುಂಡರಗಿ ಭೀಮರಾಯರು  ಪ್ರಮುಖರು.

ಪೇಶ್ವೆಯವರ ಆಡಳಿತಾವಧಿಯಲ್ಲಿ ಪೇಶ್ವೆಯವರು ತಮಗೆ ನಿಷ್ಠರಾಗಿದ್ದ ದೇಸಾಯಿ, ದೇಶಪಾಂಡೆ, ದೇಶಮುಖ, ಜಹಗೀರದಾರ, ಪಾಟೀಲ್, ಕುಲಕರ್ಣಿ,

ನಾಡಕರ್ಣಿ, ನಾಡಗೌಡರಿಗೆ ಆಯಾ ಪ್ರದೇಶಗಳ ಅಧಿಕಾರಗಳನ್ನು, ಜವಾಬ್ದಾರಿಗಳನ್ನು ನೀಡಿದ್ದರು. ಈ ಎಲ್ಲ ಮನೆತನದವರು ತಮ್ಮ ರಕ್ಷಣೆಗೆ ಸೈನ್ಯದ, ಕಾವಲುಗಾರರ ವ್ಯವಸ್ಥೆಯನ್ನು ಇಟ್ಟುಕೊಳ್ಳಬಹುದಾಗಿತ್ತು. ಇವರಿಗೆ ಸಾಕಷ್ಟು ಭೂಮಿ ನೀಡಿಕೆ ಜೊತೆಗೆ ಕರ ವಸೂಲಿ ಮಾಡುವ ಅಧಿಕಾರವನ್ನೂ ಪೇಶ್ವೆಯವರು ನೀಡಿದ್ದರು.

ಜಮೀನುದಾರ ವೀರಪ್ಪನವರ ಪತನದ ನಂತರ ಈ ಭಾಗ ಪೇಶ್ವೆಯವರ ಕೈಯಿಂದ ನಿಜಾಮರ, ಬ್ರಿಟಿಷರ ಕೈಗೆ ಬಂದಾಗ ಕಂಪೆನಿ ಸರಕಾರವು ತನ್ನ ಆದಾಯವನ್ನು ಹೆಚ್ಚಿಸಿಕೊಳ್ಳಬೇಕೆಂಬ ನೆಪದಲ್ಲಿ 'ಕರ್ನಲ್ ಎತ್ರಿಜನ್ ಇನಾಮ್ ಕಮೀಷನ್' ಜಾರಿಗೆ ಬಂತು. ಇದರ ಪ್ರಕಾರ ಮಾಮಲೇದಾರ, ಕಲೆಕ್ಟರ್, ಶೇಖ್, ಸನದಿ ಇಂತಹ ಹುದ್ದೆಗಳನ್ನು ಸೃಷ್ಟಿಸಿ ಹೆಚ್ಚಿನ ಕಂದಾಯ ವಸೂಲಿಗೆ ನಿಂತರು. ಈ ಮೊದಲು ಈ ಅಧಿಕಾರ ಹೊಂದಿದ್ದ ಜಾಗೀರದಾರ್, ದೇಸಾಯಿ, ದೇಶಪಾಂಡೆ, ಪಾಟೀಲ, ನಾಡಗೌಡ, ನಾಡಕರ್ಣಿ, ಕುಲಕರ್ಣಿ ಮನೆತನಗಳನ್ನು ಗುರಿಯಾಗಿಟ್ಟುಕೊಂಡು ಮಾನಸಿಕ ಕಿರುಕುಳ ನೀಡತೊಡಗಿದರು. ಅವರಿಗಿದ್ದ ಸವಲತ್ತುಗಳನ್ನು, ಸೈನ್ಯವನ್ನು ಇಟ್ಟುಕೊಳ್ಳಬಹುದಾಗಿದ್ದ ಅವರ ಸೌಲಭ್ಯವನ್ನು ಹಿಂತೆಗೆದುಕೊಂಡು, ಅವರ ಸೈನ್ಯವನ್ನು ಬ್ರಿಟಿಷರು ತಮ್ಮ ವಶ ಮಾಡಿಕೊಂಡರು. ಹೀಗಾಗಿ ಈ ಮನೆತನಗಳು ಮಿಸುಗಾಡದಂತಾಗಿ ಬ್ರಿಟಿಷರ ವಿರುದ್ಧ ಸಿಡಿದೆದ್ದರು.

ನರಗುಂದ ಸಂಸ್ಥಾನಿಕ ಬಾಬಾಸಾಹೇಬ ಮತ್ತು ಹಮ್ಮಿಗಿಯ ದೇಸಾಯಿ ಆಗಿದ್ದ ಕೆಂಚನಗೌಡರು ಅಥವಾ ಹಮ್ಮಿಗಿ ಕೆಂಚಪ್ಪ ದೇಸಾಯಿಯವರು ಬ್ರಿಟಿಷರ ವಿರುದ್ಧ ಬಂಡೆದ್ದರು. ಮುಂಡರಗಿ ಭೀಮರಾಯರು ಈ ಹೋರಾಟದಲ್ಲಿ ಪ್ರಮುಖ ಪಾತ್ರವನ್ನು ವಹಿಸಿದ್ದರು.

ಹಾಗೆ ನೋಡಿದರೆ ಮುಂಡರಗಿ ಭೀಮರಾಯ ಯಾವುದೇ ಸಂಸ್ಥಾನಿಕ ಮನೆತನದವರಲ್ಲ. ಸಂಸ್ಥಾನಿಕ ಮನೆತನಗಳು ಬಂಡಾಯವೇಳಲು ಸ್ವ–ಹಿತ ರಕ್ಷಣೆಯ ಕಾರಣವಾದರೂ ಇತ್ತು. ಆದರೆ ಭೀಮರಾಯರಿಗೆ ಇದ್ದದ್ದು ದೌರ್ಜನ್ಯವನ್ನು ಸಹಿಸಲಾರದಂತಹ ಮನೋಭಾವ. ಈ ನೆಲದ ಮೇಲೆ ಬ್ರಿಟಿಷರು ನಡೆಸಿದ ದೌರ್ಜನ್ಯ, ದಬ್ಬಾಳಿಕೆಗೆ ಪ್ರತೀಕಾರವಾಗಿ ಹೋರಾಟದ ಕಿಚ್ಚನ್ನು ರೂಢಿಸಿಕೊಂಡಿದ್ದ.



ಇವರ ಅಜ್ಜನ ಹೆಸರೂ ಭೀಮರಾಯ. ಇವರು ಡಂಬಳದ ದೇಸಾಯಿಯವರ ಸಲಹೆಗಾರರಾಗಿದ್ದರಂತೆ. ಬಹುಶಃ ಇವರ ಕೈ ಅಂಗವೈಕಲ್ಯವಿತ್ತೋ ಏನೋ ಅವರು 'ಮೊಂಡಗೈ' ಭೀಮರಾಯ ಎನ್ನುವ ಹೆಸರಿನಿಂದ ಪರಿಚಿತರಾಗಿದ್ದರು. ಅಜ್ಜನ ಕ್ರಾಂತಿಕಾರಿ ಗುಣಗಳೇ ಮೊಮ್ಮಗ ಭೀಮರಾಯನಿಗೂ ಬಂದಿದ್ದಿರಬೇಕು.

ಮುಂಡರಗಿ ಭೀಮರಾಯನ ತಂದೆ ಪೇಶ್ವೆ ಆಡಳಿತ ಅವಧಿಯಲ್ಲಿ ನ್ಯಾಯಾಧೀಶರಾಗಿದ್ದರೆಂಬ ಮಾತಿದೆ. ಭೀಮರಾಯನು ಉತ್ತಮ ವಿದ್ಯೆಯನ್ನು ಹೊಂದಿದ ಬಹುಮುಖ ಸಾಮರ್ಥ್ಯದ ವ್ಯಕ್ತಿಯಾಗಿದ್ದ. ಸಾಹಸದ ಕೆಲಸಗಳಲ್ಲಿ, ಶಿಕಾರಿಗಳಲ್ಲಿ ಉತ್ತಮ ಶೂಟರ್ ಆಗಿ ಹೆಸರು ಮಾಡಿದ್ದ. ಅದಕ್ಕಿಂತಲೂ ಮುಖ್ಯವಾಗಿ ಮುಂಡರಗಿ ಭೀಮರಾಯ ಬಳ್ಳಾರಿ ಮತ್ತು ಹರಪನಹಳ್ಳಿಗಳಲ್ಲಿ ತಹಶೀಲ್ದಾರ ಆಗಿಯೂ ಕೆಲಸ ಮಾಡಿದ್ದ. ಬ್ರಿಟಿಷರ ಅಧೀನದಲ್ಲಿ ಕೆಲಸ ಮಾಡುವುದು ಸರಿಯಲ್ಲ ಎಂದು ಬಗೆದ. ೧೮೫೭ ರಲ್ಲಿ ದಂಗೆಯ ನಂತರವಂತೂ ಬ್ರಿಟಿಷರ ಮೇಲೆ ಕೆಂಡ ಕಾರತೊಡಗಿದ.

ಬ್ರಿಟಿಷರ ಅಧೀನದಲ್ಲಿ ಐ.ಸಿ.ಎಸ್. ಅಧಿಕಾರಿಯಾಗಿ ಕೆಲಸ ಮಾಡಲು ಒಪ್ಪದೇ, ರಾಜೀನಾಮೆ ಕೊಟ್ಟು ದೇಶಕ್ಕೋಸ್ಕರ ಸ್ವಾತಂತ್ರ್ಯ ಹೋರಾಟ ಆರಂಭಿಸಿದ ಸುಭಾಷ್ ಚಂದ್ರ ಬೋಸ್‌ರಂತೆಯೇ ಮುಂಡರಗಿ ಭೀಮರಾಯರು ತಹಶೀಲ್ದಾರ್ ಹುದ್ದೆಯನ್ನು ತೊರೆದು ಬ್ರಿಟಿಷರ ವಿರುದ್ಧ ಈ ನೆಲದ ರಕ್ಷಣೆಗಾಗಿ ಹೋರಾಡಿದ ಮಹಾನುಭಾವ.

ಅದಿನ್ನೂ ಆಗಸ್ಟ್, ೧೮೫೭. ಸಿಪಾಯಿ ದಂಗೆಯು ಅಲ್ಲಲ್ಲಿ ಇನ್ನೂ ನಡೆಯುತ್ತಲೇ ಇತ್ತು. ಭೀಮರಾಯನು ಹಮ್ಮಿಗೆ ಕೆಂಚನಗೌಡ, ತನ್ನ ಅಜ್ಜ ಕೆಲಸ ಮಾಡಿದ್ದ ಮನೆತನ ಡಂಬಳದ ದೇಸಾಯಿ, ಗೋವಿನಕೊಪ್ಪದ ಸರನಾಡ ಗೌಡ ಅವರೊಂದಿಗೆ ಸ್ನೇಹ ಬೆಳೆಸಿ ನರಗುಂದದ ದೇಸಾಯಿ ಇವರೊಂದಿಗೆ ಸೇರಿ ಧಾರವಾಡ ಜಿಲ್ಲೆಯಲ್ಲಿ ರಹಸ್ಯ ಸಂಘಟನೆಯೊಂದಿಗೆ, ಸೂಕ್ಷ್ಮ ಜಾಲವನ್ನು ಸಿದ್ಧಪಡಿಸಿದನು. ಉತ್ತರ ಭಾರತದಿಂದ ಆಗಸ್ಟ್ ೧, ೧೮೫೭ ರಂದು ಸಿಪಾಯಿ ದಂಗೆಯ ಸಂದೇಶವೊಂದು ಧಾರವಾಡಕ್ಕೆ ಬಂದ ತಕ್ಷಣವೇ ಕೆರೆ ಕಟ್ಟಿಸುವ ಕಾರಣವೊಡ್ಡಿ ಭೀಮರಾಯನು ಡಂಬಳದಲ್ಲಿ ೪೦೦ ರಷ್ಟು ಜನರನ್ನು ಸೇರಿಸಿ

ಬಂಡಾಯದ ಸಿದ್ಧತೆ ಮಾಡಿಕೊಂಡನು. ಈ ವರದಿ ಪಡೆದುಕೊಂಡ ಬ್ರಿಟಿಷ್ ಕಲೆಕ್ಟರ್‌ನೊಬ್ಬ ಭೀಮರಾಯ ಮತ್ತು ಸೊರಟೂರು ದೇಸಾಯಿಯವರನ್ನು ಕರೆಸಿ ವಿಚಾರಣೆ ಮಾಡಿದ್ದನಂತೆ. ಮಾತಿನ ನಿಖರ ಉತ್ತರದ ಮೂಲಕ ಅಲ್ಲಿಂದ ಪಾರಾದ ಭೀಮರಾಯ ಮುಂದೆ ಐದಾರು ತಿಂಗಳುಗಳ ಕಾಲ ಭೂಗತನಾಗಿ ಉಳಿದುಬಿಟ್ಟ.

ಮರುವರ್ಷ ಅಂದರೆ ೧೮೫೮ ರ ಮೇ ತಿಂಗಳಲ್ಲಿ ಭೀಮರಾಯನು ಕೆಲವು ಗ್ರಾಮಗಳನ್ನು ಲೂಟಿ ಮಾಡುತ್ತ, ತುಂಗಭದ್ರ ನದಿಯ ತೀರಪ್ರದೇಶಗಳತ್ತ ಹೊರಟಿದ್ದಾನೆಂದೂ, ಭಾರೀ ಪ್ರಮಾಣದಲ್ಲಿ ಶಸ್ತ್ರಾಸ್ತ್ರಗಳನ್ನು ಸಂಗ್ರಹಿಸುತ್ತ ಬ್ರಿಟಿಷರ ಮೇಲೆ ದಾಳಿಗೆ ಸಜ್ಜಾಗಿದ್ದಾನೆಂದೂ ವರದಿ ಬಂದಿತು. ಇದರ ಬೆನ್ನಲ್ಲಿಯೇ ಭೀಮರಾಯನ ಜೊತೆಗಾರ ಹಮ್ಮಿಗಿಯಲ್ಲಿ ಕೆಂಚಪ್ಪಗೌಡರ ಗರಡಿ ಮನೆಯನ್ನು ಪೊಲೀಸರು ಶೋಧಿಸಿದರು. ಆಗ ಅಪಾರ ಪ್ರಮಾಣದ ಮದ್ದು, ಗುಂಡು, ಪಿಸ್ತೂಲು ಮೊದಲಾದ ಶಸ್ತ್ರಾಸ್ತ್ರಗಳ ಸಂಗ್ರಹ ಬಯಲಾಯಿತು. ಡಂಬಳದ ಪೋಲೀಸರು ಅದನ್ನು ಮೊಹರು ಮಾಡಿದರು. ಎಲ್ಲ ಶಸ್ತ್ರಾಸ್ತ್ರಗಳ ಕಾವಲಿಗೆ ಬಿಗಿಯಾದ ಪೊಲೀಸ್ ಕಾವಲಿನ ವ್ಯವಸ್ಥೆ ಮಾಡಿ, ಮೇಲಧಿಕಾರಿಗಳಿಗೆ ವರದಿ ಕಳಿಸಿದರು. ಈ ಶಸ್ತ್ರಾಸ್ತ್ರಗಳ ತಪಾಸಣೆಗೆ, ವಶಕ್ಕೆ ಥಾಮಸ್ ಎನ್ನುವ ಅಧಿಕಾರಿಯು ೧೫ ಕ್ಕೂ ಹೆಚ್ಚು ಸೈನಿಕರೊಂದಿಗೆ, ಪೋಲೀಸ್ ಪಡೆಯನ್ನು ಕರೆದುಕೊಂಡು ಹೋಗುತ್ತಿರುವ ಸುದ್ದಿ ಗೊತ್ತಾಗುತ್ತಿದ್ದಂತೆ ತನ್ನ ಹೋರಾಟದ ಗೌಪ್ಯತೆಯನ್ನು ಕಾಪಾಡುವ ಅವಶ್ಯಕತೆ ಇಲ್ಲವೆಂದು ಮನಗಂಡು ಭೀಮರಾಯನು ಹಮ್ಮಿಗಿ ಕೆಂಚನಗೌಡರೊಂದಿಗೆ ಜೊತೆಯಾಗಿ ಶಸ್ತ್ರಾಸ್ತ್ರಗಳನ್ನು ಕಾಯುತ್ತಿದ್ದ ಪಡೆಯ ಮೇಲೆ ದಾಳಿ ಮಾಡಿದನು. ಈ ದಾಳಿಯಲ್ಲಿ ಕಾವಲುಪಡೆಯ ಫೌಜುದಾರನನ್ನು ಕೊಲ್ಲಲಾಯಿತು. ಕೆಲ ಪೊಲೀಸರು ಗಾಯಗೊಂಡರು. ಇದೇ ಊರಿನ ಕುಲಕರ್ಣಿಯು ಘಟನೆಯ ಸವಿಸ್ತಾರ ವರದಿಯನ್ನು ಬ್ರಿಟಿಷರಿಗೆ ನೀಡಿದನಾದರೂ ದೇಶಪ್ರೇಮಿ ಜನತೆ ಭೀಮರಾಯನ ಬಂಡಾಯವನ್ನು, ಹೋರಾಟವನ್ನು ಬೆಂಬಲಿಸಿದರು. ನೂರಾರು ಜನ ಭೀಮರಾಯನ ಈ ಬಂಡಾಯದಲ್ಲಿ ಭಾಗವಹಿಸಿದರು. ಗದಗಿನತ್ತ ದಾಳಿಗಳನ್ನು ಕೇಂದ್ರೀಕರಿಸಿದಂತಿದ್ದ ಭೀಮರಾಯನ ತಂಡ, ಪೊಲೀಸರು ತಮ್ಮ ಹಿಂದೆ ಬಿದ್ದಿರುವುದು ಗೊತ್ತಾಗಿ



ಭೀಮರಾಯ ಮತ್ತು ಹಮ್ಮಿಗಿ ಕೆಂಚನಗೌಡರು ಕೊಪ್ಪಳದತ್ತ ಮುಖಮಾಡಿದರು. ಆನೆಗೊಂದಿಯ ರಾಜನು ಮಧ್ಯವರ್ತಿಗಳ ಮೂಲಕ ಭೀಮರಾಯನ ಸಂಪರ್ಕದಲ್ಲಿದ್ದುದು ತಿಳಿದು ಬರುತ್ತದೆ. ಕೊಪ್ಪಳದ ಕೋಟೆಗೆ ಭೀಮರಾಯನು ಮುತ್ತಿಗೆ ಹಾಕುವ ಯೋಜನೆಗೆ ಹೊಸಪೇಟೆ, ಕಮಲಾಪುರದ ಯೋಧರನ್ನು ಕರೆತರಲು ಭೀಮರಾಯನು ೫೦೦ ರೂ. ಗಳನ್ನು ಠಾಕೂರ ಎಂಬ ವ್ಯಕ್ತಿಗೆ ಕೊಟ್ಟು, ಕೊಪ್ಪಳ ಕೋಟೆಯತ್ತ ಧಾವಿಸುತ್ತಾನೆ. ಇದೇ ಸಂದರ್ಭದಲ್ಲಿ ಕೊಪ್ಪಳದ ತಹಶೀಲ್ದಾರನಿಂದ ಭೀಮರಾಯನ ಇಬ್ಬರು ಹೆಂಡತಿಯರು ಮತ್ತು ಮಗನ (೧೨ ವರ್ಷದ ಬಾಲಕ) ಬಂಧನವಾಗುತ್ತವೆ. ಹಲವು ಅಡೆತಡೆಗಳ ನಡುವೆ ೩೦೦ ಕ್ಕಿಂತ ಹೆಚ್ಚಿನ ಯೋಧರೊಡಗೂಡಿ ಬರುತ್ತಿರುವ ಸುದ್ದಿ ಸಿಗುತ್ತದೆ. ತಮ್ಮ ಸಮೀಪದ ಮತ್ತು ವಿಶ್ವಾಸಾರ್ಹ ಪ್ರದೇಶಗಳಲ್ಲಿ ಬಚ್ಚಿಟ್ಟಿದ್ದ ಮದ್ದು ಗುಂಡುಗಳು, ಶಸ್ತ್ರಾಸ್ತ್ರಗಳು, ಗಂಧಕದೊಂದಿಗೆ, ಬ್ರಿಟಿಷರ ಪೊಲೀಸ್ ಸ್ಟೇಷನ್‌ಗಳ ಮೇಲೆ ಮಾಡಿದ ಲೂಟಿಯ ಶಸ್ತ್ರಾಸ್ತ್ರಗಳೊಂದಿಗೆ ಆಗಮಿಸಿದಾಗ, ಕೊಪ್ಪಳದ ಭಾಗದಲ್ಲೆಲ್ಲಾ ಹಮ್ಮಿಗೆ ಕೆಂಚ್ಚಪ್ಪಗೌಡರು ಪ್ರಭಾವ ಹೊಂದಿದ್ದರಿಂದ ಎಲ್ಲ ಹಳ್ಳಿಯ ಜನತೆ ಸಹಾಯ, ಸಹಕಾರ ನೀಡಿದರು. ದಕ್ಷಿಣದ ಮರಾಠರು, ನರಗುಂದ, ರಾಮದುರ್ಗ, ಸುರಪುರ, ಆನೆಗೊಂದಿ ಅರಸರು ಅಲ್ಲದೇ ಹಲವು ಸಂಸ್ಥಾನಿಕರೆಲ್ಲ ಕೂಡಿ ಒಂದೇ ಸಲ ಬಂಡೇಳಬೇಕೆಂಬ ನಿಗದಿತ ಯೋಜನೆ ಫಲಕಾರಿಯಾಗಿದ್ದರೆ, ೧೮೫೭ ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಮುಂಡರಗಿ ಭೀಮರಾಯ ಇತಿಹಾಸದ ಪುಟಗಳಲ್ಲಿ ರಾರಾಜಿಸುತ್ತಿದ್ದ.

ಭೂತನಹಳ್ಳಿ ಭರಮಪ್ಪ ನಾಯಕ ಎನ್ನುವವರಿಂದ ಕೊಪ್ಪಳ ಕೋಟೆಯ ರಕ್ಷಣೆಯ ದುರ್ಬಲತೆ ತಿಳಿದ ಭೀಮರಾಯ ಮೇ ೩೦ ರಂದು ಕೋಟೆಯನ್ನು ಏಕಾಏಕಿ ಸುತ್ತುವರಿದರು. ಇದರಿಂದ ವಿಚಲಿತರಾದ ಕೋಟೆ ಕಾವಲು ಪಡೆ ಅಸಹಾಯಕತೆಯಿಂದ ಏನೂ ಮಾಡುದ ಸ್ಥಿತಿಯಲ್ಲಿರಲಿಲ್ಲ. ಇಡೀ ಕೋಟೆ ಭೀಮರಾಯನ ವಶವಾಯಿತು. ಕೋಟೆಯ ಬಾಗಿಲು ಭದ್ರವಾಯಿತು. ತಮ್ಮೊಂದಿಗೆ ತಂದಿದ್ದ ಎಲ್ಲ ದಾಸ್ತಾನು, ಶಸ್ತ್ರಾಸ್ತ್ರಗಳು, ಯೋಧರು ಸಮೇತ ಬಲಾಢ್ಯ ಕೋಟೆಯೊಳಗೆ ಆಶ್ರಯ ಪಡೆದರು.

ಗೆರಿಲ್ಲಾ ಪ್ರಕಾರದ ಏಕಾಏಕಿ ದಾಳಿಯನ್ನು ನಿರೀಕ್ಷಿಸದ ಬ್ರಿಟಿಷರಿಗೆ ಇದೊಂದು ನುಂಗಲಾರದ ತುತ್ತಾಯಿತು. ಭೀಮರಾಯನು ಕೊಪ್ಪಳಕ್ಕೆ ಬರುವಾಗ ಗದಗಿನ ಅಂಚೆ ಕಚೇರಿಯನ್ನು ನಾಶ ಮಾಡಿ ಬಂದಿದ್ದರಿಂದ ಗದಗಿನಿಂದ ಭೀಮರಾಯನ ಚಲನವಲನಗಳ ಸಂದೇಶಗಳು ಬಾರದಂತಾಗಿದ್ದವು. ಆ ಕಾರಣದಿಂದ ಭೀಮರಾಯನು ಕೋಟೆಗೆ ಪ್ರವೇಶಿಸಿದ್ದು, ಏಕಾಏಕಿಯಂತಾಗಿತ್ತು.

ಮೇಲಧಿಕಾರಿಗಳ ಆದೇಶದಂತೆ ಮೇಜರ್ ಹ್ಯೂಸ್ ನೇತೃತ್ವದಲ್ಲಿ ೨೬ ಮೈಲುಗಳನ್ನು ಕೇವಲ ಆರೇಳು ತಾಸುಗಳಲ್ಲಿ ಕ್ರಮಿಸಿ ಬಂದ ಸೈನ್ಯವು ಕೋಟೆಯ ಹೊರಭಾಗದಲ್ಲಿ ಬಂದು ನಿಂತಿತು. ಇಡೀ ದಿನ ಮೇ ೩೧ ರಂದು ಪ್ರಯತ್ನ ಪಟ್ಟರೂ ಭೀಮರಾಯ ಮತ್ತು ಕೆಂಚನಗೌಡರನ್ನು ಹಿಡಿಯಲು ಆಗಲಿಲ್ಲ. ಜೂನ್ ೧ ರಂದು ಬ್ರಿಟಿಷ್ ಲೆಫ್ಟಿನೆಂಟ್ ಫೆಡ್ಲರ್‌ನ ಸೈನ್ಯ, ರಾಯಚೂರಿನ ಡೆಪ್ಯೂಟಿ ಕಮೀಷನರ್ ಆರ್.ಎನ್. ಟೇಲರ್ ಶತಪ್ರಯತ್ನ ನಡೆಸಿದರೂ ಕೋಟೆಯ ಬಾಗಿಲು ಒಡೆಯಲಾಗಲಿಲ್ಲ. ಭೀಮರಾಯನನ್ನು ಹಿಡಿದುಕೊಟ್ಟವರಿಗೆ ೫೦೦ ರೂ. ಬಹುಮಾನ ಘೋಷಣೆಯಾದ ಮೇಲೆ ಕೆಳಕೋಟೆಯ ಬಾಗಿಲುಗಳ ಕಾವಲುಗಾರರಲ್ಲಿ ಕೆಲವರು ಮಾಡಿದ ಮೋಸಕ್ಕೆ ತೆರೆದ ಬಾಗಿಲನ್ನು ಹೊಕ್ಕ ಬ್ರಿಟಿಷರ ಸೈನ್ಯಕ್ಕೆ ಭೀಮರಾಯ–ಕೆಂಚನಗೌಡರ ಸೈನ್ಯ ಪ್ರತಿಯಾಗಿ ವೀರಾವೇಶದಿಂದ ಹೋರಾಡಿತು. ಭೀಕರ ಕಾಳಗದಲ್ಲಿ ಕೋಟೆಯೊಳಗಿನ ಶಸ್ತ್ರಾಸ್ತ್ರ ಮುಗಿಯುತ್ತಾ ಬಂತು. ಎರಡೂ ಕಡೆ ಭಾರೀ ಪ್ರಮಾಣದ ಸಾವು ನೋವು ಸಂಭವಿಸಿತು. ಉರುಳುತ್ತಿರುವ ಹೆಣಗಳ ರಾಶಿಯ ನಡುವೆ, ಸೋಲುತ್ತಿರುವ ಭೀಮರಾಯನ ಸೈನಿಕರ ನಡುವೆ ಭೀಮರಾಯನನ್ನು ಹುಡುಕುವುದೇ ಬ್ರಿಟಿಷರ ಕೆಲಸವಾಗಿತ್ತು. ಭೀಮರಾಯನು ಯುದ್ಧದಲ್ಲಿ ವೀರಮರಣ ಅಪ್ಪಿದನು. ಆದರೆ ಯಾರ ಗುಂಡಿಗೆ ಬಲಿಯಾದನೆಂಬುದು ಮಾತ್ರ ತಿಳಿಯಲೇ ಇಲ್ಲ. ಈ ನಡುವೆ ಕೆಂಚನಗೌಡರು ಶರಣಾಗುವ ಸಲಹೆ ಅಥವಾ ತಲೆತಪ್ಪಿಸಿಕೊಳ್ಳುವ ಸಲಹೆ ನೀಡಿದನೆಂದೂ, ಇದಕ್ಕೆ ಒಪ್ಪದ ಭೀಮರಾಯ ಕೆಂಚನಗೌಡರನ್ನು ಗುಂಡಿಕ್ಕಿ ಕೊಂದು, ತಾನೂ ಗುಂಡಿಕ್ಕಿಕೊಂಡು ಪ್ರಾಣಾರ್ಪಣೆ ಮಾಡಿಕೊಂಡರೆಂದೂ ತಿಳಿದುಬರುತ್ತದೆ.



ಭಯಾನಕ ಯುದ್ಧದಲ್ಲಿ ಪಾಲುಗೊಂಡ ದೇಶಪ್ರೇಮಿ ಸೈನಿಕರಲ್ಲಿ ೨೭ ಜನರಿಗೆ ಮರಣ ದಂಡನೆ, ೪೦ ಜನರಿಗೆ ೧೪ ವರ್ಷಗಳ ಶಿಕ್ಷೆ, ಕೆಲವರಿಗೆ ೫ ವರ್ಷಗಳ ಶಿಕ್ಷೆ, ಇನ್ನು ಕೆಲವರಿಗೆ ೧ ವರ್ಷದಂತೆ ಶಿಕ್ಷೆ – ಹೀಗೆ ೧೩೯ ಜನರಿಗೆ ಶಿಕ್ಷೆಯಾಯಿತು. ಕೆಲವರನ್ನು ಕೊಪ್ಪಳದ ಗವಿಮಠದ ಮೈದಾನದಲ್ಲಿ, ಕೆಲವರನ್ನು ರಾಯಚೂರಿನಲ್ಲಿ ಗಲ್ಲಿಗೇರಿಸಲಾಯಿತು. ತಹಶೀಲ್ದಾರ್ ಆಗಿದ್ದ ಮುಂಡರಗಿ ಭೀಮರಾಯ, ಬ್ರಿಟಿಷರ ಅಧೀನದಲ್ಲಿ ಕೆಲಸ ಮಾಡದೇ, ದೇಶಕ್ಕಾಗಿ ಪ್ರಾಣತ್ಯಾಗ ಮಾಡಿ ಅಜರಾಮರರಾದರು.

ಆನಂತರದ ಅವಧಿಯಲ್ಲಿ ಅಂಥ ಗಟ್ಟಿ ಹೋರಾಟಗಳು ಈ ಭಾಗದಲ್ಲಿ ಬ್ರಿಟಿಷರ ವಿರುದ್ಧ ನಡೆಯಲಿಲ್ಲವಾದರೂ ಅಲ್ಲಲ್ಲಿ ಸಣ್ಣ ಸಣ್ಣ ಬಂಡಾಯ, ಹೋರಾಟ, ಚಳವಳಿ ನಡೆಯುತ್ತಾ ಸಾಗಿತ್ತು. ಕಾಲ ಬದಲಾದಂತೆ ೨೦ ನೇ ಶತಮಾನದ ಆರಂಭದ ಹೊತ್ತಿಗೆ ಯುದ್ಧಗಳು ಕಡಿಮೆಯಾಗಿ, ಸಂಸ್ಥಾನಿಕರ ಹೋರಾಟಗಳು ಜನಮಾನಸ ಹೋರಾಟಗಳಾಗಿ ಪರಿವರ್ತನೆಯಾಗಿ ಬ್ರಿಟಿಷರ ವಿರುದ್ಧ ಕಾಂಗ್ರೆಸ್ ನೇತೃತ್ವದಲ್ಲಿ ಅಹಿಂಸಾತ್ಮಕ ಹೋರಾಟ ಆರಂಭವಾದವು. ಕೆಲವು ಪ್ರತಿಗಾಮಿಗಳು ಹಿಂಸಾತ್ಮಕ ಹೋರಾಟಗಳ ಮೂಲಕವೂ ಬ್ರಿಟಿಷರ ವಿರುದ್ಧ ಕಹಳೆ ಊದಿದರು.

## ಗಾಂಧಿ ಯುಗ

ಚಿತ್ತರಂಜನ್‌ದಾಸ್‌ರ ನಂತರ ದೇಶದೆಲ್ಲೆಡೆ 'ಗಾಂಧಿಯುಗ' ಆರಂಭವಾಯಿತು. 'ಗಾಂಧಿ' ಎನ್ನುವ ಆಯಸ್ಕಾಂತೀಯ ಶಕ್ತಿ ಇಡೀ ದೇಶದ ನರನಾಡಿಗಳಲ್ಲೆಲ್ಲ ಪ್ರವೇಶಿಸಿ, ಹೊಸ ಸಂಚಲನ ಮೂಡಿಸಿತು. ಗಾಂಧೀಜಿ ಉತ್ತರದಲ್ಲೆಲ್ಲೋ ಕುಳಿತುಕೊಂಡು ಹೇಳಿದರೆ ಇತ್ತ ದಕ್ಷಿಣದಲ್ಲೆಲ್ಲ ಅನುಷ್ಠಾನಕ್ಕೆ ಜನತೆ ಸಿದ್ಧವಾಗುತ್ತಿದ್ದರು. ಗಾಂಧಿಯವರನ್ನು ನೋಡುವ ಭಾಗ್ಯ ದೊರೆತರಂತೂ ಜೀವನವೇ ಸಾರ್ಥಕವೆಂಬ ಭಾವ ಇಡೀ ಭರತ ಖಂಡದ ತುಂಬ ಸಂಚಲಿಸಿತು.

ಬರೀ ಪತ್ರಿಕೆಗಳಲ್ಲಿ ಬಂದ ಸುದ್ದಿಗಳ ಮೂಲಕವೇ ಜನತೆ ಗಾಂಧೀಜಿಯವರ ತತ್ವ, ಆದರ್ಶಗಳನ್ನು ಮನತುಂಬಿಕೊಳ್ಳುತ್ತಿದ್ದರು. 'ಗಾಂಧಿ ಅನುಯಾಯಿ', 'ಖಾದಿ ಪ್ರಚಾರಕ' ಎನ್ನುವುದೇ ಬಹುದೊಡ್ಡ ಗೌರವವಾಗಿತ್ತು.

ಇನ್ನು ಗಾಂಧೀಜಿಯವರನ್ನು ಭೇಟಿಯಾಗಿ ಬಂದವರಂತೂ ಪರಮ ಶ್ರೇಷ್ಠರಾಗಿರುತ್ತಿದ್ದರು. ಅಂತಹದ್ದೊಂದು ಪುಳಕಿತ ಶಕ್ತಿ ಗಾಂಧಿಯವರಲ್ಲಿತ್ತು. ಗಾಂಧೀಜಿಯವರನ್ನು ನೋಡಿದವರ ಜೀವನವೇ ಬದಲಾಗಿಬಿಡುತ್ತಿತ್ತು.

೧೯೧೬ ರಲ್ಲಿ ಡಿಸೆಂಬರ್ ತಿಂಗಳಲ್ಲಿ ಲಕ್ನೋದಲ್ಲಿ ನಡೆದ ಕಾಂಗ್ರೆಸ್ ಅಧಿವೇಶನಕ್ಕೆ ಗಾಂಧೀಜಿಯವರನ್ನು ನೋಡಿ ಧನ್ಯರಾಗಲು ಕೊಪ್ಪಳ ಜಿಲ್ಲೆಯ ಕುಷ್ಟಗಿಯ ಯುವಕರಾಗಿದ್ದ ಸೌದಿ ಗುರಪ್ಪ ಮತ್ತು ಚಳಗೇರಿ ಭೀಮಾಚಾರ್ಯರು ಭಾಗವಹಿಸಿದ್ದರು. ಬ್ರಿಟಿಷ್ ಆಡಳಿತದಲ್ಲಿ ಸ್ವದೇಶಿಯರ ಪಾತ್ರ ಮತ್ತು ಭಾಗವಹಿಸುವಿಕೆಗೆ ಆದ್ಯತೆಗಾಗಿ ಬೇಡಿಕೆಯನ್ನು ಈ ಅಧಿವೇಶನದಲ್ಲಿ ಇಡಲಾಗಿತ್ತು.

## 'ಚರಕಾ ಚಲಾಯೇಂಗೆ – ಸ್ವರಾಜ್ಯ ಲೇಂಗೆ' – ರಾಷ್ಟ್ರೀಯ ಕಾರ್ಯಕ್ರಮವಾಗಿ ಖಾದಿ : ಕೊಪ್ಪಳದಲ್ಲಿ ಖಾದಿ ಕೇಂದ್ರ

'ಚರಕಾ ಚಲಾಯೇಂಗೆ – ಸ್ವರಾಜ್ಯ ಲೇಂಗೆ' ಘೋಷಣೆಯು ಭಾರತೀಯರ ರೋಮಾಂಚನದ ಸಂಕೇತವಾಗಿ ಸ್ವರಾಜ್ಯದ, ಸ್ವಾತಂತ್ರ್ಯದ, ಅಸ್ಪೃಶ್ಯತೆ ನಿವಾರಣೆಯ, ಸ್ವದೇಶಿ ಚಳುವಳಿಯ, ದೇಶಾಭಿಮಾನದ ಸಂಕೇತವಾಗಿ ದೇಶಭಕ್ತಿಯನ್ನು ಭಾರತೀಯರೆದೆಯಲ್ಲಿ ಹುಟ್ಟಿಸಿತು. ಹೋರಾಟದ ಕಿಚ್ಚಿಗೆ, ತ್ಯಾಗಕ್ಕೆ ಖಾದಿಯು ಸಂಕೇತವಾಯಿತು. ರಾಷ್ಟ್ರದೆಲ್ಲೆಡೆ ೧೯೨೦ ರಿಂದ ೧೯೨೫ ರ ವರೆಗೆ ಖಾದಿಯನ್ನು ಕಾಂಗ್ರೆಸ್ ಬಹಳ ಪ್ರಚಾರ ಮಾಡಿತು. ಕರ್ನಾಟಕದಲ್ಲಿ ಹರ್ಡೇಕರ್ ಮಂಜಪ್ಪನವರು 'ಖಾದಿ ವಿಜಯ' ಪತ್ರಿಕೆಯನ್ನು, ದಿವಾಕರ್ ರಂಗನಾಥರ ಜೊತೆಗೂಡಿ 'ಖಾದಿ ಸಂದೇಶ' ವಾರಪತ್ರಿಕೆಯನ್ನು ಹೊರಡಿಸಿದರು. ೧೯೨೫ ರಲ್ಲಿ ಮಹಾತ್ಮ ಗಾಂಧೀಜಿಯವರೇ 'ಚರಕಾ ಸಂಘ'ದ ಅಧ್ಯಕ್ಷರಾಗುವ ಮೊದಲೇ ಅಂದರೆ ೧೯೨೨ ಕ್ಕೂ ಮೊದಲು ಕೊಪ್ಪಳದಲ್ಲಿ ಮೊಟ್ಟ ಮೊದಲ ಖಾದಿ ಕೇಂದ್ರವನ್ನು ಉಪ್ಪಿನ ಬೆಟಗೇರಿಯಲ್ಲಿ ಆರಂಭಿಸಲಾಯಿತು. ಇದನ್ನು 'ಚರಕಾ ಕೇಂದ್ರ' ಎಂದು ಕರೆಯಲಾಯಿತು. ರಾಮಚಂದ್ರ ವಡವಿ ಎನ್ನುವವರು ಈ ಕೇಂದ್ರಕ್ಕೆ ಆಶ್ರಮದ ಹೊಸರೂಪ ಕೊಟ್ಟರು. ಸಾಬರಮತಿ ಆಶ್ರಮದಲ್ಲಿ ರಾಮಚಂದ್ರ ವಡವಿಯವರು ಇದ್ದು ಬಂದವರಾಗಿದ್ದರಿಂದ ಖಾದಿ ಕೇಂದ್ರವು



ಆಶ್ರಮದ ಆಕಾರ ಹೊಂದಿತು. ಕಾಂಗ್ರೆಸ್ ಪಕ್ಷದ ಪಿ.ಜಿ. ಕುಲಕರ್ಣಿಯವರು ಖಾದಿ ಕೇಂದ್ರಕ್ಕಾಗಿ ಬಹಳ ಪರಿಶ್ರಮ ಪಟ್ಟರು.

ಕೌಜಲಗಿ ಹನುಮಂತರಾಯರ ಪ್ರೋತ್ಸಾಹದ ಫಲವಾಗಿ ೧೯೩೪ ರ ಸುಮಾರಿಗೆ ಕೊಪ್ಪಳದಲ್ಲಿಯೂ ಖಾದಿ ಕೇಂದ್ರ, ನೂಲುವವರ ಸಂಘ ಮತ್ತು ಖಾದಿ ಮಾರಾಟದ ಕೇಂದ್ರಗಳನ್ನು ತೆರೆಯಲಾಯಿತು. ಈ ಮೂಲಕ ಬ್ರಿಟಿಷರ ಬಟ್ಟೆಗಳಿಗೆ ಸೆಡ್ಡು ಹೊಡೆದು ಸ್ವದೇಶೀ ಮಂತ್ರ ಆರಂಭಿಸಲಾಯಿತು. ೧೯೩೭ ರಲ್ಲಿ ಗೊಂಡಬಾಳದಲ್ಲಿ ಮತ್ತು ಶಿವಮೂರ್ತಿ ಸ್ವಾಮಿಗಳು ತಮ್ಮ ತಾಯಿಯವರ ಬಂಗಾರದ ಕೈಬಳೆಗಳನ್ನು ಮಾರಿ ೧೯೪೨ ರಲ್ಲಿ ಅಳವಂಡಿಯಲ್ಲಿ ಮತ್ತು ಸೋಮಣ್ಣ ಕುದರಿಮೋತಿ, ಸಿದ್ಧಪ್ಪ ಮಾಸ್ತ ಮತ್ತು ಬೀಡ್ನಾಳ ದೇಸಾಯಿಯವರು ಕಿನ್ನಾಳದಲ್ಲಿ ಚರಕ ಕೇಂದ್ರಗಳನ್ನು ಸ್ಥಾಪಿಸಿದರು.

ಆನಂತರ ಕೊಪ್ಪಳದ ಪ್ಯಾಟಿ ಈಶ್ವರ ದೇವಸ್ಥಾನದ ಎದುರಿನ ಆಂಜನೇಯ ಗುಡಿಯಲ್ಲಿ ಪುಟ್‌ಭಟ್ ಜೋಶಿ (ಜಹಗೀರದಾರ) ಇವರ ಪ್ರಯತ್ನದಿಂದ ೧೯೪೪–೪೫ ರಲ್ಲಿ ಖಾದಿ ಕೇಂದ್ರ ಆರಂಭವಾಯಿತು.

## ಗಾಂಧಿ ಮತ್ತು ಕರ್ನಾಟಕ : ಬೆಳಗಾವಿ ಅಧಿವೇಶನ – ೧೯೨೪

ಗಾಂಧೀಜಿ ಅಧ್ಯಕ್ಷತೆಯಲ್ಲಿ ಕಾಂಗ್ರೆಸ್‌ನ ಅಧಿವೇಶನ ೧೯೨೪ ರಲ್ಲಿ ಬೆಳಗಾವಿಯಲ್ಲಿ ಜರುಗಿತು. ಬೆಳಗಾವಿಯ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷರಾಗಿ ಗಾಂಧೀಜಿ ಆಯ್ಕೆಯಾಗುತ್ತಿದ್ದಂತೆ ಇಡೀ ರಾಜ್ಯದಲ್ಲಿ ವಿದ್ಯುತ್‌ಗಿಂತಲೂ ತೀವ್ರತರವಾದ ದೇಶಭಕ್ತಿ, ಹಬ್ಬದ ವಾತಾವರಣ ಉಂಟಾಯಿತು. ಕೇವಲ ೨೦೦ ಕಿ.ಮೀ. ದೂರದ ಬೆಳಗಾವಿಯಲ್ಲಿ ಗಾಂಧಿಯವರನ್ನು ಕಣ್ತುಂಬಿಕೊಳ್ಳುವ ಭಾಗ್ಯ ಕೊಪ್ಪಳದ ಜನತೆಯದ್ದಾಗಿತ್ತು. ಈ ಭಾಗದಿಂದ ಅಧಿವೇಶನಕ್ಕೆ ಹೋದವರ ಸಮಗ್ರ ಮಾಹಿತಿಯ ದಾಖಲೆಗಳು ಲಭ್ಯವಾಗಿಲ್ಲ.

## ಬೆಳಗಾವಿ ಅಧಿವೇಶನದಲ್ಲಿ ಕೊಪ್ಪಳದ ದೇಶಭಕ್ತರು

ಬೆಳಗಾವಿ ಕಾಂಗ್ರೆಸ್ ಅಧಿವೇಶನದಲ್ಲಿ ಕೊಪ್ಪಳದಿಂದ ಭಾಗವಹಿಸಿದ ಪ್ರಮುಖರಲ್ಲಿ ಪುಟ್‌ಭಟ್ ಜೋಶಿ (ಜಹಗೀರದಾರ) ಪ್ರಮುಖರು.

ಅಸ್ಪೃಶ್ಯತೆ ನಿವಾರಣೆ, ಖಾದಿ ಪ್ರಚಾರ ಮತ್ತು ಭಾರತ ಸ್ವಾತಂತ್ರ್ಯ ಈ ಪ್ರಮುಖವಾದ ಮೂರು ಗುರಿಗಳೊಂದಿಗೆ ದೇಶಾದ್ಯಂತ ಹೋರಾಟ ಮತ್ತು ಅನುಷ್ಠಾನಕ್ಕೆ ಒತ್ತು ನೀಡಲಾಯಿತು. ಗಾಂಧೀಜಿ ದರುಶನದಿಂದ, ಮಾತುಗಳಿಂದ ಪ್ರಭಾವಿತರಾಗಿ ಬಂದ ಶ್ರೀಮಂತ ಜಹಗೀರದಾರ ಮನೆತನದ, ಬ್ರಾಹ್ಮಣ ವ್ಯಕ್ತಿ ಪುಟ್ ಭಟ್ ಜೋಶಿ ಕೊಪ್ಪಳದಲ್ಲಿ ಈಗಿನ ಪ್ಯಾಟಿ ಈಶ್ವರ ದೇವಸ್ಥಾನದ ಎದುರಿಗಿರುವ ಹನುಮಂತನ ಗುಡಿಯಲ್ಲಿ ಖಾದಿ ಕೇಂದ್ರ ತೆರೆಯುತ್ತಾರೆ. ಅಸ್ಪೃಶ್ಯತೆಯ ವಿರುದ್ಧ ಹೋರಾಡುತ್ತಾರೆ. ಸ್ವಾತಂತ್ರ್ಯದ ಮಹತ್ವದ ಜಾಗೃತಿ ಮೂಡಿಸುತ್ತಾರೆ. ಇದರಿಂದ ಬ್ರಿಟಿಷರ ಕೆಂಗಣ್ಣಿಗೆ ಗುರಿಯಾಗುವುದರ ಜೊತೆಗೆ ಸ್ವಜಾತಿಯವರಿಂದಲೂ ಟೀಕೆ, ನಿಂದನೆಗೆ ಗುರಿಯಾಗಿ ಬ್ರಾಹ್ಮಣ ಸಮಾಜದಿಂದ / ಕುಲದಿಂದ ಇವರನ್ನು ಹೊರಗಿಡುತ್ತಾರೆ. ಅಸ್ಪೃಶ್ಯತೆ ನಿವಾರಣೆಗಾಗಿ ಇವರು ಮಾಡಿದ ಕೆಲಸಗಳನ್ನು ಮಡಿವಂತಿಕೆಯ ಅಂದಿನ ಸಮಾಜ ಸಹಿಸಲಿಲ್ಲ.

ಗವಿಮಠದ ಇತಿಹಾಸದಲ್ಲಿ ಜ್ಯೋತಿಷಿಯೊಬ್ಬರು ಅಮಾವಾಸ್ಯೆಯ ದಿನ ಪೂರ್ತಿ ಚಂದಿರನನ್ನು ತೋರಿಸುತ್ತೇನೆಂದು ಹೇಳಿ, ಗವಿಸಿದ್ಧೇಶ್ವರರ ಹತ್ತಿರ ಬಂದು, ಕ್ಷಮೆ ಯಾಚಿಸಿದಾಗ ಗವಿಸಿದ್ಧೇಶ್ವರರೇ ಚಂದಿರನನ್ನು ತೋರಿಸುವ ಪವಾಡವಿದೆ. ಈ ಜ್ಯೋತಿಷಿಯ ಮೊಮ್ಮಗನೇ ಸ್ವಾತಂತ್ರ್ಯಕ್ಕಾಗಿ ನಿಸ್ವಾರ್ಥದಿಂದ ದುಡಿದ ಪುಟ್ ಭಟ್ ಜೋಶಿಯವರು.

## ಲಾಹೋರ ಅಧಿವೇಶನ – ೧೯೨೮

೪ ವರ್ಷಗಳ ನಂತರದ ೧೯೨೮ ರ ಲಾಹೋರ್ ಕಾಂಗ್ರೆಸ್ ಅಧಿವೇಶನ ಜವಾಹರಲಾಲ್ ನೆಹರೂ ಅವರ ಅಧ್ಯಕ್ಷತೆಯಲ್ಲಿ ನಡೆದಾಗ ಪೂರ್ತಿ ಸ್ವರಾಜ್ಯಕ್ಕಾಗಿ ಗೊತ್ತುವಳಿ ಸ್ವೀಕಾರವಾಯಿತು. ಈ ಅಧಿವೇಶನದಲ್ಲಿ ಕೊಪ್ಪಳದಿಂದ ಬೇಳೂರು ತಿಮ್ಮನಗೌಡರು, ಹಂಜಿ ಕೊಟ್ರಪ್ಪ, ನರಸಿಂಗರಾವ್ ಮತ್ತು ಶಿರೂರು ವೀರಭದ್ರಪ್ಪನವರು ಭಾಗವಹಿಸಿ, ವಾಪಸ್ ಬಂದು ಕಾಂಗ್ರೆಸ್‌ನ ಕಾರ್ಯಕ್ರಮಗಳನ್ನು, ದೇಶೀಯ ಚಳುವಳಿಗಳನ್ನು ಕೊಪ್ಪಳ ಮತ್ತು ಯಲಬುರ್ಗಾ ತಾಲ್ಲೂಕುಗಳಲ್ಲಿ ಆರಂಭಿಸಿದರು.



## ಕೊಪ್ಪಳಕ್ಕೆ ಗಾಂಧಿ : ಮಾರ್ಚ್ ೩, ೧೯೩೪

ಪೂರ್ತಿ ಸ್ವರಾಜ್ಯಕ್ಕಾಗಿ ಘೋಷಣೆ ಆರಂಭವಾಗಿ ಸ್ವಾತಂತ್ರ್ಯದ ಘಟ್ಟ ತೀವ್ರತೆ ಪಡೆಯುತ್ತಾ ಹೋಯಿತು. ಗಾಂಧೀಜಿಯ ಹೆಜ್ಜೆಗಳಲ್ಲಿ ಸ್ವಾತಂತ್ರ್ಯ ಪಡೆಯುವ ನಿಶ್ಚಯಕ್ಕೆ ಇಡೀ ಭಾರತದೇಶ ಬಂದಂತಿತ್ತು. ಗಾಂಧೀಜಿ ಎಂದರೆ ರೋಮಾಂಚನ, ಗಾಂಧೀಜಿ ಎಂದರೆ ನಿರಂತರತೆಯ ಪ್ರತೀಕವಾಗಿ ಇಡೀ ದೇಶದ ತುಂಬ ಗಾಂಧೀಜಿಯವರ ನೆಟ್ವರ್ಕ್ ಮೈಮನಗಳಲ್ಲಿ ರೋಮಾಂಚನವನ್ನು ತುಂಬಿಸಿತ್ತು.

ಈ ಸಂದರ್ಭದಲ್ಲಿ ಕೊಪ್ಪಳದ ಭಾಗಕ್ಕೆ ಬಹುದೊಡ್ಡ ಕನಸು ನನಸಾದ ದಿನ ಬಂದಿತು. ಹೊಸಪೇಟೆಯಿಂದ ಹುಬ್ಬಳ್ಳಿ ಮಾರ್ಗವಾಗಿ ಗಾಂಧೀಜಿಯವರು ಹೊರಡುವಾಗ ಭಾನಾಪುರದಲ್ಲಿ ಗಾಂಧೀಜಿಯವರನ್ನು ಇಳಿಸಿಕೊಳ್ಳುವ ವ್ಯವಸ್ಥೆ ಮಾಡಲಾಯಿತು. ಗಾಂಧೀಜಿಯವರನ್ನು ಬರಮಾಡಿಕೊಳ್ಳುವ ಸ್ವಾಗತ ಸಮಿತಿಯಲ್ಲಿ ತಮ್ಮನಗೌಡರ ಪಾಟೀಲ್ ಅಧ್ಯಕ್ಷರಾಗಿ, ಶಿರೂರು ವೀರಭದ್ರಪ್ಪ ಮತ್ತು ಹಂಜಿ ಕೊಟ್ರಪ್ಪನವರು ಕಾರ್ಯದರ್ಶಿಗಳಾಗಿದ್ದರು. ಹತ್ತಾರು ಸಾವಿರದಷ್ಟು ದೇಶಭಕ್ತರು ಗಾಂಧೀಜಿಯನ್ನು ಅಂದು ಕಣ್ತುಂಬಿಕೊಂಡರು. ಈ ಭೇಟಿ ಕೊಪ್ಪಳ ಭಾಗದಲ್ಲಿ ದೇಶದ ಸ್ವಾತಂತ್ರ್ಯ ಹೋರಾಟಕ್ಕೆ ಮಹತ್ವದ ತಿರುವು ತಂದುಕೊಟ್ಟಿತು. ದೀಕ್ಷಾಬದ್ಧರಾದ ಈ ಭಾಗದ ಜನತೆ ಅಂದು ಗಾಂಧಿಯವರಿಂದ ಖಾದಿ ದೀಕ್ಷೆ ಪಡೆದು, ಅಸ್ಪೃಶ್ಯತಾ ನಿವಾರಣೆಗಾಗಿ ಗಾಂಧೀಜಿಯವರ ಹರಿಜನ ನಿಧಿಗೆ ಮಹತ್ವದ ಕಾಣಿಕೆಯನ್ನು ಕೂಡ ಅರ್ಪಿಸಿದರು. ಗಾಂಧೀಜಿಯವರ ಪಾದಸ್ಪರ್ಶದಿಂದ ಕೊಪ್ಪಳ ಪವಿತ್ರವಾಯಿತು.

## ಕಾಳಪ್ಪ ಪತ್ತಾರರ ಗಾಂಧೀಜಿಯ ಚಿತ್ರ ೫ ರೂ. ಗೆ ಹರಾಜು

ತಳಕಲ್ ಗ್ರಾಮದ ಯುವಕ ಕಾಳಪ್ಪ ಪತ್ತಾರರು ಗಾಂಧೀಜಿ ಮಾತಾಡುತ್ತಿದ್ದ ಚಿತ್ರವನ್ನು ಗಾಂಧೀಜಿಗೆ ನೀಡಿದರು. ಸ್ಥಳದಲ್ಲೇ ಚಿತ್ರವನ್ನು ಹರಾಜು ಮಾಡಲಾಯಿತು. ಚಿತ್ರ ೫ ರೂ. ಗಳಿಗೆ ಹರಾಜಾಯಿತು. ಈ ಹಣವನ್ನು ಹರಿಜನ ಫಂಡ್‌ಗೆ ನೀಡಲಾಯಿತು.

## ಮಾರ್ತಾಂಡರಾವ್ ಮತ್ತು ಗೆಳೆಯರು

ಗಾಂಧೀಜಿಯವರನ್ನು ಭೇಟಿ ಮಾಡಿ ಜೀವನವನ್ನು ಪಾವನ ಮಾಡಿಕೊಳ್ಳಲು ನೆರೆದ ಅಂದಿನ ಕೊಪ್ಪಳದ ದೇಶಭಕ್ತ ಯುವಕರಲ್ಲಿ ಕೊಪ್ಪಳದ ಮಾರ್ತಾಂಡರಾವ್, ಪುಂಡಲೀಕಪ್ಪ ಜ್ಞಾನಮೋಟೆ, ಜಗನ್ನಾಥರಾವ್, ರಂಗನಾಥ ಕುಲಕರ್ಣಿ, ಸುಬ್ರಹ್ಮಣ್ಯಾಚಾರ್, ಚಿದಂಬರ್ ಭಟ್, ಎಂ.ಆರ್. ಕುಲಕರ್ಣಿ, ಬಾಲಾಜಿರಾವ್ ಪದಕಿ ಮೊದಲಾದವರಿದ್ದರು. ಹರಕಲು, ಮುರಕಲು ಬಟ್ಟೆ ಧರಿಸಿದ್ದ, ಗಾಂಧೀಜಿಯವರ ಪ್ರಭಾವದಿಂದ ಸರಳತೆಯನ್ನು ಮೈಗೂಡಿಸಿ ಕೊಂಡಿದ್ದ ಮಾರ್ತಾಂಡರಾವ್ ಗಾಂಧೀಜಿಯವರ ಬಳಿ ಆವೇಶದಿಂದ ಹೋಗಿ ದೇಶದ ಪರ ಘೋಷಣೆಯನ್ನು ಕೂಗುತ್ತಾ ಪಾದಕ್ಕೆರಗಿದರು. ಹರಿಜನ ಮಕ್ಕಳಿಗೆಂದು ಹಂಚಲು ಸಂಗ್ರಹಿಸಿದ್ದ ಗಾಂಧಿಟೋಪಿಯನ್ನು ಮಹಾತ್ಮ ಗಾಂಧೀಜಿಯವರು ತೆಗೆದು ಮಾರ್ತಾಂಡರಾವ್‌ರಿಗೆ ಹಾಕಿದರು. ಗಾಂಧಿಟೋಪಿ ತಲೆಯ ಮೇಲೆ ಏರುತ್ತಿದ್ದಂತೆಯೇ ದೇಶದ ಬಹುದೊಡ್ಡ ಹೊಣೆಯನ್ನು ಹೊತ್ತಂತೆ ಮಾರ್ತಾಂಡರಾವ್‌ರು ಖಾದಿ ಭಂಡಾರದಲ್ಲಿ ಕೆಲಸ ಮಾಡುತ್ತ, ಗಾಂಧೀಜಿಯವರ ತತ್ತ್ವಾದರ್ಶಗಳನ್ನು ಪ್ರಸಾರ ಮಾಡುತ್ತ, ದೇಶದ ಸ್ವಾತಂತ್ರ್ಯಕ್ಕೋಸ್ಕರ ಜಾಗೃತಿಯನ್ನು ಮೂಡಿಸುತ್ತ ಕೊಪ್ಪಳ ಭಾಗದಲ್ಲಿ ಕೆಲಸ ಮಾಡಿದರು.

ಈ ಸಂದರ್ಭದಲ್ಲಿ ತರುಣ ಸಂಘದವರು ಹೈದ್ರಾಬಾದಿನಲ್ಲಿ 'ಕಾಂಗ್ರೆಸ್ ಗೋಲ್ಡನ್ ಜ್ಯುಬಿಲಿ' ಸಂಭ್ರಮಾಚರಣೆ ನಡೆಸಲು, ಅದರಲ್ಲಿ ಭಾಗಿಯಾಗಲು ಹೋದ ಮಾರ್ತಾಂಡರಾಯರು ಬಂಧನಕ್ಕೊಳಗಾಗುತ್ತಾರೆ. ಆನಂತರ ಇವರನ್ನು ಸಿಕಂದರಾಬಾದಿನ ಊರ ಹೊರಗಿನ ಪ್ರದೇಶದಲ್ಲಿ ಬಿಡುಗಡೆ ಮಾಡಿದಾಗ ಕೈಯಲ್ಲಿ ಏನೂ ಇಲ್ಲದ ಅವರು ಕೊಪ್ಪಳಕ್ಕೆ ಬರಲು ಪರದಾಡಿದರು. ಇವರ ಆಕಾರ ನೋಡಿದ ಹಿಂದೂಗಳು ಇವನು ಮುಸಲ್ಮಾನ ಎಂದೂ, ಮುಸಲ್ಮಾನರು ಇವನೊಬ್ಬ ಹಿಂದೂ ಎಂದು ಸಹಾಯಹಸ್ತ ಚಾಚಲಿಲ್ಲ. ಕೊನೆಗೆ ದೇಶಭಕ್ತ ಮಾರ್ತಾಂಡರಾವ್‌ರು ಅಲ್ಲಿಯೇ ಸಮೀಪದ ಗೌಳಿಗುಡ್ಡ ಎಂಬಲ್ಲಿ ರಾಮಮಂದಿರ ಎನ್ನುವ ಧಾರ್ಮಿಕ ಕೇಂದ್ರದ ಹತ್ತಿರ ಕುಳಿತುಕೊಂಡು ಕೆಲವರ ಸ್ನೇಹ ಸಂಪಾದಿಸುತ್ತಾರೆ. ಅವರೆಲ್ಲಾ ಶವವನ್ನು ಹೊರುವವರು. ಅವರೊಂದಿಗೆ



ಕೂಡಿಕೊಂಡು ಶವವನ್ನು ಹೊರುವ ಕೆಲಸ ಮಾಡುತ್ತ ಹಣ ಸಂಗ್ರಹಿಸಿಕೊಂಡು ಕೊಪ್ಪಳಕ್ಕೆ ಹಿಂತಿರುಗಿ ಮತ್ತೆ ತಮ್ಮ ದೇಶಭಕ್ತಿ ಕಾಯಕವನ್ನು ಮುಂದುವರೆಸಿದರು.

## ಗಾಂಧೀಜಿ ಹೆಜ್ಜೆಗಳ ಜನಜಾಗೃತಿ

೧೯೩೫ ರ ಹೊತ್ತಿಗೆ ಕೌಜಲಗಿ ಹನುಮಂತರಾಯರು ಮತ್ತು ಸಮಾನ ಮನಸ್ಕರು ಕೊಪ್ಪಳ, ಕುಷ್ಟಗಿ, ಮೇಣೆದಾಳ, ಗಂಗಾವತಿಗಳಲ್ಲಿ ರಾಷ್ಟ್ರೀಯ ಜಾಗೃತಿ, ದೇಶಪ್ರೇಮ, ಖಾದಿ ಮತ್ತು ಗಾಂಧೀಜಿಯವರ ಹೆಜ್ಜೆಗಳ ಕುರಿತಾಗಿ ಜನಜಾಗೃತಿಯನ್ನು ಆರಂಭಿಸುವಲ್ಲಿ ಪ್ರಮುಖ ಪಾತ್ರ ವಹಿಸಿದರು.

## ಕೊಪ್ಪಳಕ್ಕೆ ಡಾ. ರಾಜೇಂದ್ರ ಪ್ರಸಾದ್ ಮತ್ತು ಆಚಾರ್ಯ ಕೃಪಲಾನಿ

ಈ ನಡುವೆ ೧೯೩೫ ರಲ್ಲಿ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಡಾ. ರಾಜೇಂದ್ರ ಪ್ರಸಾದ್, ಆಚಾರ್ಯ ಕೃಪಲಾನಿ ಮತ್ತು ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಸಿದ್ದಪ್ಪ ಹೊಸಮನಿ ಅವರಿಗೆ ಕೊಪ್ಪಳ ಭಾಗದ ಬರಗಾಲದ ಕುರಿತಾದ ವರದಿಯನ್ನು ಇಲ್ಲಿನ ದೇಶಭಕ್ತ ನಾಯಕರು ಭಾನಾಪುರ ರೈಲ್ವೆ ಸ್ಟೇಷನ್ನಿನಲ್ಲಿ ಒಪ್ಪಿಸಿದರು.

## ಪ್ರಜಾಪರಿಷತ್ತಿಗೆ ಕೊಪ್ಪಳದ ದೇಶಪ್ರೇಮಿಗಳು

೧೯೩೭ ರಲ್ಲಿ ಕುಡಚಿ ಗೊಡಚಿಯಲ್ಲಿ ನಡೆದ ಪ್ರಜಾ ಪರಿಷತ್ತಿನಲ್ಲಿ ಈ ಭಾಗದಿಂದ ಬಿ. ರಾಮದಾಸ್, ಶ್ರೀನಿವಾಸ ಕುಲಕರ್ಣಿ, ನರಸಿಂಗರಾವ್ ಹಂಪಿಕರ್ ಮತ್ತು ಆರ್.ಬಿ. ದೇಸಾಯಿಯವರು ಭಾಗವಹಿಸಿದ್ದರು.

ಈ ಮೇಲಿನ ಎರಡೂ ಘಟನೆಗಳಲ್ಲಿ ಒಂದು ಭಾಗದ ಬರಗಾಲದ ವರದಿ ಒಪ್ಪಿಸುವದು ಮತ್ತು ಇನ್ನೊಂದು ಈ ಭಾಗವನ್ನು ಪ್ರಜಾ ಪರಿಷತ್ತಿನಲ್ಲಿ ಪ್ರತಿನಿಧಿಸುವುದಾಗಿದ್ದರೂ ಅಂತರಂಗದಲ್ಲಿ ಸ್ವಾತಂತ್ರ್ಯದ ಒಳನೋಟವೇ ಇದ್ದಿದ್ದು ಕಂಡುಬರುತ್ತದೆ.

## ರಾಷ್ಟ್ರೀಯ ಜಾಗೃತಿ : ಗಣೇಶ ಪ್ರತಿಷ್ಠಾಪನೆ

ಬಾಲಗಂಗಾಧರ ತಿಲಕರ ಮಾದರಿಯಲ್ಲಿಯೇ ಈ ಭಾಗದಲ್ಲಿಯೂ ಗಣೇಶನ ಪ್ರತಿಷ್ಠಾಪನೆಯ ಮೂಲಕ ಬ್ರಿಟಿಷರ ವಿರುದ್ಧ ಹೋರಾಟದ ಕಿಚ್ಚನ್ನು

ಹೆಚ್ಚಿಸಲು, ಜನಜಾಗೃತಿಯನ್ನು ಮೂಡಿಸಲು ಕೋಟೆಯ ವೆಂಕಟೇಶ್ವರ ದೇವಸ್ಥಾನದಲ್ಲಿ ಸಾರ್ವಜನಿಕ ಗಣೇಶನನ್ನು ಪ್ರತಿಷ್ಠಾಪಿಸಲಾಯಿತು. ಕೋಟೆ ಏರಿಯಾದ ಅಂಗಳದಲ್ಲಿ ಗಣೇಶ ಉತ್ಸವದ ಅಂಗವಾಗಿ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿತ್ತು. ದೇಶಭಕ್ತಿ ನಾಟಕಗಳು, ದೇಶಪ್ರೇಮದ ಭಾಷಣಗಳು, ಕೀರ್ತನೆ, ಹಾಡು, ನೃತ್ಯ, ಜನಜಾಗೃತಿಯ ನಾಟಕಗಳ ಪ್ರದರ್ಶನ ನಡೆದವು. ಆಗ ನಿಜಾಮನ ಆಡಳಿತ ನಿಷೇಧ ಹೇರಿತು. ರಾಘವೇಂದ್ರರಾವ್ ಚಾಕಲಬ್ಬಿ ವಕೀಲರು ಕೋರ್ಟಿನಲ್ಲಿ ದಾವೆ ಹೂಡಿ, ವಾದ ಮಾಡಿ ಜಯಶಾಲಿಯಾಗಿ ಉತ್ಸವಕ್ಕೆ ಅನುಮತಿ ಕೊಡಿಸಲು ಯಶಸ್ವಿಯಾದರು.

೧೯೨೧ ರಿಂದಲೇ ಇಲ್ಲಿ ಗಣೇಶ ಉತ್ಸವದ ಆಚರಣೆ ಆರಂಭವಾಯಿತು. ಇದರ ಉದ್ದೇಶ ದೇಶಪ್ರೇಮ, ಜನಜಾಗೃತಿ, ಸ್ವದೇಶಿ ವಸ್ತುಗಳ ಉಪಯೋಗ, ಸ್ವದೇಶಿ ಆಡಳಿತದ ಮಹತ್ವವನ್ನು ಜನರಲ್ಲಿ ಬಿಂಬಿಸುವುದೇ ಆಗಿತ್ತು. ಅತಿರಥ ಮಹಾರಥ ಕವಿಗಳು, ಬೌದ್ಧಿಕ ಲೋಕದ ಮಹಾನುಭಾವರು ಈ ಉತ್ಸವಕ್ಕೆ ಆಗಮಿಸಿದ್ದರು. ಲೋಕನಾಯಕ ಜಯಪ್ರಕಾಶ ನಾರಾಯಣರು, ದ.ರಾ. ಬೇಂದ್ರೆ, ಹರ್ಡೇಕರ್ ಮಂಜಪ್ಪನವರು, ಶಿವರಾಂ ಕಾರಂತ, ರಂ.ಶ್ರೀ. ಮುಗಳಿ, ಜಿ.ಪಿ. ರಾಜರತ್ನಂ, ಕಾದಂಬರಿಕಾರ ಗಳಗನಾಥರು ಸೇರಿದಂತೆ ಹಲವು ಗಣ್ಯರು ಕೊಪ್ಪಳದ ಗಣೇಶ ಉತ್ಸವದಲ್ಲಿ ಭಾಗವಹಿಸಿ ಇಲ್ಲಿನ ಜನರೆದೆಯಲ್ಲಿ ದೇಶಪ್ರೇಮವನ್ನು ಬಡಿದೆಚ್ಚರಿಸುವ ಕೆಲಸ ಮಾಡಿದರು.

## ರಾಷ್ಟ್ರೀಯ ಜಾಗೃತಿ : ಬಳ್ಳೊಳ್ಳಿಯವರ ಮಿಲ್ ಆವರಣದಲ್ಲಿ ದಸರಾ ಕಾರ್ಯಕ್ರಮಗಳು

ಕಾತರಕಿ ರಸ್ತೆಯಲ್ಲಿರುವ ಬಳ್ಳೊಳ್ಳಿಯವರ ಮಿಲ್‌ನ ಆವರಣದಲ್ಲಿ ದಸರಾ ಕಾರ್ಯಕ್ರಮಗಳನ್ನು, ನಾಡಹಬ್ಬದ ಕಾರ್ಯಕ್ರಮಗಳನ್ನು ಊರ ಹಬ್ಬಗಳೆನ್ನುವ ರೀತಿಯಲ್ಲಿ ಆಚರಿಸಲಾಗುತ್ತಿತ್ತು. ನಾಡಿನ, ದೇಶದ ಘಟಾನುಘಟಿಗಳನ್ನು ಕರೆಸಿ ಇಂದಿನ ಸಾಹಿತ್ಯ ಸಮ್ಮೇಳನಗಳ ರೀತಿಯಲ್ಲಿ ಅಂದೇ ಬಳ್ಳೊಳ್ಳಿ ಮನೆತನದ ಸ್ಥಾಪಕ ವೀರಭದ್ರಪ್ಪ ಬಳ್ಳೊಳ್ಳಿಯವರು ಮಾಡುತ್ತಿದ್ದರು. ನಾಡಿನ, ನುಡಿಯ, ನೆಲದ, ಪರಂಪರೆಯ, ಸ್ವಾತಂತ್ರ್ಯದ ಪರಿಕಲ್ಪನೆಗಳನ್ನು ಬಿತ್ತಿ, ಪಸರಿಸಲು ಈ ಕಾರ್ಯಕ್ರಮಗಳು ಶ್ರಮಿಸಿದವು.



## ರಾಷ್ಟ್ರೀಯ ಜಾಗೃತಿ : ವಾಚನಾಲಯಗಳ ಆರಂಭ

೧೯೨೧ ರಲ್ಲಿ ಕೊಪ್ಪಳದಲ್ಲಿ ಸಾರ್ವಜನಿಕ ವಾಚನಾಲಯವನ್ನು ಆರಂಭಿಸಲಾಯಿತು. ಕೋಟೆ ಏರಿಯಾದ ವೆಂಕಟೇಶ್ವರ ದೇವಸ್ಥಾನದಲ್ಲಿ ಆರಂಭವಾದ ವಾಚನಾಲಯಕ್ಕೆ 'ಗಜಾನನ ವಾಚನಾಲಯ' ಎಂದು ಹೆಸರಿಡಲಾಯಿತು. ಇದರ ಜೊತೆ ಜೊತೆಯಲ್ಲಿ ಕೋಟೆ ರಸ್ತೆಯ ಮಹೇಶ್ವರ ದೇವಸ್ಥಾನದಲ್ಲಿ 'ವೀರಶೈವ ವಾಚನಾಲಯ'ವೂ ಆರಂಭವಾಯಿತು. ಈ ಭಾಗದ ಪ್ರಸಿದ್ಧ ವಾಣಿಜ್ಯೋದ್ಯಮಿಗಳಾಗಿದ್ದ ಯಜಮಾನ ವೀರಭದ್ರಪ್ಪ ಬಳ್ಳೊಳ್ಳಿಯವರು, ಜನಾರ್ದನರಾವ್ ವಕೀಲರು ಈ ಗ್ರಂಥಾಲಯಗಳ ಪ್ರಾರಂಭಕ್ಕೆ ಹೇರಳವಾಗಿ ಧನಸಹಾಯ ಮಾಡಿದರು.

ಕೊಪ್ಪಳದ ಸಮೀಪದ ಬಿಸರಳ್ಳಿಯಲ್ಲಿ ಮಾಲಿಪಾಟೀಲ (ಹಿರೇಗೌಡ್ರ) ಅವರ ಹೊಸಮನೆಯಲ್ಲಿಯೇ ವಾಚನಾಲಯವನ್ನು ಆರಂಭಿಸಲಾಯಿತು. ಈಗಲೂ ಈ ಕಟ್ಟಡಕ್ಕೆ 'ಲೈಬ್ರರಿ' ಎಂದೇ ಕರೆಯುವ ರೂಢಿ ಇದೆ. ೧೯೩೦ ರ ಹೊತ್ತಿನಲ್ಲಿ ಶಿರೂರು ವೀರಭದ್ರಪ್ಪನವರ, ಬೇಳೂರು ತಮ್ಮನಗೌಡರ ಮತ್ತು ಚೆನ್ನಪ್ಪ ಮೋಟೆಮ್ಮನವರ ಸ್ಫೂರ್ತಿದಾಯಕ ಕೆಲಸದ ಕಾರಣ ಆಡೂರು ರಾಷ್ಟ್ರೀಯ ಶಾಲೆ ಮತ್ತು 'ವಿಶ್ವನಾಥ ವಾಚನಾಲಯ' ಆರಂಭವಾಯಿತು.

ಈ ಎಲ್ಲ ವಾಚನಾಲಯಗಳಲ್ಲಿ ಆ ಕಾಲದ ಪತ್ರಿಕೆಗಳು, ಮ್ಯಾಗಜಿನ್‌ಗಳು, ಪುಸ್ತಕಗಳು ಲಭ್ಯವಿದ್ದವು. ಇವುಗಳು ಸ್ವದೇಶಿ ಮಂತ್ರ, ಗಾಂಧೀಜಿಯ ಹೋರಾಟದ ಹೆಜ್ಜೆಗಳು, ಸ್ವಾತಂತ್ರ್ಯದ ಕಿಚ್ಚನ್ನು ನಿಯಮಿತವಾಗಿ ಪ್ರಕಟಿಸಿ ಓದುಗರ, ಆ ಮೂಲಕ ಮನೆ–ಮನಗಳಲ್ಲಿ ದೇಶಪ್ರೇಮದ ಹರಿವಿಗೆ ಶ್ರಮಿಸಿದವು.

ಹೆಚ್ಚು–ಕಡಿಮೆ ಇದೇ ವರ್ಷದಲ್ಲಿ ರಾಜೂರಿನಲ್ಲಿ 'ಹರಿಜನ ಶಾಲೆ'ಯನ್ನು ತೆರೆಯಲಾಯಿತು. ಗಾಂಧೀಜಿಯವರ ಪ್ರಭಾವದ ಕಾರಣ ಬಹುತೇಕ ಕ್ಷೇತ್ರಗಳಿಂದ ವಂಚಿತರಾಗಿದ್ದ ಹರಿಜನರಿಗೆ ಪ್ರತ್ಯೇಕ ಶಾಲೆ ಮತ್ತು ಬೌದ್ಧಿಕ ಕೇಂದ್ರಗಳು ಆರಂಭವಾದವು. ಮಡಿವಂತಿಕೆಯ ಗಟ್ಟಿ ಬೇರುಗಳನ್ನು ಹೊಂದಿದ್ದ ಅಂದಿನ ಗ್ರಾಮಮಟ್ಟಗಳಲ್ಲಿ ಇಂತಹದ್ದೊಂದು ಸಾಹಸದ ಕೆಲಸಕ್ಕೆ ಪ್ರಬಲ ವಿರೋಧ ಬಂದರೂ ಶಿರೂರು ವೀರಭದ್ರಪ್ಪ ಮತ್ತು ಇನ್ನಿತರ ದೇಶಭಕ್ತ ಗಾಂಧಿ

ಅನುಯಾಯಿಗಳ ದೆಸೆಯಿಂದ ಅಸ್ಪೃಶ್ಯತಾ ನಿವಾರಣೆ, ಶಿಕ್ಷಣ ಮತ್ತು ಸಮಾನ ಅವಕಾಶಗಳ ಸದುದ್ದೇಶದ 'ಹರಿಜನ ಶಾಲೆ' ಯಶಸ್ವಿಯಾಗಿ ಕಾರ್ಯಾರಂಭ ಮಾಡಿತು. ಬ್ರಿಟೀಷರ ವಿರುದ್ಧ ಹೋರಾಡಲು ನಮ್ಮ ನಮ್ಮಲ್ಲಿ ಯಾವುದೇ ಭೇದಗಳಿಬಾರದೆಂಬ ಸೌಹಾರ್ದತೆಯ ಬೀಜಗಳನ್ನು ಬಿತ್ತಲಾಯಿತು.

ಆನಂತರ ಕೊಪ್ಪಳದ ಕಿನ್ನಾಳ ಗ್ರಾಮದ ಮುಚಿಗೇರ ಈರಪ್ಪ ಮತ್ತು ವೆಂಕಣ್ಣ ಹವಳೆಯವರು ಹರಿಜನರಿಗಾಗಿ ರಾತ್ರಿ ಶಾಲೆ ತೆರೆದರು.

## ರಾಷ್ಟ್ರೀಯ ಜಾಗೃತಿ : ವಿದ್ಯಾಸಂಸ್ಥೆಗಳು

ರಾಘವೇಂದ್ರ ಭೀಮರಾವ್ ದೇಸಾಯಿಯವರು ಜುಲೈ ೨೮, ೧೯೨೨ ರಂದು ಕುಕನೂರಿನಲ್ಲಿ ವಿದ್ಯಾನಂದ ಗುರುಕುಲ ಶಾಲೆಯನ್ನು ಸ್ಥಾಪಿಸಿದರು. ಅವರ ಬಹು ಮಹತ್ವಾಕಾಂಕ್ಷೆಯ ವಿದ್ಯಾಕೇಂದ್ರವಿದು. ಸ್ವಾತಂತ್ರ್ಯ ಚಳುವಳಿಯಲ್ಲಿ ಮತ್ತೆ ಮುಂದೆ ನಿಜಾಮನ ವಿರುದ್ಧ ನಡೆದ ವಿಮೋಚನಾ ಹೋರಾಟದಲ್ಲಿ ವಿದ್ಯಾನಂದ ಗುರುಕುಲ ಸಂಸ್ಥೆಯ ಪಾತ್ರವೇ ಒಂದು ಸುದೀರ್ಘ ಗ್ರಂಥವಾಗುತ್ತದೆ.

೧೯೩೦ ರ ಆಸುಪಾಸಿನಲ್ಲಿ ಕೊಪ್ಪಳದ ವಕೀಲರಾಗಿದ್ದ ಜನಾರ್ದನ್ ರಾವ್ ಮತ್ತು ಅವರ ಸ್ನೇಹಿತರು ಕೂಡಿ 'ಕರ್ನಾಟಕ ಸಂಘ' ಸ್ಥಾಪಿಸಿದರು.

ಕೊಪ್ಪಳದಲ್ಲಿಯೂ ಬಡ ಮಕ್ಕಳಿಗಾಗಿ ಬೋರ್ಡಿಂಗ್ ತೆರೆಯಲಾಯಿತು. ಶ್ರೀ ಗವಿಮಠದಲ್ಲಿ ರಬ್ಬೋಳಗಿಯ ಪ್ರಸಾದದ ವ್ಯವಸ್ಥೆಯಿತ್ತು. ಗವಿಮಠದ ಶ್ರೀ ಮರಿಶಾಂತವೀರ ಮಹಾಸ್ವಾಮಿಗಳು ಜ್ಞಾನದ ಹಣತೆಯನ್ನು ಹಚ್ಚಿ, ವಿದ್ಯಾರ್ಜನೆಯ ಮಹತ್ತರ ಕೆಲಸ ಮಾಡಿದರು.

ಅಧ್ಯಯನ ಕೇಂದ್ರಗಳ, ವಾಚನಾಲಯಗಳ ಸ್ಥಾಪನೆ, ಹರಿಜನ ಶಾಲೆಗಳ ಆರಂಭ, ವಿದ್ಯಾ ಸಂಸ್ಥೆಗಳ ಸ್ಥಾಪನೆಯ ಕಾರಣ ಈ ಪ್ರದೇಶದ ಶಿಕ್ಷಣಾರ್ಥಿಗಳ, ಓದುಗರ ಸಂಖ್ಯೆ ಹೆಚ್ಚಾಯಿತು. ಅಧ್ಯಯನದ ಮೂಲಕ ದೇಶಭಕ್ತ ಜನರು ಒಂದೆಡೆ ಸೇರಿ ಬ್ರಿಟಿಷರ ವಿರುದ್ಧ ಸಂಘಟಿತರಾಗುವ ಪ್ರಯತ್ನಗಳು ನಡೆದವು. ರಾಷ್ಟ್ರೀಯ ಮನೋಭಾವದ ವ್ಯಕ್ತಿತ್ವ ಮತ್ತು ದೇಶಪ್ರೇಮ ಆಯಾಮಗಳ ನಿರ್ಮಾಣದ ಗುರಿಯನ್ನು ಈ ಎಲ್ಲ ಸಂಸ್ಥೆಗಳು ಯಶಸ್ವಿಯಾಗಿ ನಿರ್ವಹಿಸಿದ್ದರ ಫಲವಾಗಿಯೇ ಸ್ವಾತಂತ್ರ್ಯದ ಹೋರಾಟಕ್ಕೆ ಮುಖ್ಯ ವೇದಿಕೆ ಸಿದ್ಧವಾಯಿತು.



## ಗೋವಿಂದರಾವ್ ಮತ್ತು ಸ್ವಾಮಿ ರಮಾನಂದ ತೀರ್ಥರ ಪ್ರವಾಸ

೧೯೩೯ ರಲ್ಲಿ ಗೋವಿಂದರಾವ್ ನಾನಲ್ ಹೈದ್ರಾಬಾದ್ ಕಾಂಗ್ರೆಸ್ಸಿನ ಅಧ್ಯಕ್ಷರಾಗಿದ್ದ ಸಮಯದಲ್ಲಿ ಸ್ವಾಮಿ ರಮಾನಂದ ತೀರ್ಥರು ಕಾರ್ಯದರ್ಶಿಗಳಾಗಿದ್ದರು. ಇವರು ಈ ಭಾಗದ ಕುಕನೂರು, ಕೊಪ್ಪಳ ಮತ್ತು ಯಲಬುರ್ಗಾ ಭಾಗದ ಹಳ್ಳಿಗಳಿಗೆ ಭೇಟಿ ಕೊಟ್ಟಿದ್ದರು. ಇದೇ ವರ್ಷ ಅಂದರೆ ೧೯೩೯ ರಲ್ಲಿ ಹೈದರಾಬಾದ್ ಕಾಂಗ್ರೆಸ್ ಸಂಸ್ಥೆಯ ಪ್ರಚಾರ ಕಾರ್ಯಕ್ಕಾಗಿ ಜೆ.ಕೆ. ಪ್ರಾಣೇಶಾಚಾರ್ಯ ಮತ್ತು ಶಿರೂರು ವೀರಭದ್ರಪ್ಪನವರು ಕೊಪ್ಪಳ ಮತ್ತು ಯಲಬುರ್ಗಾ ಪ್ರಾಂತಗಳಲ್ಲಿ ಪ್ರವಾಸ ಮಾಡಿ ಮುಂದೆ ಬರಲಿರುವ ಗಾಂಧೀಜಿಯವರ ಸೂಚನೆಯ ಮೇರೆಗೆ ಆಯೋಜಿಸಲಾಗುವ ಹೋರಾಟದ ಎಲ್ಲ ಸಿದ್ಧತೆಗಳನ್ನು ಮಾಡಿದರು.

## ವಿಧಾಯಕ ಕಾರ್ಯಕ್ರಮಗಳು

ಗಾಂಧೀಜಿಯ ಹೆಜ್ಜೆಗಳು ಹೊಸ ಕ್ರಾಂತಿಯನ್ನೇ ಹುಟ್ಟುಹಾಕಿದವು. ಸ್ವಾತಂತ್ರ್ಯ ಪಡೆಯಲು ಮೊದಲು ನಮ್ಮ ಸಮಾಜವನ್ನು ಒಂದುಗೂಡಿಸಬೇಕೆಂಬ ಸ್ಪಷ್ಟವಾದ ಅರಿವು ಗಾಂಧೀಜಿಯವರಲ್ಲಿತ್ತು. ಅದಕ್ಕಾಗಿ ಜಾತಿ, ಧರ್ಮಗಳ ಹೆಸರಿನಲ್ಲಿ ಒಡೆದು ಹೋಳಾಗಿದ್ದ ಸಮಾಜವನ್ನು ಒಂದುಗೂಡಿಸುವಲ್ಲಿ ಮತ್ತು ಸಮಾಜದ ಅನಿಷ್ಟ ಪದ್ಧತಿಗಳನ್ನು ಹೋಗಲಾಡಿಸುವಲ್ಲಿ ಶ್ರಮಿಸಿದರು.

ಗಾಂಧೀಜಿಯವರ ಖಾದಿ ಆಂದೋಲನವು – ಸ್ವದೇಶಿ ವಸ್ತುಗಳ ಬಳಕೆಯ ಆದ್ಯತೆಯನ್ನು ಒತ್ತಿ ಒತ್ತಿ ಹೇಳುತ್ತಿತ್ತು. ಹರಿಜನೋದ್ಧಾರಕ್ಕಾಗಿ ಅಸ್ಪೃಶ್ಯತಾ ನಿವಾರಣೆ ಮತ್ತು ಹರಿಜನರನ್ನು ಒಳಗೊಳ್ಳುವುದು, ದೇವಸ್ಥಾನ, ಮಂದಿರಗಳಿಗೆ ಹರಿಜನರ ಪ್ರವೇಶ, ಸ್ವಚ್ಛತೆಯ ಬದುಕಿಗೆ ಆದ್ಯತೆ, ವಿದೇಶದ ವಸ್ತುಗಳನ್ನು ಬಹಿಷ್ಕರಿಸುವ, ಸಾರಾಯಿ ಸೇವಿಸದಿರುವ, ಈಚಲುಮರಗಳನ್ನು ಕಡಿಯುವ, ಅಹಿಂಸಾತ್ಮಕ ಮಾರ್ಗದಲ್ಲಿ ಹೋರಾಟ ಹೀಗೆ ಗಾಂಧೀಜಿಯವರ ತತ್ವಗಳನ್ನು ಕೃತಿಗಿಳಿಸುವ ಕೆಲಸ ದೇಶದೆಲ್ಲೆಡೆ ನಡೆಯುತ್ತಿದ್ದಂತೆ, ಕೊಪ್ಪಳದ ಭಾಗದಲ್ಲಿಯೂ ತೀವ್ರತೆಯನ್ನು ಪಡೆಯಿತು. ಬ್ರಾಹ್ಮಣ ಸನ್ಯಾಸಿ ಭೀಮಜ್ಜ ಮುರುಡಿ ಕುಷ್ಟಗಿಯಲ್ಲಿ ತಮ್ಮ ಆಶ್ರಮಕ್ಕೆ ಬರುತ್ತಿದ್ದ ಹರಿಜನರ ಪಾದಗಳಿಗೆ

ತಾವೇ ನೀರು ಹಾಕಿ, ಆ ನೀರನ್ನು ಮೈ ಮೇಲೆ ಹಾಕಿಕೊಳ್ಳುತ್ತಿದ್ದರು. ಮುರಡಿಯ ಬಸವಣ್ಣ ದೇವರ ಗುಡಿಗೆ ಹರಿಜನರನ್ನು ಪ್ರವೇಶ ಮಾಡಿಸಿದರು.

ಕೊಪ್ಪಳದ ಅಳವಂಡಿಯಲ್ಲಿ ಶ್ರೀ ಶಿವಮೂರ್ತಿ ಸ್ವಾಮಿಗಳ ಮಠದಲ್ಲಿ ಹರಿಜನರಿಗೆ ಪ್ರವೇಶವಿತ್ತು. ಅಲ್ಲಿ ಅವರನ್ನು ಗೌರವಯುತವಾಗಿ ಕಾಣಲಾಗುತ್ತಿತ್ತು. ಕೊಪ್ಪಳದ ಕೊಟಗಾರ ಓಣಿಯಲ್ಲಿ ಪ್ರಜ್ಞಾವಂತ ದೇಶಭಕ್ತರು ಕಸ ಗುಡಿಸಿ ಮನುಜ ಮತವನ್ನು ಸಾರಿದರು. ವಂಕಲಕುಂಟಿ ಕಲ್ಭಾವಿ ಕಮಲಮ್ಮ, ಸುಭದ್ರಮ್ಮ ಹರಿಜನ ಸೇವೆಗಾಗಿ ಅವಿರತ ದುಡಿದರು.

ಕೊಪ್ಪಳ ತಾಲ್ಲೂಕಿನ ಹಲವು ಹಳ್ಳಿಗಳಲ್ಲಿ (ಗಿಣಗೇರಿ, ಅಳವಂಡಿ, ಹಿಟ್ನಾಳ, ಕಿನ್ನಾಳ) ಜನತೆ ಈಚಲುಮರಗಳನ್ನು ಕಡಿದು, ಸಾರಾಯಿ ಸೇವನೆಯ ವಿರುದ್ಧ ಧ್ವನಿಯಾದರು. ಇದರಲ್ಲಿ ಮಹಿಳೆಯರೂ ಪಾಲುಗೊಂಡಿದ್ದು ಗಮನ ಸೆಳೆಯಿತು.

## ಹೈದರಾಬಾದ ಕೋಟೆಯ ಮೇಲೆ ಭಾರತದ ಧ್ವಜ ಹಾರಿಸಿದ ಕೊಪ್ಪಳದ ಬಸವಂತರಾವ್ ಕಾಟ್ರಳ್ಳಿ

ಕೊಪ್ಪಳದ ಬಸವಂತರಾವ್ ಪಾಟೀಲರು ಹೈದರಾಬಾದಿನಲ್ಲಿ ಓದುತ್ತಿದ್ದರು. ಆಗ ಉನ್ನತ ವ್ಯಾಸಂಗಕ್ಕಾಗಿ ಹೈದರಾಬಾದ್ ಒಂದೇ ಈ ಭಾಗದ ಆಧಾರವಾಗಿತ್ತು. ಇವರು ಭಾರತದ ಕೋಗಿಲೆ ಖ್ಯಾತಿಯ, ಗಾಂಧೀಜಿಯ ಆಪ್ತರಾಗಿದ್ದ ಸರೋಜಿನಿ ನಾಯ್ಡು ಮತ್ತು ರಾಷ್ಟ್ರಮಟ್ಟದ ನಾಯಕರೊಡನೆ ಉತ್ತಮ ಸಂಬಂಧವಿತ್ತು. ಆರ್ಯಸಮಾಜದ ತತ್ವಾದರ್ಶಗಳಿಗೆ ಮಾರು ಹೋಗಿದ್ದರು. ಅದು ೧೯೩೦ ರ ಇಸ್ವಿ, ಹೈದರಾಬಾದ್ ಕೋಟೆಯ ಮೇಲೆ ತ್ರಿವರ್ಣ ಧ್ವಜ ಹಾರಿಸುವ ಆರ್ಯಸಮಾಜದ ನಿರ್ಧಾರವಾಯಿತು. ಬಿಗಿಯಾದ ಪೊಲೀಸ್ ಬಂದೋಬಸ್ತ್ ಕೋಟೆಯ ಕಾವಲಿಗಿತ್ತು. ಧ್ವಜ ಹಾರಿಸುವ ಜವಾಬ್ದಾರಿಯನ್ನು ಹೊತ್ತುಕೊಂಡಿದ್ದು ಇದೇ ಕೊಪ್ಪಳದ ಹೆಮ್ಮೆಯ ಬಸವಂತರಾವ್ ಕಾಟ್ರಳ್ಳಿ. ಬುರ್ಖಾ ತೊಟ್ಟು, ಗಿಡ ಏರಿ, ಕೋಟೆಯೊಳಗೆ ಜಿಗಿದು, ಧ್ವಜ ಹಾರಿಸಿ ಪಾರಾದರು. ನಂತರದ ದಿನಗಳಲ್ಲಿ ಬಂಧಿಯಾದರು. ೧೯೪೩ ರ ವರೆಗೂ ಹೈದರಾಬಾದಿನಲ್ಲಿಯೇ ಇದ್ದು ನಿಜಾಮನ ಮತ್ತು



ಬ್ರಿಟಿಷರ ವಿರುದ್ಧ ಸಮರದಲ್ಲಿ ನಿರಂತರವಾಗಿ ಭಾಗವಹಿಸಿದ್ದರು. ಕೊಪ್ಪಳದಲ್ಲಿ ಬರಗಾಲ ಆವರಿಸಿದಾಗ ಪದ್ಮಜಾನಾಯ್ಡು ಮತ್ತು ರವಿನಾರಾಯಣರೆಡ್ಡಿ ನಿಯೋಗವನ್ನು ಕರೆಸಿ ಬರಗಾಲದ ವಿಪತ್ತು ನಿರ್ವಹಣೆಗಾಗಿ, ಪರಿಹಾರಕ್ಕಾಗಿ ನಿಜಾಮನಿಗೆ ವರದಿ ಕೊಡಿಸಿ, ಈ ಭಾಗದ ಹಫ್ತೆ (ಕಂದಾಯ) ಮಾಫು ಮಾಡುವಂತೆ ಮಾಡಿ ಮಹದುಪಕಾರ ಮಾಡಿದರು.

೧೯೩೮ ರಲ್ಲಿ ಹೈದರಾಬಾದಿನಲ್ಲಿ ಕಾಂಗ್ರೆಸ್ ಸತ್ಯಾಗ್ರಹವನ್ನು ಪ್ರಥಮ ಬಾರಿಗೆ ಮಾಡಲಾಯಿತು. ಇದಕ್ಕೆ ಕಾರಣ ರಾಜ್ಯ ಕಾಂಗ್ರೆಸ್‌ನ್ನು 'ಜಾತೀಯ ಸಂಸ್ಥೆ' ಎಂದು ನಮೂದಿಸಿದ್ದು. ಒಟ್ಟು ೧೮ ಬ್ಯಾಚುಗಳಲ್ಲಿ ಹೋರಾಟಗಾರರನ್ನು ಬಂಧಿಸಿ ಜೈಲಿಗೆ ಕಳಿಸಲಾಯಿತು. ಕೊಪ್ಪಳದ ಬಸವರಂತರಾವ್ ಕಾಟ್ರಳ್ಳಿ ಮತ್ತು ಸ್ನೇಹಿತರು ೩ ನೇ ಬ್ಯಾಚಿನಲ್ಲಿದ್ದರು. ಇವರನ್ನು ಬಂಧಿಸಿ ಜೈಲಿಗೆ ಕಳಿಸಲಾಯಿತು. ಇದೇ ಹೋರಾಟದಲ್ಲಿ ಇಟಗಿ ವಿರೂಪಾಕ್ಷಯ್ಯಸ್ವಾಮಿ ಹಿರೇಮಠರು, ನರಸಿಂಗರಾವ್ ಹಂಪೀಕರ ಮೊದಲಾದ ಕೊಪ್ಪಳದವರಿದ್ದರು.

೧೯೪೩ ರಲ್ಲಿ ಬಸವಂತರಾವ್ ಕಾಟ್ರಳ್ಳಿಯವರು ಜೈಲಿನಿಂದ ಬಿಡುಗಡೆಯಾಗಿ ಕೊಪ್ಪಳಕ್ಕೆ ಬಂದು ಶಿರೂರು ವೀರಭದ್ರಪ್ಪನವರಿಗೆ ಬಲಗೈಯಾಗಿ ದುಡಿದರು.

## ನಿಜಾಮ ಸಿಂಹಾಸನದ ರಜತ ಮಹೋತ್ಸವ ಮತ್ತು ವಂದೇ ಮಾತರಂ ಚಳುವಳಿ

೧೯೩೭ ರಲ್ಲಿ ನವಾಬ ಮೀರ್ ಉಸ್ಮಾನ್ ಅಲಿ ಸಿಂಹಾಸನಕ್ಕೆ ಬಂದು ೨೫ ವರ್ಷಗಳಾದ ಸಂಭ್ರಮದಲ್ಲಿ ಹೈದರಾಬಾದ್ ಸಂಸ್ಥಾನದಾದ್ಯಂತ ಅನೇಕ ಉತ್ಸವದ ಕಾರ್ಯಕ್ರಮಗಳನ್ನು ಆರಂಭಿಸಲಾಯಿತು. ಸ್ವಯಂ ಪ್ರೇರಿತ ಜನ ಸಮುದಾಯ ಮತ್ತು ಕೆಲವು ವೇದಿಕೆಗಳು ತಮ್ಮ ಹಕ್ಕುಗಳಿಗಾಗಿ ಹೋರಾಟವನ್ನು ತೀವ್ರಗೊಳಿಸಿದವು. ಇದೇ ಸಂದರ್ಭದಲ್ಲಿ ರಾಷ್ಟ್ರದ್ರೋಹದ ಹಾಡೆಂದು 'ವಂದೇ ಮಾತರಂ' ನ್ನು ನಿಷೇಧ ಮಾಡಿದರು. ೧೯೩೮ ರ ದಸರಾ ಹಬ್ಬದಲ್ಲಿ ಇದರಿಂದ ಹಲವು ಯುವಕರು, ವಿದ್ಯಾರ್ಥಿಗಳು ಬಂಡೆದ್ದರು. ಕಾಲೇಜು ಕ್ಯಾಂಪಸ್‌ನ ಮಸೀದೆಯಲ್ಲಿಯೇ ವಂದೇ ಮಾತರಂ ಹಾಡನ್ನು ಹಾಡಿದರು.

ವಿಶ್ವವಿದ್ಯಾಲಯದ ಕ್ಯಾಂಪಸ್ಸು ಮತ್ತು ಅದರ ಸುತ್ತ ಮುತ್ತ ನಿಷೇಧದ ನಡುವೆಯೂ ವಿದ್ಯಾರ್ಥಿಗಳು ಈ ಹಾಡನ್ನು ಗುನುಗುನಿಸುತ್ತಲೇ ಇದ್ದರು. ಹೋರಾಟದ ತೀವ್ರತೆ ಹೆಚ್ಚಾಗುತ್ತಲೇ ಚಳುವಳಿಯನ್ನು ಮಟ್ಟ ಹಾಕಲು ೩೫೦ ವಿದ್ಯಾರ್ಥಿಗಳನ್ನು ವಿಶ್ವವಿದ್ಯಾಲಯದಿಂದ ಹೊರಹಾಕಿದರು. ೭೦ ವಿದ್ಯಾರ್ಥಿಗಳನ್ನು ಸಿಟಿ ಕಾಲೇಜಿನಿಂದಲೂ, ೩೧೦ ವಿದ್ಯಾರ್ಥಿಗಳನ್ನು ರಾಯಚೂರು, ಗುಲಬರ್ಗಾ ಕಾಲೇಜುಗಳಿಂದಲೂ ಹೊರಹಾಕಿದರು. ಸಿಟ್ಟಿಗಿದ್ದ ವಿದ್ಯಾರ್ಥಿ ಸಮುದಾಯಕ್ಕೆ ವಿವಿಧ ಸಂಘ, ಸಂಘಟನೆಗಳ ಬೆಂಬಲವೂ ವ್ಯಾಪಕವಾಗಿ ದೊರೆಯಿತು.

ಈ ಚಳುವಳಿಯಲ್ಲಿ ಕೊಪ್ಪಳ ಭಾಗದ ವಿದ್ಯಾರ್ಥಿಗಳೂ ಭಾಗವಹಿಸಿದ್ದರು. ಶಿವಮೂರ್ತಿಸ್ವಾಮಿ ಅಳವಂಡಿ, ಬಸವಂತರಾವ ಕಾಟ್ರಳ್ಳಿಯವರನ್ನು ಉಸ್ಮಾಮನಿಯಾ ವಿಶ್ವವಿದ್ಯಾಲಯದಿಂದ, ಇಟಗಿ ವಿರೂಪಾಕ್ಷಯ್ಯ ಹಿರೇಮಠ, ವೀರಪ್ಪ ಮೆಣಸಿನಕಾಯಿ ಕೊಪ್ಪಳ, ಶಂಕರಪ್ಪ ಬಂಗಾರಶೆಟ್ಟರ್ ಕೊಪ್ಪಳ ಮೊದಲಾದವರನ್ನು ಕೊಪ್ಪಳ ಉಸ್ಮಾನಿಯಾ ಹೈಸ್ಕೂಲಿನಿಂದ ಉಚ್ಚಾಟಿಸಲಾಯಿತು. ಇವರೆಲ್ಲ ಕೊಪ್ಪಳವನ್ನು ಕೇಂದ್ರವಾಗಿಟ್ಟುಕೊಂಡೇ ಸ್ವಾತಂತ್ರ್ಯ ಹೋರಾಟದಲ್ಲಿ ಧುಮುಕಿದರು.

## ಹೋರಾಟದ ಮುಖ್ಯ ವೇದಿಕೆಯಾಗಿ ಕೊಪ್ಪಳ

೧೯೪೦ ರ ಸುಮಾರಿಗೆ ಕೊಪ್ಪಳ ಸ್ವಾತಂತ್ರ್ಯ ಹೋರಾಟದ ಬಹುಮುಖ್ಯ ಕೇಂದ್ರವಾಗಿ ಪರಿವರ್ತನೆಯಾಗಿತ್ತು. ಕೊಪ್ಪಳದಲ್ಲಿ ಪ್ರತಿದಿನವೂ ಹೋರಾಟದ ಪ್ರಕಟಣೆಗಳನ್ನು, ಸೂಚನೆಗಳನ್ನು ಹಂಚಲಾಗುತ್ತಿತ್ತು ರೂಪುರೇಷೆಗಳನ್ನು ಸಿದ್ಧಪಡಿಸಲಾಗುತ್ತಿತ್ತು. ಅಂಥ ಒಂದು ಬಹುದೊಡ್ಡ ದೇಶಪ್ರೇಮಿಗಳ ತಂಡವೇ ಇಲ್ಲಿ ಸೃಷ್ಟಿಯಾಗಿತ್ತು. ಇದರಿಂದಾಗಿ ಕೊಪ್ಪಳಕ್ಕೆ ಬರುವ ಹೋರಾಟಗಾರರ ತಂಡ ದಿನದಿಂದ ದಿನಕ್ಕೆ ಹೆಚ್ಚಾಗುತ್ತಲೇ ಹೋಯಿತು ಈ ಹೋರಾಟಗಾರರಿಗೆ ಸ್ಥಳೀಯ ಕಾರ್ಯಕರ್ತರು, ಶ್ರೀಮಂತರಿಂದ ಸವಲತ್ತುಗಳು ಒದಗುತ್ತಿದ್ದವು.

೧೯೪೦ ರಲ್ಲಿ ದೊಡ್ಡಮೇಟಿ ಅಂದಾನಪ್ಪ ಗೌಡರು ಮತ್ತು ಹಳ್ಳಿಕೇರಿ ಗುದ್ಲೆಪ್ಪನವರು ಈ ಭಾಗಗಳಲ್ಲಿ ಪ್ರವಾಸವನ್ನು ಮಾಡಿ ಜನಜಾಗೃತಿ ಮೂಡಿಸಿದರು.



ಇದೇ ಸಮಯದಲ್ಲಿ ಹೈದ್ರಾಬಾದ್ ಕಾಂಗ್ರೆಸ್ ಸಂಸ್ಥಾನವು ಚಳುವಳಿಯನ್ನು ಆರಂಭಿಸಿತು. ಕೊಪ್ಪಳ ಭಾಗದಿಂದ ಇದರ ಪ್ರತಿನಿಧಿಯಾಗಿ ಇಟಗಿ ವಿರೂಪಾಕ್ಷಯ್ಯ ಸ್ವಾಮಿ, ಅಂದಾನೆಪ್ಪ ಕೋಳೂರು, ವೀರಪ್ಪ ಮೆಣಸಿನಕಾಯಿ, ಕರಿಬಸಪ್ಪ ನಲವಡಿ, ಶಿವಕುಮಾರಯ್ಯ ಹಿರೇಅಳಗುಂಡಿ ಸತ್ಯಾಗ್ರಹ ಮಾಡಿದರು. ಬಸವಂತರಾವ್ ಕಾಟ್ರಹಳ್ಳಿಯವರು ಹೈದರಾಬಾದಿನಲ್ಲಿಯೂ ಕೆಲವು ಕಾರ್ಯಕರ್ತರನ್ನು ಕರೆದುಕೊಂಡು ಹೋಗಿ ಸತ್ಯಾಗ್ರಹ ಮಾಡಿದರು.

ಈ ಎಲ್ಲ ಹೋರಾಟಗಳ ಹಿಂದಿನ ಗುರಿ ಈ ಹೊತ್ತಿಗೆ ನಿಚ್ಚಳವಾಗಿತ್ತು. ಬ್ರಿಟಿಷರಿಂದ ಮತ್ತು ನಿಜಾಮನಿಂದ ನಮ್ಮ ನೆಲವನ್ನು ಮುಕ್ತಗೊಳಿಸುವ ಮತ್ತು ನಮ್ಮ ಆಡಳಿತವನ್ನು ನಾವೇ ಹೊಂದುವುದಕ್ಕಾಗಿನ ಜಾಗೃತಿಯ ಕರೆಗಂಟೆಗಳಾಗಿದ್ದವು.

## 'ಮಾಡು ಇಲ್ಲವೇ ಮಡಿ' – ಅಂತಿಮ ಹೋರಾಟ : ಮುಂಬೈ ಅಧಿವೇಶನ

ಈ ನಡುವೆ ಸ್ವಾಮಿ ರಮಾನಂದ ತೀರ್ಥರು ಹೈದರಾಬಾದ್ ಪ್ರಾಂತದಲ್ಲಿ ನಿಜಾಮನ ದಬ್ಬಾಳಿಕೆ ಮತ್ತು ಬ್ರಿಟಿಷ್ ಆಡಳಿತದ ದೌರ್ಜನ್ಯ ಕುರಿತಾಗಿ ವಿವರಿಸಲು ಮತ್ತು ಹೈದರಾಬಾದ್ ಸ್ವಾತಂತ್ರ್ಯ ಹೋರಾಟದ ನಿಲುವನ್ನು ಖಚಿತಪಡಿಸಿಕೊಳ್ಳಲು ಗಾಂಧೀಜಿಯವರನ್ನು ಕಾಣಲು ಗುಜರಾತಿನ ಸೇವಾಗ್ರಾಮಕ್ಕೆ ೧೯೪೨ ರಲ್ಲಿ ಭೇಟಿ ನೀಡುತ್ತಾರೆ. ಆಗ ಗಾಂಧೀಜಿಯವರು ಹೈದರಾಬಾದ್ ಪ್ರಾಂತದ ಪ್ರಸ್ತುತ ಹೋರಾಟದ ತೀವ್ರತೆಯನ್ನು ಕಾಪಾಡಿಕೊಳ್ಳುವಂತೆಯೂ, ಮುಂಬೈಯಲ್ಲಿ ನಡೆಯುವ ಕಾಂಗ್ರೆಸ್ ಅಧಿವೇಶನದಲ್ಲಿ ಬ್ರಿಟಿಷರ ಆಳ್ವಿಕೆ ಧಿಕ್ಕರಿಸುವ ನಿರ್ಣಯದೊಂದಿಗೆ, ಭಾರತದ ಎಲ್ಲಾ ರಾಜ ಸಂಸ್ಥಾನಗಳಿಗೂ ಸಂಬಂಧಿಸಿದ ನಿರ್ಣಯಗಳನ್ನು ಕೈಗೊಳ್ಳುವ ಭರವಸೆ ನೀಡುತ್ತಾರೆ.

೧೯೪೨ ರ ಜುಲೈ ೧೬ ರಂದು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ವಾರ್ಧಾದಲ್ಲಿ ಸಭೆ ಸೇರಿ, ಆಗಸ್ಟ್ ೭ ಮತ್ತು ೮ ರಂದು ಮುಂಬೈಯಲ್ಲಿ ಕಾಂಗ್ರೆಸ್ ಮಹಾಧಿವೇಶನ ನಡೆಸುವ ನಿರ್ಣಯವಾಗುತ್ತದೆ. ಮಹಾಧಿವೇಶನಕ್ಕೆ ೪ ದಿನ ಮೊದಲು, ಆಗಸ್ಟ್ ೩ ರಂದು ಸರದಾರ ವಲ್ಲಭಭಾಯಿ ಪಟೇಲರು ಆಡಳಿತ ಯಂತ್ರದ ಪೂರ್ತಿ ಸ್ತಂಭನಕ್ಕೆ ಕರೆ ನೀಡುತ್ತಾರೆ.

ಎರಡನೇ ಮಹಾಯುದ್ಧದ ಛಾಯೆ ಸ್ವಾತಂತ್ರ್ಯ ಹೋರಾಟದ ಮೇಲೂ ಪರಿಣಮಿಸಿದಂತೆ ತೋರುತ್ತದೆ. ಹೋರಾಟ ತೀವ್ರತೆ ಹೊಂದುತ್ತಲೇ ಆಗಸ್ಟ್ ೮, ೧೯೪೨ ರಂದು ಗಾಂಧೀಜಿಯವರು 'ಮಾಡು ಇಲ್ಲವೇ ಮಡಿ' ಘೋಷಣೆಯೊಂದಿಗೆ ಧುಮುಕಿದರು. 'ಚಲೇ ಜಾವ್' ಶಬ್ದ ಭಾರತೀಯರ ರೋಮರೋಮಗಳಲ್ಲೆಲ್ಲ ಹರಿದಾಡಿತು. ಭಾರತೀಯರೆದೆಯಲ್ಲಿ ಹೊಸ ಸಂಚಲನ ಉಂಟಾಯಿತು. ಗಾಂಧೀಜಿ, ನೆಹರೂ, ಕಸ್ತೂರಬಾ ಗಾಂಧಿ ಮೊದಲಾದವರನ್ನು ಅಹಮ್ಮದನಗರ ಕೋಟೆಯ ಆಘಾಕಾನ ಅರಮನೆಯಲ್ಲಿಯೇ ಬಂಧಿಸಲಾಯಿತು.

ಈ ಕಡೆ ರಮಾನಂಥ ತೀರ್ಥರು ಹೈದರಾಬಾದಿಗೆ ಬರುತ್ತಲೇ ರೈಲ್ವೆ ಸ್ಟೇಷನ್‌ನಲ್ಲಿ ಬಂಧನವಾಗುತ್ತದೆ.

## ಮುಂಬೈ ಅಧಿವೇಶನದಲ್ಲಿ ಕೊಪ್ಪಳಿಗರು : ಚಲೇಜಾವ್ ಚಳುವಳಿಯಲ್ಲಿ ಕೊಪ್ಪಳ

ಆಗಸ್ಟ್ ೭ ರಂದು ೮ ರ ವರೆಗೆ ಮುಂಬೈಯಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ 'ಮಾಡು ಇಲ್ಲವೇ ಮಡಿ' ಘೋಷಣೆಯ ಅಂಗೀಕಾರವಾಗಿ, ಹೋರಾಟದ ತೀವ್ರತೆ ಹೆಚ್ಚಿಸಲು ಮಹಾತೀರ್ಮಾನವಾಯಿತು. ಈ ಕಾಂಗ್ರೆಸ್ ಅಧಿವೇಶನಕ್ಕೆ ಕೊಪ್ಪಳ ಭಾಗದಿಂದ ರಾಮಭಟ್ ಜೋಶಿ ಮತ್ತು ಕೆ. ಹಂಪಯ್ಯ ಭಾಗಯಾಗಿದ್ದರು. ಗಾಂಧೀಜಿಯವರ 'ಮಾಡು ಇಲ್ಲವೇ ಮಡಿ' ಆದೇಶವನ್ನು ನೇರವಾಗಿ ನೋಡಿ ಅನುಭವಿಸಿ ರೋಮಾಂಚನಕ್ಕೊಳಗಾದರು. ಮುಖತಃ ಗಾಂಧೀಜಿ, ಸರದಾರ ಪಟೇಲ್, ನೆಹರೂ ಮೊದಲಾದ ನಾಯಕರನ್ನು ಭೇಟಿ ಮಾಡಿ, ಮಾತಾಡಿಸಿ, 'ಮಾಡು ಇಲ್ಲವೇ ಮಡಿ ಆದೇಶ' ಪಡೆದುಕೊಂಡು ಬಂದರು.

ಆಗಸ್ಟ್ ೨೫, ೧೯೪೨ ರಂದು ಗಾಂಧೀಜಿ ಮತ್ತು ಇನ್ನಿತರ ನಾಯಕರ ಬಿಡುಗಡೆಗೆ ಒತ್ತಾಯಿಸುವುದರೊಂದಿಗೆ ಈ ಭಾಗದಲ್ಲಿ 'ಚಲೇಜಾವ್' ಚಳುವಳಿ ಆರಂಭವಾಯಿತು. ಗುಡ್ಡನಗೌಡ, ಲಿಂಗನಗೌಡ ಮತ್ತು ಮುದಿಗೌಡರು ಮಾಡಿದ ಈ ಹೋರಾಟಕ್ಕೆ ಅವರನ್ನು ಬಂಧಿಸಲಾಯಿತೆನ್ನುವ ಮಾಹಿತಿ ಇದೆ.



'ಭಾರತ ಬಿಟ್ಟು ತೊಲಗಿ' ಘೋಷಣೆಯು ಧಮನಿ ಧಮನಿಯಲ್ಲಿ ಹರಿದಾಡಿ, ದೇಶಪ್ರೇಮದ ಉತ್ತುಂಗದ, ಉನ್ಮಾದದ ಸ್ಥಿತಿಯಲ್ಲಿದ್ದಾಗ ಹದಿವಯಸ್ಸಿನ ವಿದ್ಯಾರ್ಥಿಗಳಲ್ಲಿನ ಸಂಚಲನ ಎಷ್ಟರಮಟ್ಟಿಗಿತ್ತೆಂದರೆ ಕೊಪ್ಪಳದ ಉಸ್ಮಾನಿಯಾ ಹೈಸ್ಕೂಲಿನ ವಿಜ್ಞಾನದ ಪ್ರಯೋಗಶಾಲೆಯನ್ನು ಸುಟ್ಟು, ತಮ್ಮ ರೋಷವನ್ನು ವ್ಯಕ್ತಪಡಿಸಿದರು. ಹಲವು ಯುವಕರ ಮೇಲೆ ಸಂಶಯ ವ್ಯಕ್ತವಾದರೂ ಕೊನೆಗೆ ಶಾಲೆಗೆ ಬೆಂಕಿಯಿಟ್ಟದ್ದು ನಾಗಪ್ಪ ಅಬ್ಬಿಗೇರಿ ಎನ್ನುವ ಕೊಪ್ಪಳದ ವಿದ್ಯಾರ್ಥಿ ಎಂದು ತಿಳಿದುಬರುತ್ತದೆ.

ಹುಬ್ಬಳ್ಳಿ–ಗದಗ ಮಾರ್ಗದ ರೈಲುಕಂಬಿ ಕೀಳುವುದು, ವಿದ್ಯಾಭ್ಯಾಸವನ್ನು ಮೊಟಕುಗೊಳಿಸಿ ಸ್ವಾತಂತ್ರ್ಯ ಹೋರಾಟದಲ್ಲಿ ಧುಮುಕುವುದು, ಮನೆ–ಮಠಗಳನ್ನು ತ್ಯಾಗ ಮಾಡಿ ದೇಶಕ್ಕೋಸ್ಕರ ಕೆಲಸ ಮಾಡುವುದು, ಹೋರಾಟಗಳಲ್ಲಿ ಭಾಗಿಯಾಗಿ ಜೈಲಿಗೆ ಹೋಗುವುದು ಕೊಪ್ಪಳದ ನೆಲದಲ್ಲಿ ಸಾಮಾನ್ಯ ವಾಯಿತು.

## 'ಚಲೇಜಾವ್ ಚಳುವಳಿ'ಗೆ ಪರ್ಯಾಯವಾದ 'ಆಜಾದ್ ಹೈದರಾಬಾದ್'

ಶ್ರೀಸಾಮಾನ್ಯನಿಗೆ ಹೊಟ್ಟೆ ಹೊರೆಯುವುದೇ ದುಸ್ತರವಾಗಿದ್ದ ಹಿನ್ನೆಲೆಯಲ್ಲಿ 'ಯಾರು ಆಳಿದರೇನು, ನಮ್ಮ ಪಾಡಿಗೆ' ಎನ್ನುವ ಮಟ್ಟಕ್ಕೆ ಈ ಭಾಗದ ರೈತರ, ಕೂಲಿಕಾರರ ಪರಿಸ್ಥಿತಿ ಬಿಗಡಾಯಿಸಿತ್ತು. ಮತ್ತೆ ಮೇಲೆ ಬರಗಾಲದ ಬಾರುಕೋಲಿನ ಏಟಿಗೂ ಜನ ತತ್ತರಿಸಿದ್ದರು. ಸ್ವದೇಶೀ ಆಡಳಿತ ಬಂದು, ದೌರ್ಜನ್ಯಕ್ಕೆ ಕಡಿವಾಣ ಹಾಕಲಾಗುತ್ತದೆ ಎಂಬ ಭರವಸೆಯನ್ನು ಗಾಂಧೀಜಿಯವರ ಮೇಲೆ ಇಡಲಾಗಿತ್ತು. ದೇಶದ ಐಕ್ಯತೆಗಾಗಿ, ಸ್ವದೇಶಿ ಆಡಳಿತಕ್ಕಾಗಿ 'ಚಲೇಜಾವ್' ಕರೆ ಕೊಟ್ಟ ಬೆನ್ನಲ್ಲೇ ಬ್ರಿಟಿಷ್ ಮತ್ತು ನಿಜಾಮನ ಆಡಳಿತದ ಕಪ್ಪುಚುಕ್ಕೆ ಹೋಗಲಾಡಿಸಲಾಗುತ್ತದೆ ಎಂಬ ಆಸೆಗೆ ತಣ್ಣೀರೆರಚುವಂತೆ ಹೈದರಾಬಾದ್‌ನ ಕೆಲವು ಪ್ರತಿಗಾಮಿ ಶಕ್ತಿಗಳು 'ಆಜಾದ್ ಹೈದರಾಬಾದ್' ಘೋಷಣೆ ಕೂಗಿದರು. ಹೈದರಾಬಾದ್ ಪ್ರಾಂತವನ್ನು ಪ್ರತ್ಯೇಕವಾಗಿಡುವ ಕೆಲವರ ಹುನ್ನಾರ ಇದರಲ್ಲಿ ಅಡಗಿತ್ತು. ಇದು ದೇಶದ ಐಕ್ಯತೆಗಾಗಿ ಹಗಲಿರುಳು ಹೋರಾಡುತ್ತಿದ್ದವರಿಗೆ ಭಾರೀ ಕಸಿವಿಸಿಯುಂಟುಮಾಡಿತು.

೧೯೪೬ ರಲ್ಲಿ ಲಕ್ಷ್ಮಣಾಚಾರ್ಯ ಅಗ್ನಿಹೋತ್ರಿಯವರ ಅಧ್ಯಕ್ಷತೆಯಲ್ಲಿ ಮತ್ತು ವೀರಭದ್ರಪ್ಪ ಶಿರೂರ ಅವರ ಕಾರ್ಯದರ್ಶಿತ್ವದಲ್ಲಿ 'ಪ್ರಜಾಸಮಿತಿ' ಎಂಬ ಸಂಘ ಆರಂಭಿಸಲಾಯಿತು. ಈ ಭಾಗದ ಬಡವರ ಮೇಲೆ ನಡೆಯುತ್ತಿದ್ದ ಲೇವಿಯ (ಸುಂಕ) ಅವೈಜ್ಞಾನಿಕ ವಸೂಲಾತಿಯ ವಿರುದ್ಧ ಜನಾಂದೋಲನ ನಡೆಯಿತು. ಚೆನ್ನಪ್ಪ, ಮೋಟಮ್ಮನವರ ಮತ್ತು ಸ್ನೇಹಿತರ ಪಾತ್ರವೂ ಇದರಲ್ಲಿ ಅನನ್ಯವಾಗಿದೆ.

**'ಕ್ಯಾಬಿನೆಟ್ ಮಿಷನ್ ಆಗಮನ ಮತ್ತು ಸ್ವಾತಂತ್ರ್ಯದ ಹೊಸ ಉತ್ಸಾಹ'**

ದ್ವಿತೀಯ ಮಹಾಯುದ್ಧದಲ್ಲಿ ಗೆದ್ದು ಬೀಗಿದ್ದರೂ, ಬ್ರಿಟನ್ ದೇಶ ಸಾಕಷ್ಟು ತತ್ತರಿಸಿತ್ತು. ದ್ವಿತೀಯ ಮಹಾಯುದ್ಧದಲ್ಲಿ ಕಾಂಗ್ರೆಸ್ ಸಹಕರಿಸಿದರೆ, ಯುದ್ಧಾನಂತರ ಸ್ವಾತಂತ್ರ್ಯದ ಭರವಸೆ ನೀಡಿತ್ತು. ಕನ್ಸರವೇಟಿವ್ ಪಕ್ಷದ ಚರ್ಚಿಲ್‌ರು ಆಗ ಬ್ರಿಟನ್ ಪ್ರಧಾನಿಯಾಗಿದ್ದರು. ೧೯೪೫ ರಲ್ಲಿ ನಡೆದ ಸಾರ್ವತ್ರಿಕ ಚುನಾವಣೆಯಲ್ಲಿ ಲೇಬರ್ ಪಕ್ಷದಿಂದ ಸ್ಪರ್ಧಿಸಿ ಆ್ಯಟ್ಲೆಯವರು ಬ್ರಿಟನ್ ಪ್ರಧಾನಿಯಾದರು. ಹೊಸ ಪ್ರಧಾನಿ ಆ್ಯಟ್ಲೆ ಭಾರತಕ್ಕೆ ಸ್ವಾತಂತ್ರ್ಯ ನೀಡುವ ಚರ್ಚೆಗಾಗಿ ಕ್ಯಾಬಿನೆಟ್ ಮಿಷನ್‌ನ್ನು ಭಾರತಕ್ಕೆ ಕಳುಹಿಸಿದರು. ಭಾರತೀಯರ ಆಶೋತ್ತರಗಳ ವಿರುದ್ಧ ಬಹಳ ಕಾಲ ತಾವು ಅಲ್ಲಿ ಆಡಳಿತ ಯಂತ್ರದ ಚುಕ್ಕಾಣಿ ಹಿಡಿಯಲು ಸಾಧ್ಯವಿಲ್ಲವೆಂಬ ಅರಿವು ಅದಾಗಲೇ ಮನವರಿಕೆಯಾಗಿತ್ತು. ಈ ನಿಯೋಗವು ಭಾರತಕ್ಕೆ ಸ್ವಾತಂತ್ರ್ಯದ ಒಪ್ಪಿಗೆ ಕೊಡುವುದರ ಜೊತೆಗೆ ಬ್ರಿಟಿಷರು ರಾಷ್ಟ್ರದ ವಿಭಜನೆಯ ಸಲಹೆಗಳನ್ನೂ ಇಟ್ಟಿತು. ಕಾಂಗ್ರೆಸ್ ಮೊದಮೊದಲು ಇದಕ್ಕೆ ಒಪ್ಪಲಿಲ್ಲ.

**ಸ್ವತಂತ್ರ ರಾಜ್ಯಕ್ಕೆ ನಿಜಾಮನ ನಿಯೋಗ : ಕ್ಯಾಬಿನೆಟ್ ಮಿಷನ್‌ಗೆ ನಿಜಾಮನ ಮನವಿ**

ಭಾರತಕ್ಕೆ ಸ್ವಾತಂತ್ರ್ಯ ಕೊಡುವಾಗ ಹೈದರಾಬಾದ್ ಪ್ರಾಂತವನ್ನು ಭಾರತದ ಒಕ್ಕೂಟದಿಂದ ಹೊರಗಿಡಬೇಕು. ಹೈದರಾಬಾದ್ ಪ್ರಾಂತವನ್ನು ಸ್ವತಂತ್ರ ರಾಜ್ಯವನೆಂದು ಪರಿಗಣಿಸಬೇಕೆಂದು ಹೈದರಾಬಾದ್ ನಿಜಾಮನು ಕ್ಯಾಬಿನೆಟ್ ಮಿಷನ್ ಗೆ ಮನವಿ ಮಾಡಲು ತನ್ನ ಬೆಂಬಲಿಗರಾಗಿದ್ದ ನವಾಬ ಛತ್ತಾರಿ, ನವಾಬ ಅಲಿಯಾರ ಜಂಗ್, ಸರ್ ವಾಲ್ಟರ್ ಮಾರ್ಕಟನ್ ಮೊದಲಾದವರನ್ನು ದಿಲ್ಲಿಗೆ ಕಳಿಸಿದ್ದ.



**ಬ್ರಿಟಿಷ್ ಸರಕಾರದ ಪ್ರಕಟಣೆ : ವೈಸರಾಯ್ ಆಗಿ ಮೌಂಟ್ ಬ್ಯಾಟನ್ ಆಗಮನ**

ಜೂನ್ ತಿಂಗಳ ೨೦, ೧೯೪೮ ರೊಳಗೆ ಭಾರತಕ್ಕೆ ಅಧಿಕಾರ ಹಸ್ತಾಂತರ ಮಾಡಬೇಕೆಂಬ ಪ್ರಕಟಣೆಯನ್ನು ಬ್ರಿಟಿಷ್ ಸರಕಾರ ಫೆಬ್ರುವರಿ ೨೦, ೧೯೪೭ ರಂದು ಹೊರಡಿಸುತ್ತದೆ. ಈ ಕಾರ್ಯದ ನೆರವೇರಿಕೆಗಾಗಿ ಬ್ರಿಟನ್ ರಾಜಮನೆತನದ ಲಾರ್ಡ್ ಮೌಂಟ್ ಬ್ಯಾಟನ್ (ವೃತ್ತಿಯಲ್ಲಿ ನೌಕಾಧಿಪತಿಗಳಾಗಿದ್ದವರು) ವೈಸರಾಯ್ ಆಗಿ ಮಾರ್ಚ್ ೨೪, ೧೯೪೭ ರಂದು ಅಧಿಕಾರ ಸ್ವೀಕರಿಸಿ, ಕಾರ್ಯಪ್ರವೃತ್ತರಾಗುತ್ತಾರೆ. ಇವರ ಕಾರ್ಯದರ್ಶಿಯಾಗಿದ್ದ ಬ್ಯಾರಿಫೀಲ್ಡ್ ಎನ್ನುವ ಅಧಿಕಾರಿ ಬ್ರಿಟನ್‌ನ ಹಿಂದಿನ ಪ್ರಧಾನಿ ಚರ್ಚಿಲ್‌ರ ಪರಮಾಪ್ತ ಶಿಷ್ಯರು. ಇವರು ಭಾರತವನ್ನು ಉತ್ತರ–ದಕ್ಷಿಣ, ಪಶ್ಚಿಮ–ಪೂರ್ವವಾಗಿ ಭಾಗ ಮಾಡಬೇಕೆಂಬ ಸಂಚನ್ನು ಹೊಂದಿರುತ್ತಾರೆ. ಸರದಾರ ವಲ್ಲಭಭಾಯ್ ಪಟೇಲರು ಎಲ್ಲ ದೇಶೀಯ ಸಂಸ್ಥಾನಿಕರಿಗೆ ಭಾರತ ಒಕ್ಕೂಟ ಸೇರಬೇಕೆಂಬ ಮನವಿಯೊಂದಿಗೆ, ಏಕತೆಯ, ಅಖಂಡತೆಯ ಮಹತ್ವ ಸಾರುತ್ತಾರೆ. ಬಹುತೇಕ ರಾಜ ಸಂಸ್ಥಾನಕರಿಗೆ ಇದು ಹಿತವೆನ್ನಿಸುತ್ತದೆ. ಲಾರ್ಡ್ ಮೌಂಟ್ ಬ್ಯಾಟನ್ನರು ತಾವು ಭಾರತ ಇಲ್ಲವೇ ಪಾಕಿಸ್ತಾನ ಯಾವುದಾದರೂ ಸೇರಬಹುದೆಂಬ ಸೂಚನೆಯನ್ನು ಸಂಸ್ಥಾನಿಕರಿಗೆ ನೀಡುತ್ತಾರೆ.

ಅಖಂಡ ಭೂಪ್ರದೇಶವನ್ನು ಭಾರತ, ಪಾಕಿಸ್ತಾನ ಮತ್ತು ಪೂರ್ವ ಪಾಕಿಸ್ತಾನ ಎಂದು ವಿಭಜಿಸಲಾಗುತ್ತದೆ. ಮುಂದೆ ೧೯೭೧ ರಲ್ಲಿ ಪೂರ್ವ ಪಾಕಿಸ್ತಾನವು 'ಬಾಂಗ್ಲಾದೇಶ' ಎನ್ನುವ ಹೆಸರು ಪಡೆದು ಪ್ರತ್ಯೇಕ ರಾಷ್ಟ್ರವಾಗುತ್ತದೆ. ಜಿನ್ನಾ ಅವರು ಪ್ರತ್ಯೇಕ ಮುಸ್ಲಿಂ ರಾಷ್ಟ್ರದ ಪಟ್ಟನ್ನು ಸಡಿಲಿಸಲಿಲ್ಲ. ಗಾಂಧೀಜಿಯವರಿಗೆ ದೇಶ ಒಡೆಯುವ ಮನಸ್ಸಿರಲಿಲ್ಲ. ಖುದ್ದು ಐದಾರು ಸಲ ದಿಲ್ಲಿಗೆ ಭೇಟಿ ಕೊಟ್ಟು ಸ್ವಾತಂತ್ರ್ಯ ಪ್ರಕ್ರಿಯೆಯನ್ನು ನೋಡಿ ಬರುತ್ತಾರೆ.

ವಿಭಜನೆಯ ವರದಿಯನ್ನು ಕಾಂಗ್ರೆಸ್ ಒಪ್ಪುತ್ತದೆ. ಮುಂದೆ ವಿಭಜನೆಯ ಅನಿವಾರ್ಯತೆಯನ್ನು ಮೌಂಟ್ ಬ್ಯಾಟನ್ ಇಂಗ್ಲೆಂಡ್ ಪ್ರಧಾನಿಗೆ ರವಾನಿಸುತ್ತಾರೆ. ಆದರೆ ಅದಕ್ಕೆ ಬ್ರಿಟಿಷ್ ಪ್ರಧಾನಿ ಒಪ್ಪುವುದಿಲ್ಲ. ಸ್ವತಃ ಮೌಂಟ್ ಬ್ಯಾಟನ್ ಇಂಗ್ಲೆಂಡಿಗೆ ತೆರಳಿ ಬದಲಾದ ಪರಿಸ್ಥಿತಿಯನ್ನು ಮನವರಿಕೆ ಮಾಡಿಕೊಟ್ಟು, ಒಪ್ಪಿಗೆ ಪಡೆದು, ಸ್ವಾತಂತ್ರ್ಯ ಪ್ರಕ್ರಿಯೆಯನ್ನು ೧೯೪೮ ರ ಬದಲಾಗಿ ೧೯೪೭ ರ ಆಗಸ್ಟ್ ೧೫ ರ ಒಳಗೇ ಪೂರೈಸಬೇಕೆನ್ನುವ ತೀವ್ರತೆಯನ್ನು ತಿಳಿಸಿ, ಅದರಂತೆ ಕಾನೂನಾತ್ಮಕವಾದ ಎಲ್ಲ ನಿಯಮಗಳನ್ನು ಯಶಸ್ವಿಯಾಗಿ ಪೂರೈಸಿಕೊಂಡು ಭಾರತಕ್ಕೆ ಬಂದು, 'ಸೇರ್ಪಡೆ ಒಪ್ಪಂದ'ದ ಪ್ರಕಾರ ಕಡತಗಳನ್ನು ತಯಾರಿಸಿದ್ದರ ಫಲವಾಗಿ, ಆಗಸ್ಟ್ ೧೪ ರಂದು ಪಾಕಿಸ್ತಾನ ಮತ್ತು ಆಗಸ್ಟ್ ೧೫ ರಂದು ಭಾರತ ಸ್ವತಂತ್ರ ದೇಶಗಳಾಗುತ್ತವೆ.

## ನಿಜಾಮನ ತಟಸ್ತ ನೀತಿ : ಹೈದರಾಬಾದ್ ಸ್ವತಂತ್ರ ರಾಜ್ಯ ಘೋಷಣೆ

ದೇವರು ವರವನ್ನು ಕೊಟ್ಟರೂ ಪೂಜಾರಿ ಕೊಡಲಿಲ್ಲ. ಇಡೀ ದೇಶ ಸ್ವಾತಂತ್ರ್ಯದ ಸಂಭ್ರಮದಲ್ಲಿದ್ದಾಗ ಹೈದರಾಬಾದ್ ಪ್ರಾಂತ್ಯಕ್ಕೆ ಸೇರಿದ ಪ್ರದೇಶಗಳಿಗೆ ಆ ಭಾಗ್ಯ ಇರಲಿಲ್ಲ. ನಿಜಾಮ ಭಾರತದ ಒಕ್ಕೂಟವನ್ನು ಸೇರದೇ ಸ್ವತಂತ್ರ ಸಂಸ್ಥಾನವೆಂದು ಘೋಷಿಸಿಕೊಂಡ. ಅವನಿಗೆ ಪಾಕಿಸ್ತಾನ ಸೇರುವ ತವಕ ಮತ್ತು ಹುನ್ನಾರು ಇತ್ತು. ಹೈದರಾಬಾದ್ ಪ್ರಾಂತಕ್ಕೆ ಸೇರಿದ ಬೀದರ್, ಗುಲಬರ್ಗಾ, (ಇಂದಿನ ಯಾದಗಿರಿ ಜಿಲ್ಲೆಯನ್ನು ಹಿಡಿದು), ರಾಯಚೂರು ಜಿಲ್ಲೆಯ (ಕೊಪ್ಪಳ ಅಂದು ರಾಯಚೂರು ಜಿಲ್ಲೆಯಲ್ಲಿತ್ತು) ಕನ್ನಡಿಗರ ಪ್ರದೇಶಗಳಲ್ಲಿ ಮತ್ತೆ ಕರಾಳತೆಯ ಮೌನ, ಭಯದ ಆವರಣ ಸುತ್ತುವರಿಯಿತು.

ಇಡೀ ಭಾರತದ ಎಲ್ಲ ಒಕ್ಕೂಟಗಳಲ್ಲಿ ಅತೀ ಶ್ರೀಮಂತ ಮತ್ತು ದೊಡ್ಡದಾದ ಹೈದ್ರಾಬಾದ ಸಂಸ್ಥಾನದ ನಿಜಾಮನು ೨೬ ನೇ ಜೂನ್ ೧೯೪೭ ರಂದು ರಾಜಾಜ್ಞೆ (ಫರ್ಮಾನು) ಹೊರಡಿಸಿ ತಾನು ಭಾರತೀಯ ರಾಜ್ಯ ಸಂಘ (ಯೂನಿಯನ್) ಸೇರುವುದಿಲ್ಲ ಎಂದು ಬಹಿರಂಗಪಡಿಸಿದನು.

ಇದರಿಂದ ಸ್ವಾತಂತ್ರ್ಯದ ಸಂಭ್ರಮದಲ್ಲಿ ತೇಲಾಡಬೇಕೆಂದಿದ್ದ ಈ ಭಾಗದ ಜನತೆ ತತ್ತರಿಸಿಹೋದರು. ಬ್ರಿಟಿಷರ ವಿರುದ್ಧ ಹೋರಾಡಿದಂತೆ ಮತ್ತೊಮ್ಮೆ



ನಿಜಾಮನ ವಿರುದ್ಧ ಹೋರಾಡಿ ಸ್ವಾತಂತ್ರ್ಯ ಪಡೆಯುವ ಅನಿವಾರ್ಯತೆ ಸೃಷ್ಟಿಯಾಯಿತು. ನಿಜಾಮನ ವಿರುದ್ಧದ ಹೋರಾಟಕ್ಕೆ 'ವಿಮೋಚನಾ ಹೋರಾಟ' ವೆಂದು ಕರೆಯಲಾಯಿತು.

'ನಿಜಾಮನು ಪ್ರಜೆಗಳ ಅಭಿಪ್ರಾಯಗಳನ್ನು ಗೌರವಿಸದಿದ್ದರೆ ಇತರ ನಿರಂಕುಶ ಪ್ರಭುಗಳಂತೆ ಈತನೂ ನಾಶವಾಗುತ್ತಾನೆ' ಎಂದು ಲೋಕನಾಯಕ ಜಯಪ್ರಕಾಶ ನಾರಾಯಣರು ಹೈದರಾಬಾದಿನ ಕರ್ಬಲಾ ಮೈದಾನದಲ್ಲಿ ಭಾರೀ ಸಭೆಯಲ್ಲಿ ಘೋಷಿಸಿದರು.

ಸ್ವಾಮಿ ರಮಾನಂದ ತೀರ್ಥರು ಮತ್ತು ಗೆಳೆಯರು ಜನಾಭಿಪ್ರಾಯ ಮೂಡಿಸುತ್ತ 'ಒಕ್ಕೂಟ ಸೇರಿರಿ' ಎನ್ನುವ ಘೋಷಣೆಯೊಂದಿಗೆ ನಿಜಾಮ ಪ್ರಾಂತ್ಯದ ತುಂಬಾ ಹೋರಾಟದ ತೀವ್ರತೆಯನ್ನು ಹೆಚ್ಚಿಸಿದರು.

ಜುಲೈ ೧, ೧೯೪೭ ರಂದು ಸೊಲ್ಲಾಪುರದ ಕಾಂಗ್ರೆಸ್ ಸಭೆಯಲ್ಲಿ ಒಂದು ವೇಳೆ ರಮಾನಂದ ತೀರ್ಥರನ್ನು ಆಗಸ್ಟ್ ೧೫, ೧೯೪೭ ರಂದು ಬಂಧಿಸಿದರೆ, ಡಿ.ಜಿ. ಬಿಂದು ಅವರ ನೇತೃತ್ವದಲ್ಲಿ ವಿಲೀನದ ಹೋರಾಟದ ಎಲ್ಲ ಕೆಲಸಗಳ ಜವಾಬ್ದಾರಿ ನೀಡುವ ಘೋಷಣೆ ಮಾಡಿತು.

ಆಗಸ್ಟ್ ೭, ೧೯೪೭ ರಂದು ಕೊಪ್ಪಳ, ಗಂಗಾವತಿಗಳಲ್ಲಿ ಬಿ.ಆರ್. ದೇಸಾಯಿ ಈ. ಜನಾರ್ದನರಾವ್ ವಕೀಲರು, ನಿಷೇಧಾಜ್ಞೆ ಉಲ್ಲಂಘಸಿ ಸಭೆಗಳಲ್ಲಿ ಭಾಷಣ ಮಾಡಿದರು. ನಿಜಾಮನು ತನ್ನ ಪ್ರದೇಶಗಳಲ್ಲಿ ಸಾರ್ವಜನಿಕ ಸಭೆಗಳ ಮೇಲೆ ನಿರ್ಬಂದ ಹೇರಿದರೂ ದೇಶಭಕ್ತ ಜನರು ತಂತಿ ಸಂದೇಶಗಳ ಮೂಲಕ, ಗೌಪ್ಯ ಸಭೆಗಳ ಮೂಲಕ ತಮ್ಮ ಹೋರಾಟ ಮುಂದುವರಿಸಿದರು. ಪ್ರಗತಿಪರ ಮುಸ್ಲಿಂ ನಾಯಕರುಗಳು ನಿಜಾಮನ ವಿರುದ್ಧ ಸಮರ ಸಾರಿ, ಒಕ್ಕೂಟ ಸೇರಲು ಹೋರಾಡಿದರು.

ಕೊಪ್ಪಳ ವಿಭಾಗದ ವಿದ್ಯಾರ್ಥಿ ನಾಯಕರುಗಳಾದ ಶಿವಮೂರ್ತಿಸ್ವಾಮಿ ಅಳವಂಡಿ, ಡಿ.ಆರ್. ವಿಠಲರಾವ್, ರಾಘವೇಂದ್ರ ಕಲ್ಲೂರು ಅವರು ಯಲಬುರ್ಗಿ, ಗಂಗಾವತಿ ಮತ್ತು ಕುಷ್ಟಗಿ ತಾಲ್ಲೂಕುಗಳ ಸ್ನೇಹಿತರೊಂದಿಗೆ ಜೀವದ ಮೇಲಿನ ಆಸೆಯನ್ನು ತೊರೆದು ನಿಜಾಮನ ವಿರುದ್ಧದ ಸತ್ಯಾಗ್ರಹದಲ್ಲಿ ಭಾಗವಹಿಸಿದರು.

ಕೊನೆಗೂ ಆಗಸ್ಟ್ ೧೫, ೧೯೪೭ ಬಂದೇ ಬಿಟ್ಟಿತು. ನಿಜಾಮನ ಸೈನಿಕರು ತಮ್ಮ ಕ್ರೌರ್ಯವನ್ನು ಪ್ರದರ್ಶಿಸಿದರು. ಭಯದ ವಾತಾವಣರ ಸೃಷ್ಟಿಸಿದರು ಕೊಪ್ಪಳದಲ್ಲಿ ಪೊಲೀಸರದ ಕಟ್ಟೆಚ್ಚರದ ನಡುವೆಯೂ ಕಾಂಗ್ರೆಸ್ ಕಾರ್ಯಕಾರಿಣಿ ಸಮಿತಿಯ ನಿರ್ಣಯದಂತೆ ತರುಣ ಸಂಘದ ಹೋರಾಟಗಾರರು ಜಿ. ಲಕ್ಷ್ಮಣಾಚಾರ್ಯ ವಕೀಲರು, ಶಿರೂರು ವೀರಭದ್ರಪ್ಪನವರು, ಹಂಪೀಕರ ನರಸಿಂಗರಾಯವರು ಗಾಂಧಿ ಟೊಪ್ಪಿಗೆ ಧರಿಸಿ, ವಂದೇ ಮಾತರಂ ಹಾಡುತ್ತ ಕೊಪ್ಪಳ ರೈಲ್ವೇ ಸ್ಟೇಷನ್ ಸಮೀಪದ ಬಯಲಿನಲ್ಲಿ ಧ್ವಜವಂದನೆ ಮಾಡಿ, ಜನಗಣಮನ ಹಾಡಿ, ಭಾರತ ಮಾತಾಕಿ ಜೈ ಘೋಷಣೆ ಕೂಗಿದರು. ಸಾವಿರಾರು ಜನ ವಿದ್ಯಾರ್ಥಿಗಳು ಈ ಐತಿಹಾಸಿಕ ಸಂದರ್ಭಕ್ಕೆ ಸಾಕ್ಷಿಯಾಗಿದ್ದರು. ಪೊಲೀಸರು ಇವರನ್ನು ಬಂಧಿಸಿದರೂ, ಅವರಲ್ಲಿನ ಉತ್ಸಾಹ ಯಾವುದೇ ಕಾರಣಕ್ಕೂ ಬತ್ತಲಿಲ್ಲ.

## ರಾಜೀನಾಮೆ ಪರ್ವ

ಒಂದೆಡೆ ದೇಶಭಕ್ತ ಜನರೆಲ್ಲ ಒಂದಾಗಿ ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡುತ್ತಿದ್ದರೆ, ಇನ್ನೊಂದೆಡೆ ನಿಜಾಮನ ಅಧಿಕಾರ ವರ್ಗದಲ್ಲಿದ್ದ ಗೌಡ, ದೇಸಾಯಿ, ಕುಲಕರ್ಣಿ, ದೇಶಪಾಂಡೆ, ಪಾಟೀಲ, ಮಾಲಿಪಾಟೀಲರಿಗೆ ನುಂಗಲಾರದ ತುತ್ತಾಗಿ ಪರಿಣಮಿಸಿತು. ಕೊನೆಗೆ ದೇಶಭಕ್ತ ಜನರೊಂದಿಗೇ ಇರುವ ನಿರ್ಧಾರ ಮಾಡಿ, ತಮ್ಮ ಸ್ಥಾನಗಳಿಗೆ ರಾಜೀನಾಮೆ ನೀಡಿದರು. ಕೊಪ್ಪಳ (ಜಿಲ್ಲೆಯ) ಕೆಲವು ಗ್ರಾಮಗಳು ಸ್ವಾತಂತ್ರ್ಯ ಘೋಷಿಸಿಕೊಂಡು ಹೊಸ ಅಧ್ಯಕ್ಷರನ್ನು ಆಯ್ಕೆ ಮಾಡಿಕೊಂಡು, ಗಾಂಧೀಜಿಯವರ ಗ್ರಾಮ ಸ್ವರಾಜ್ಯದ ಕನಸು ನನಸು ಮಾಡಿದರು.

## ನಿಜಾಮನಿಗಿದ್ದ ಕುಮ್ಮಕ್ಕಿನ ಶಕ್ತಿಗಳು

ನಿಜಾಮನು ಸ್ವತಂತ್ರವಾಗಿರಲು ಪಾಕಿಸ್ತಾನದ ಕುಮ್ಮಕ್ಕು ಬಹಳಿತ್ತು. ಬ್ರಿಟನ್‌ನ ಮಾಜಿ ಪ್ರಧಾನಿ ವಿಲ್‌ಸ್ಟನ್ ಚರ್ಚಿಲ್ ಸಹ ನಿಜಾಮನು ಸ್ವತಂತ್ರವಾಗಿ ಉಳಿಯುವುದನ್ನು ಸಮರ್ಥಿಸಿದನು. ಈತನ ಆಪ್ತ ಬ್ಯಾರಿಫೀಲ್ಡ್ ಮೌಂಟ್ ಬ್ಯಾಟನ್‌ರ ಕಾರ್ಯದರ್ಶಿಯಾಗಿದ್ದ. ಬ್ಯಾರಿಫೀಲ್ಡ್ ಅಖಂಡ ಭಾರತವನ್ನು



ದಿಕ್ಕುಗಳ ದೆಸೆಯಿಂದ ಒಡೆಯುವ ಹುನ್ನಾರು ಮಾಡಿದಾಗ ಉದಯಪುರದ ಮಹಾರಾಣ ರಾಜ ಪ್ರಬಲವಾಗಿ ಪ್ರತಿರೋಧ ಒಡ್ಡಿದ್ದ.

## ಖಾಸಿಂ ರಜವಿ ಮತ್ತು ರಜಾಕಾರರು

ನಿಜಾಮನು ಒಂದು ಹಂತದಲ್ಲಿ ಭಾರತ ಒಕ್ಕೂಟ ಸೇರಲು ಮನಸ್ಸು ಮಾಡಿದ್ದರೂ, ಅದನ್ನು ಪ್ರಬಲವಾಗಿ ವಿರೋಧಿಸಿ ಇಸ್ಲಾಮಿಕ್ ರಾಜ್ಯಕ್ಕೆ ಕಟಿಬದ್ಧತೆಯನ್ನು ಹೊಂದಲು ಖಾಸಿಂ ರಜವಿಯು ತನ್ನ ಪರಿಣಾಮಕಾರಿ ಮಾತುಗಳಿಂದ ಪ್ರಚೋದಿಸುತ್ತಿದ್ದ. ಶಾಂತಿದೂತರು ಎನ್ನುವ 'ರಜಾಕಾರ'ರ ಪಡೆಯನ್ನು ಸೃಷ್ಟಿಸಿದ. ಇವರು ಶಾಂತಿಯ ದೂತರಾಗದೇ ಭಯೋತ್ಪಾದಕರಾಗಿದ್ದರು. ಹಿಂದೂಗಳ ಮೇಲೆ ಇವರ ದೌರ್ಜನ್ಯ ನಿರಂತರವಾಗಿ ಸಾಗಿತು. 'ಕಾಟೋ–ಲೂಟೋ–ಬಾಟೋ' ಇವರ ಮಂತ್ರಗಳಾಗಿದ್ದವು. ಮುಸ್ಲಿಂ ಸಂಖ್ಯೆಯ ಹೆಚ್ಚಳ ಮಾಡುವ ಮತಾಂಧತೆ ಹೊಂದಿದ್ದ. ಖಾಸಿಂ ರಜವಿ ಬೀದರ್ ಸಮೀಪದ ಲಾತೂರಿನಲ್ಲಿ ಅಡ್ವೋಕೇಟ್ ಆಗಿದ್ದ. ನಿಜಾಮನ ಆಪ್ತ ವಲಯದಲ್ಲಿ ಪ್ರಭಾವಿಯಾಗಿದ್ದ. ಖಾಸಿಂ ರಜವಿಯ ಕೈಯಲ್ಲಿ ಸಿಕ್ಕು ನಿಜಾಮ ನರಳುತ್ತಿದ್ದನೆಂಬ ಮಾತಿದೆ. ಮೀರ್ ಲಾಯಕ್ ಅಲಿ, ನವಾಬ್ ಮೋಯಿನ್ ಜಂಗ್ ಮತ್ತು ಖಾಸಿಂ ರಜವಿ ನಿಜಾಮನ ದಿಕ್ಕು ತಪ್ಪಿಸುತ್ತಿದ್ದರು.

ರಜಾಕಾರರ ಹಾವಳಿಗೆ ಅಸಂಖ್ಯಾತ ಹಿಂದೂ ಮಹಿಳೆಯರು ಬಲಿಯಾಗಿದ್ದಾರೆ. ರಜಾಕಾರರ ಕೈಯಿಂದ ತಪ್ಪಿಸಿಕೊಳ್ಳಲಿಕ್ಕೆಂದೇ ಮನೆಯಲ್ಲಿ ನೆಲಮಹಡಿಗಳನ್ನು ಕಟ್ಟಿಸಿಕೊಳ್ಳುತ್ತಿದ್ದರು. ಶ್ರೀಮತರೇ ರಜಾಕಾರರ ಮೊದಲ ಆದ್ಯತೆಯಾಗಿತ್ತು. ಹಿಂದೂಗಳನ್ನು ಮತ್ತು ಪ್ರತಿರೋಧ ಒಡ್ಡಿದವರನ್ನು ಕತ್ತರಿಸುವುದು (ಕಾಟೋ), ಶ್ರೀಮಂತರ ಸಂಪತ್ತನ್ನು ಲೂಟಿ ಮಾಡುವುದು (ಲೂಟೋ), ಮತ್ತು ದೋಚಿದ ಸಂಪತ್ತನ್ನು ಹಂಚಿಕೊಳ್ಳುವುದು (ಬಾಟೋ) ರಜಾಕಾರರ ಕೆಲಸವಾಗಿತ್ತು. ರಜಾಕಾರರ ಹಾವಳಿಯಲ್ಲಿ ಜನ ತತ್ತರಿಸಿಹೋಗಿದ್ದರು.

## ಹದಗೆಟ್ಟ ಹೈದರಾಬಾದ್ ಮತ್ತು ವಿಮೋಚನೆಗಾಗಿ ಹೋರಾಟ

ದಿನದಿಂದ ದಿನಕ್ಕೆ ಹೈದರಾಬಾದ್ ಪ್ರದೇಶದ ಸ್ಥಿತಿ ಹದಗೆಟ್ಟು ಹೋಗಿ, ಸ್ಮಶಾನ ಮೌನ ಆವರಿಸಿತು. ಹೈದರಾಬಾದ್ ಪ್ರಾಂತ್ಯದ ಗಡಿಪ್ರದೇಶಗಳಲ್ಲಿನ (ಒಕ್ಕೂಟ ಸೇರಿದ ಪ್ರಾಂತ್ಯಗಳ ಪ್ರದೇಶಗಳು) ಜನರ ಸಹಕಾರ, ಸಹಾಯ ಮತ್ತು ಶಿಬಿರಗಳ ಮೂಲಕ ನಿಜಾಮನ ವಿರುದ್ಧದ ಹೋರಾಟದ ಕಾವು ಹೆಚ್ಚುತ್ತ ಹೋಯಿತು. ಮೈ ಜುಮ್ಮೆನ್ನುವ ಹಲವು ರೋಮಾಂಚನಕಾರಿ ಘಟನೆಗಳು ಕೊಪ್ಪಳ ಭಾಗದಲ್ಲಿ ನಡೆದವು.

ತುಂಗಭದ್ರಾ, ಮುಂಡರಗಿ, ಗಜೇಂದ್ರಗಡ, ಕಂಪ್ಲಿ, ಶಿರಗುಪ್ಪ, ಆದೋನಿಗಳಲ್ಲಿನ ಮುಖ್ಯ ಶಿಬಿರಗಳಲ್ಲಿ ಮತ್ತು ಅವುಗಳ ಅಧೀನದಲ್ಲಿ ಶಿಬಿರಗಳಲ್ಲಿ ದೇಶಪ್ರೇಮಿ ಯುವಕರಿಗೆ ತರಬೇತಿ ನೀಡಲಾಗುತ್ತಿತ್ತು. ಗಡಿ ಪ್ರದೇಶಗಳಲ್ಲಿದ್ದುಕೊಂಡು ನಿಜಾಮನ ಏಟಿಗೆ ಎದುರೇಟು ಕೊಡುವ, ನಿಜಾಮನ ವಿರುದ್ಧ ಹೋರಾಡುವ ವಿಮೋಚನಾ ಹೋರಾಟಗಾರರಿಗೆ ಆಹಾರ ಮತ್ತು ಶಸ್ತ್ರಾಸ್ತ್ರಗಳ ಪೂರೈಕೆಯ ಜೊತೆಗೆ ಎಲ್ಲ ವ್ಯವಸ್ಥೆಗಳನ್ನು ಶಿಬಿರಗಳಲ್ಲಿ ಮಾಡಲಾಗುತ್ತಿತ್ತು.

ನಿಜಾಮರಿಂದ ಲೂಟಿ ಮತ್ತು ಕೊಲೆಗಳು, ಅದಕ್ಕೆ ಪ್ರತಿಯಾಗಿ ಹೋರಾಟಗಾರರ ದಾಳಿ, ಹೋರಾಟಗಾರರ ಕಿಚ್ಚು, ರೋಷ, ದೇಶಪ್ರೇಮದ ರೋಮಾಂಚನಕಾರಿ ಘಟನೆಗಳು, ಭೂಗತ ಹೋರಾಟಗಳು ಕವಲೂರು, ಬಿಸರಳ್ಳಿ, ಕಾತರಕಿ, ಉಪ್ಪಿನ ಬೆಟಗೇರಿ, ಭಾನಾಪುರ, ಬನ್ನಿಕೊಪ್ಪ, ತಳಕಲ್, ಕುಕನೂರು, ಹಳ್ಳಿಕೇರಿ, ಮಾಳೆಕೊಪ್ಪ, ಯಲಬುರ್ಗಿ, ಎರೆ ಹಂಚಿನಾಳ, ಬೆಣಕಲ್, ಗುನ್ನಾಳ, ಗೌರಿಪುರ, ಹಿರೇವಂಕಲಕುಂಟೆ, ಬೇವೂರು, ಮುಧೋಳ, ಸಂಕನೂರು, ಮ್ಯಾಗೇರಿ, ಕನಕಗಿರಿ, ಗಂಗಾವತಿ, ಮರ್ಲಾನಹಳ್ಳಿ, ಮಾಲಗಿತ್ತಿ, ತುಮರಿಗುದ್ದಿ, ಡೊಣ್ಣೆಗುಡ್ಡ, ಮುರುಡಿ, ದೋಟಿಹಾಳ, ಗುಡ್ಡದ ಮಲ್ಲಾಪುರ, ಬೊಮ್ಮಸಾಗರ, ಪಟ್ಟಲಚಿಂತಿ, ಬಾದಿಂನಾಳ, ತೊಂಡಿಹಾಳ, ಮುಂಡರಗಿ ಸಮೀಪದ ತಾಂಡಾಗಳ, ಮುಕ್ಕುಂಪಿ, ಮಿಟ್ಟಲಕೋಡ, ಚಿಕ್ಕೊಪ್ಪ, ತುಗ್ಗಲಡೋಣಿ, ನೀರಲಕೊಪ್ಪ, ರಂಗಾಪುರ, ನಿಲೂಗಲ್, ಹನುಮನಾಳ, ಮೂಗನೂರು, ಬಿಳಿಕಲ್ಲು, ಬಿಳೆಕಲ್



ಹೀಗೆ ಕೊಪ್ಪಳ ಭಾಗದ ಮತ್ತು ಕೊಪ್ಪಳ ಜಿಲ್ಲೆಯ ನೂರಾರು ಗ್ರಾಮಗಳ ಕಡೆ ದಾಖಲಾಗಿವೆ.

ಖಾಸಿಂ ರಜವಿಯ ಮತಾಂಧತೆ ಮತ್ತು ಮಿತಿಮೀರಿದ ಆಸೆಯ ವ್ಯಕ್ತಿತ್ವದಿಂದಾಗಿ ಮಿರ್ಜಾ ಇಸ್ಮಾಯಿಲ್‌ರು ನಿಜಾಮನೊಂದಿಗೆ ನಡೆಸಿದ 'ವಿದೇಶಿ ನೀತಿ' ನಿಜಾಮ ಒಪ್ಪಿದರೂ, ಈತನಿಂದ ಮುರಿದುಬಿತ್ತು. ಪೋರ್ಚುಗೀಸರ ಅಧೀನದಲ್ಲಿದ್ದ ಗೋವಾ (೧೯೬೧ ರ ವರೆಗೂ ಗೋವಾ ಪೋರ್ಚುಗೀಸರ ಅಧೀನದಲ್ಲೇ ಇತ್ತು, ಡಿಸೆಂಬರ್ ೧೯, ೧೯೬೧ ರಂದು ಭಾರತಕ್ಕೆ ಬಿಟ್ಟುಕೊಟ್ಟಿತು) ವನ್ನು ಖರೀದಿಸಿ, ಧಾರವಾಡ ಜಿಲ್ಲೆಯು ಗಡಿ ಜಿಲ್ಲೆಗಳ ಮೇಲೆ ಆಕ್ರಮಣ ಮಾಡಿ ವಶಕ್ಕೆ ಪಡೆದುಕೊಂಡು ಸಮುದ್ರ ಮಾರ್ಗ ಹೊಂದುವ ದುರುದ್ದೇಶ ಹೊಂದಿದ್ದ ಖಾಸಿಂ ರಜವಿ, ಜೇಹಾದ್ ಘೋಷಣೆ ಮಾಡಿ ಹೈದರಾಬಾದ್ ಪ್ರಾಂತದ ಹೊರಗಿನ ಮುಸಲ್ಮಾನರ ಅನುಕಂಪ ಗಿಟ್ಟಿಸಲು ಪ್ರಯತ್ನಿಸಿದ. ೧೯೪೮ ರ ಜೂನ್‌ನಲ್ಲಿ ಹೈದರಾಬಾದ್ ಪ್ರಾಂತ್ಯಕ್ಕೆ ಹಾಕಿದ ಆರ್ಥಿಕ ದಿಗ್ಬಂಧನವನ್ನು ಭಾರತ ಸರಕಾರ ಆಗಸ್ಟ್‌ನಲ್ಲಿ ಮತ್ತಷ್ಟು ಬಿಗಿಮಾಡಿತು. ಇದರಿಂದ ಈ ಭಾಗಕ್ಕೆ ವಿಮಾನಯಾನ, ಪೆಟ್ರೋಲ್, ಆಹಾರ ದಾಸ್ತಾನುಗಳ ಪೂರೈಕೆ ಇಲ್ಲವಾಯಿತು. ನಿಜಾಮನು ಯು.ಎನ್.ಓ. ಸೇರಿದಂತೆ ಕೆಲವಾರು ಕಡೆ ನಿಯೋಗ ಕಳಿಸಿದರೂ ನಿಜಾಮನ ಪರವಾಗಿ ಯಾರೂ ನಿಲ್ಲಲಿಲ್ಲ.

## ಆಪರೇಶನ್ ಪೋಲೋ : ಹೈದರಾಬಾದ್ ಪ್ರಾಂತ್ಯ ಭಾರತದ ಒಕ್ಕೂಟಕ್ಕೆ

ಈ ವೇಳೆಗೆ ಹೈದರಾಬಾದ್ ಪ್ರಾಂತ್ಯದ ಪ್ರದೇಶಗಳಲ್ಲಿ ಶಾಂತಿ ಸುವ್ಯವಸ್ಥೆ ಕಾಪಾಡಲು ನಿಜಾಮನಿಗೆ ಸಾಧ್ಯವಾಗಲಿಲ್ಲ. ಪರಿಸ್ಥಿತಿ ಕೈಮೀರಿ ಹೋಗಿತ್ತು. ಎಲ್ಲೆಡೆ ನಿಜಾಮನ, ಕಾಸೀಂ ರಜವಿಯ ಮತ್ತು ರಜಾಕಾರರ ವಿರುದ್ಧದ ಆಂದೋಲನ ತೀವ್ರತೆ ಹೆಚ್ಚಾಗಿತ್ತು. ಹೈದರಾಬಾದ್ ನಿಜಾಮನ ವಿರುದ್ಧ ಸೈನಿಕ ಕಾರ್ಯಾಚರಣೆ ನಡೆಸುವಂತೆ, ಈ ಭಾಗವನ್ನು ಭಾರತದ ಒಕ್ಕೂಟಕ್ಕೆ ಸೇರಿಸುವಂತೆ ಈ ಭಾಗದ ನಾಯಕರು ಮತ್ತು ದೇಶಭಕ್ತರು ಪದೇ ಪದೇ ಹೊರಡಿಸುತ್ತದ್ದ ಒಕ್ಕೊರಲ ಕೂಗು ಮುಗಿಲು ಮುಟ್ಟಿತ್ತು.

ಬಹುಸಂಖ್ಯಾತ ಹಿಂದೂಗಳ ಮೇಲೆ ನಡೆದ ಹಿಂಸೆಗಳನ್ನು ಮತ್ತು ರಜಾಕಾರರನ್ನು ಹಿಂದಕ್ಕೆ ಪಡೆಯಲು ಸರಕಾರ ನಿಜಾಮನಿಗೆ ಸೂಚಿಸಿತ್ತು. ಭಾರತ ಸರಕಾರವು ಭಾರತೀಯ ವ್ಯಾಪ್ತಿಯ ಹಳ್ಳಿಗಳ ಮೇಲೆ ದಾಳಿ ಮಾಡುತ್ತಿದ್ದ ಗಡಿ ಭಾಗದ ನಿಜಾಂ ಸೇನೆ, ದಾಳಿಕೋರರನ್ನು ಮತ್ತು ರಜಾಕಾರರನ್ನು ಹತ್ತಿಕ್ಕಲು ಮೊಟ್ಟಮೊದಲ ಬಾರಿಗೆ ಜೂನ್ ೧೯೪೮ ರಲ್ಲಿ ಆದೇಶ ನೀಡಿತು. ಮತ್ತು ಗಡಿಯೊಳಗೆ ೩ ಮೈಲುಗಳ ಒಳಗೆ ನುಗ್ಗಿ ನಿಜಾಮ್ ಸೇನೆಯನ್ನು ಶಿಕ್ಷಿಸುವ ಅಧಿಕಾರ ಕೊಟ್ಟಿತ್ತು.

ಸಂಸತ್ತಿನಲ್ಲಿ ಪ್ರಧಾನಿ ನೆಹರೂ ಅವರು ಹೈದರಾಬಾದ್ ಪ್ರಾಂತ್ಯ 'ಭಾರತದ ಭಾಗ' ಎಂದು ಘೋಷಿಸಿದರು. ಸರ್ದಾರ್ ವಲ್ಲಭ ಭಾಯಿ ಪಟೇಲ್ ಅವರದ್ದು ಧೀಮಂತಿಕೆಯ ವ್ಯಕ್ತಿತ್ವ ದೃಢ ನಿಶ್ಚಯದ ವ್ಯಕ್ತಿತ್ವ. ಯಾವುದೇ ಚಂಚಲತೆಗೆ ಒಳಗಾಗದೆ ಹೈದರಾಬಾದು ಪ್ರಾಂತ್ಯ ವಿಮೋಚನೆಗಾಗಿ 'ಆಪರೇಷನ್ ಪೋಲೋ' ಕಾರ್ಯಾಚರಣೆಗೆ ಸೆಪ್ಟಂಬರ್ ೧೩, ೧೯೪೮ ರಂದು ಬೆಳಗಿನ ಜಾವ ೪ ಗಂಟೆಗೆ ಹಸಿರು ನಿಶಾನೆ ತೋರಿದರು. ಹೊರಜಗತ್ತಿಗೆ ಇದು ಪೊಲೀಸ್ ಕಾರ್ಯಾಚರಣೆ, ಆದರೆ ಇದು ನೈಜವಾಗಿ ಸೇನಾ ಕಾರ್ಯಾಚರಣೆಯಾಗಿತ್ತು.

ಉಕ್ಕಿನ ಮನುಷ್ಯನ ಉಕ್ಕಿನ ನಿರ್ಧಾರದ ಕಾರಣ ಭಾರತ ಸೈನ್ಯದ ದಂಡಯಾತ್ರೆಯು ಹೈದರಾಬಾದಿನತ್ತ ಹೊರಟಿತು. ಮದ್ರಾಸ್ ಕಡೆಯಿಂದ ಎ.ಎ. ರುದ್ರ ಅವರು ಮಧ್ಯ ಪ್ರಾಂತದಿಂದ. ಬ್ರಿಗೇಡಿಯರ್ ಶೋಯೆದತ್ತ ಸಿಂಗ್ ಅವರು ಪರಾರ್ ಪ್ರಾಂತದಿಂದ. ಮೇಜರ್ ಜನರಲ್ ಬಿ.ಎಸ್ ಬ್ರಾರ್. ಮತ್ತು  ಜನರಲ್ ಚೌಧರಿಯವರು ಮುಂಬೈಯಿಂದಲೂ ಲಗ್ಗೆ ಇಟ್ಟರು. ಲೆಫ್ಟಿನೆಂಟ್ ಜನರಲ್ ಮಹಾರಾಜ ಸಿಂಗ್‌ರು ಈ ಸೇನಾ ಕಾರ್ಯಾಚರಣೆಯ ನೇತೃತ್ವವನ್ನು ವಹಿಸಿದ್ದರು. ಹೈದರಾಬಾದ್ ಪ್ರಾಂತ್ಯದ ಎಂಟೂ ದಿಕ್ಕುಗಳ ಮೂಲಕ ಸೈನ್ಯವು ಬೇರೆ ಬೇರೆ ಆಯಾಮಗಳಿಂದ ಮುತ್ತಿಗೆ ಹಾಕಿತು. ಕೆಲವು ಕಡೆ ಮಾತ್ರ ನಿಜಾಮನ ಸೈನಿಕರಿಂದ ಪ್ರತಿರೋಧ ಒಡ್ಡಿದ್ದು, ಹಲವು ಕಡೆ ನಿಜಾಮನ ಸೈನಿಕರಿಂದ ಹೇಳಿಕೊಳ್ಳುವ ಪ್ರತಿರೋಧ ಬರಲೇ ಇಲ್ಲ. ಸೈನ್ಯವು ಆಗಮಿಸಿದ ಕಡೆಗೆಲ್ಲಾ ಜನ ಬಹಳ ಖುಷಿಯಿಂದ 'ಭಾರತ ಮಾತಾ ಕೀ ಜೈ' ಘೋಷಣೆಯೊಂದಿಗೆ ಅವರನ್ನು ಸ್ವಾಗತಿಸಿ ಎಲ್ಲ ಸಹಾಯ, ಸಹಕಾರವನ್ನು



ನೀಡಿದರು. ಸೆಪ್ಟೆಂಬರ್ ೧೭ ಸಂಜೆಗೆಲ್ಲಾ ಹೈದ್ರಾಬಾದ್ ಪ್ರಾಂತದಲ್ಲಿ ಗೆಲುವಿನ ಆಚರಣೆ ಮುಗಿಲು ಮುಟ್ಟಿತ್ತು. ಪರಸ್ಪರ ಅಪ್ಪಿಕೊಂಡು ಹರ್ಷ ವ್ಯಕ್ತಪಡಿಸುವ, ಆನಂದಭಾಷ್ಪಗಳನ್ನು ಸುರಿಸುತ್ತಾ ದೇಶಪ್ರೇಮದ ಘೋಷಣೆಗಳೊಂದಿಗೆ ಸೈನಿಕರಿಗೆ ಹೂಗಳ ಮಳೆಯನ್ನು ಹರಿಸುತ್ತಾ, ತ್ರಿವರ್ಣ ಧ್ವಜಗಳನ್ನು ಹಿಡಿದು ಓಡಾಡುತ್ತ ಸಂಭ್ರಮಿಸಿದರು. ಈ ದಿನಕ್ಕಾಗಿ ಬಕಪಕ್ಷಿಗಳಂತೆ ಕಾಯುತ್ತಿದ್ದ ಲಕ್ಷಾಂತರ ಹೋರಾಟಗಾರರಿಗೆ, ಎಲ್ಲ ದೇಶಪ್ರೇಮಿಗಳಿಗೆ ಜೀವನದ ಸಾರ್ಥಕ ಭಾವ ಮೂಡಿತ್ತು.

ಲಿಯಾಕತ್ ಅಲಿ ಸಚಿವ ಸಂಪುಟ ತನ್ನ ರಾಜೀನಾಮೆ ನೀಡಿತು. ಬಂಧನದಲ್ಲಿದ್ದ ಎಲ್ಲ ಹೋರಾಟಗಾರರನ್ನು ಬಿಡುಗಡೆಗೊಳಿಸಲಾಯಿತು. ನಿಜಾಮನ ದಂಡನಾಯಕ ಆಗಿದ್ದ ಜನರಲ್ ಸೈಯದ್ ಅಹ್ಮದ್ ಎಡ್ರೂಸ್ ಆ ದಿನ ಸಂಜೆ ಭಾರತೀಯ ಪಡೆಗಳಿಗೆ ಶರಣಾದ.

ಸ್ವಾಮಿ ರಮಾನಂದ ತೀರ್ಥರು ಬಿಡುಗಡೆಯಾದರು. ನಿಜಾಮನು ಸೆಪ್ಟೆಂಬರ್ ೧೮ ರಂದು ಭಾರತದ ಒಕ್ಕೂಟದ ಒಡಂಬಡಿಕೆಗೆ ಸಹಿ ಹಾಕಿದನು. ವಿಮಾನದಲ್ಲಿ ಸರ್ದಾರ್ ವಲ್ಲಭಭಾಯ್ ಪಟೇಲರು ಹೈದರಾಬಾದ್‌ಗೆ ಆಗಮಿಸಿದರು. ನಿಜಾಮನು ತನ್ನ ಆಯುಧಗಳನ್ನು ಸರದಾರರಿಗೆ ಒಪ್ಪಿಸಿ, ಕಾಲಿಗೆ ಬಿದ್ದು ಶರಣಾಗತನಾದನು. ಖಾಸಿಂ ರಜವಿಗೆ ಏಳು ವರ್ಷ ಜೈಲು ಶಿಕ್ಷೆಯಾಯಿತು. ಮುಂದೆ ಇವನು ಪಾಕಿಸ್ತಾನಕ್ಕೆ ಓಡಿಹೋದ.

ಹೀಗೆ ನಮ್ಮ ನೆಲವನ್ನು ಮೊದಲು ಪರಕೀಯರಿಂದ, ಆಮೇಲೆ ನಿಜಾಮನ ಕಪಿಮುಷ್ಟಿಯಿಂದ ಬಿಡುಗಡೆಗೊಳಿಸಿ ಸ್ವಾತಂತ್ರ್ಯವನ್ನು ಹೊಂದಿದ ಗಳಿಗೆಯ ಚಿತ್ರಣವನ್ನು ಹಿಡಿದಿಡಲು ಶಬ್ದಗಳು ಸೋಲುತ್ತವೆ.

❑

## ಆಕರ ಗ್ರಂಥಗಳು

೧. ವಿಮೋಚನೆ : ಸಂಪಾದಕರು – ಎಚ್.ಎಸ್. ಪಾಟೀಲ, ಕೊಪ್ಪಳ ಪ್ರಕಾಶನ : ಜಿಲ್ಲಾಡಳಿತ, ಕೊಪ್ಪಳ

೨. ಕೊಪ್ಪಳ ನಾಡಿನ ಸ್ವಾತಂತ್ರ್ಯ ಹೋರಾಟ – ರಾಮಣ್ಣ ಹವಳೆ, ರಾಯಚೂರು ಪ್ರಕಾಶನ : ಶ್ರೀ ಭೀಮಜ್ಜ ಮುರಡಿ ಪ್ರತಿಷ್ಠಾನದಿಂದ ಪ್ರಕಾಶನ

೩. ವಂದೇ ಮಾತರಂನಿಂದ ಜನಗಣ ಮನದವರೆಗೆ – ವಿ.ಎಚ್. ದೇಸಾಯಿ ಪ್ರಕಾಶನ : ಲೋಕಶಿಕ್ಷಣ ಟ್ರಸ್ಟ್, ಹುಬ್ಬಳ್ಳಿ

೪. ತಿರುಳ್ಗನ್ನಡ: ೬೨ ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ, ಕೊಪ್ಪಳ – ಸ್ಮರಣ ಸಂಚಿಕೆ

೫. ಕೊಪಣ ಸಿರಿ – ಕೊಪ್ಪಳ ಜಿಲ್ಲಾ ಅಧ್ಯಯನ ೭೮ ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ, ಗಂಗಾವತಿ – ಸ್ಮರಣ ಸಂಚಿಕೆ

೬. ಕೊಪ್ಪಳ ಸಾಂಸ್ಕೃತಿಕ ಪರಂಪರೆ – ಒಂದು ಅಧ್ಯಯನ – ಎಚ್.ಎಸ್. ಪಾಟೀಲ

೭. ಕೊಪ್ಪಳ ಜಿಲ್ಲೆಯ ಅಂಕಿ ಸಂಖ್ಯೆಯ ನೋಟ ೨೦೧೮–೧೯

೮. ರಜಾಕಾರರ ಲಾವಣಿ– ಪ್ರಕಾಶಕರು ಪ್ರಸಾರಾಂಗ, ಕನ್ನಡ ಹಂಪಿ ವಿಶ್ವವಿದ್ಯಾಲಯ, ಹಂಪಿ.


❖ ❖ ❖

**ಅಮೃತ ಮಹೋತ್ಸವ ಪ್ರಕಟಣೆ – ೭೫ ಕಿರುಪುಸ್ತಕಗಳ ಪಟ್ಟಿ**
**ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ**

| ಕ್ರಸಂ. | ಪುಸ್ತಕದ ಹೆಸರು | ಲೇಖಕರ ಹೆಸರು | ಬೆಲೆ |
|---|---|---|---|
| ೧. | ತುರುವನೂರು | ಡಾ. ಪಿ. ಯಶೋದಾ ರಾಜಶೇಖರಪ್ಪ | ೩೦/– |
| ೨. | ಚಿತ್ರದುರ್ಗ | ಡಾ. ಬಿ. ರಾಜಶೇಖರಪ್ಪ | ೩೦/– |
| ೩. | ರಾಮಸ್ವಾಮಿ ವೃತ್ತ | ಮಂಜುನಾಥ ಹೆಚ್.ಎಲ್. | ೩೦/– |
| ೪. | ಸುಬ್ಬರಾಯನ ಕೆರೆ | ಡಾ. ಇಂದಿರಾ ಬಿ.ಪಿ. | ೩೦/– |
| ೫. | ಬದನವಾಳು | ಡಾ. ಇಂದಿರಾ ಬಿ.ಪಿ. | ೩೦/– |
| ೬. | ತಗಡೂರು | ಡಾ. ಎಚ್.ಎಸ್. ಉಷಾರಾಣಿ | ೩೦/– |
| ೭. | ಶಿವಪುರ | ಡಾ. ಲಿಂಗರಾಜು | ೩೦/– |
| ೮. | ಮಂಡ್ಯ | ಡಾ. ಶಿವರಾಮು ಎಸ್. | ೩೦/– |
| ೯. | ಚಾಮರಾಜನಗರ | ಡಾ. ಸುಂದ್ರೇಶ ಎನ್. | ೩೦/– |
| ೧೦. | ಗುಂಡ್ಲುಪೇಟೆ | ಕವಿತಾ ಎ. | ೩೦/– |
| ೧೧. | ಗೊರೂರು | ಡಾ. ಯೋಗೇಶ್ ಎನ್.ಇ. | ೩೦/– |
| ೧೨. | ಅರಸೀಕೆರೆ | ಡಾ. ಮಂಜುನಾಥ ಜಿ.ಆರ್. | ೩೦/– |
| ೧೩. | ಹೊಸರಿತ್ತಿ | ಡಾ. ಹೇಮಪ್ಪ ಬ. ಕೆಂಚಳ್ಳಿ | ೩೦/– |
| ೧೪. | ಕನ್ನೇಶ್ವರ | ಡಾ. ಚಾಮರಾಜ ಕಮ್ಮಾರ | ೩೦/– |
| ೧೫. | ಚಳ್ಳಕೂಡ್ಲೂರು | ರಾಮಣ್ಣ ಹವಳೆ | ೩೦/– |
| ೧೬. | ನ್ಯಾಷನಲ್ ಹೈಸ್ಕೂಲು | ಟಿ.ಕೆ. ತಿಮ್ಮರಾಜ ಶೆಟ್ಟಿ | ೩೦/– |
| ೧೭. | ಬನಪ್ಪ ಪಾರ್ಕ್ | ರಮೇಶ ದೊಡ್ಡಪುರ | ೩೦/– |

| | | | |
|---|---|---|---|
| ೧೮. | ಮಲ್ಲೇಶ್ವರ | ಕೆ.ಎಲ್. ನಟರಾಜ್ | ೩೦/– |
| ೧೯. | ದಂಡುಪ್ರದೇಶ | ಪ್ರಮೋದ್ ನ. ಗೋ. | ೩೦/– |
| ೨೦. | ದೇವನಹಳ್ಳಿ | ಕೆ.ಆರ್. ನರಸಿಂಹನ್ | ೩೦/– |
| ೨೧. | ದೊಡ್ಡಬಳ್ಳಾಪುರ | ಡಿ.ಎಂ. ಘನಶ್ಯಾಮ | ೩೦/– |
| ೨೨. | ರಾಮನಗರ | ಎಸ್. ಶರತ್ ಚಂದ್ರ | ೩೦/– |
| ೨೩. | ಕನಕಪುರ | ಡಾ. ಎಸ್.ಎಚ್. ಭುವನೇಶ್ವರ | ೩೦/– |
| ೨೪. | ಶ್ರೀನಿವಾಸಪುರ | ಪ್ರೊ. ಕೆ.ಆರ್. ಜಯಶ್ರೀ | ೩೦/– |
| ೨೫. | ಬಂಗಾರಪೇಟೆ | ಪ್ರೊ. ಕೆ.ಆರ್. ಜಯಶ್ರೀ | ೩೦/– |
| ೨೬. | ವಿದುರಾಶ್ವತ್ಥ | ಡಾ. ಎಸ್.ಜಿ. ರಾಮದಾಸ ರೆಡ್ಡಿ | ೩೦/– |
| ೨೭. | ಈಸೂರು | ಮಾರ್ಪಳ್ಳಿ ಆರ್. ಮಂಜುನಾಥ್ | ೩೦/– |
| ೨೮. | ನಗರ(ಬಿದನೂರು) | ಚಿನ್ಮಯ ಎಂ.ಸಿ. | ೩೦/– |
| ೨೯. | ಚನ್ನಗಿರಿ | ಡಾ. ಕೆಳದಿ ವೆಂಕಟೇಶ ಜೋಯಿಸ್ | ೩೦/– |
| ೩೦. | ದಾವಣಗೆರೆ | ಸಹನಾ ಚೇತನ್ | ೩೦/– |
| ೩೧. | ಸಿಂದಗಿ | ಡಾ. ರಮೇಶ ಎಸ್. ಕತ್ತಿ | ೩೦/– |
| ೩೨. | ಮಸಬಿನಾಳ | ಶಂಕರ ಬೈಚಬಾಳ | ೩೦/– |
| ೩೩. | ಸಾರವಾಡ | ಡಾ. ಸೋಮಶೇಖರ ವಾಲಿ | ೩೦/– |
| ೩೪. | ಹಲಸಂಗಿ | ಶ್ರೀ ಸುಮಿತ್ ಮೇತ್ರಿ | ೩೦/– |
| ೩೫. | ನರಗುಂದ | ಡಾ. ನಿಂಗು ಸೊಲಗಿ | ೩೦/– |
| ೩೬. | ಮುಂಡರಗಿ | ಡಾ. ಉಮೇಶ ತಿಮ್ಮಾಪುರ | ೩೦/– |



| | | | |
|---|---|---|---|
| ೩೭. | ಹಲಗಲಿ | ಡಾ. ವಿಜಯಶ್ರೀ ಇಟ್ಟಣ್ಣವರ | ೩೦/– |
| ೩೮. | ಬಿಸನಾಳ | ಡಾ. ವಿನಯಕುಮಾರ್ ಹಿರೇಮಠ | ೩೦/– |
| ೩೯. | ಬಾಗಲಕೋಟೆ | ರಾಮ ಮನಗೂಳಿ | ೩೦/– |
| ೪೦. | ಬಾದಾಮಿ | ಡಾ. ಪ್ರಕಾಶ ಗ. ಖಾಡೆ | ೩೦/– |
| ೪೧. | ಸುರಪುರ | ಶ್ರೀನಿವಾಸ ಜಾಲವಾದಿ | ೩೦/– |
| ೪೨. | ಕೆಂಭಾವಿ | ನಿಂಗನಗೌಡ ಹ. ದೇಸಾಯಿ | ೩೦/– |
| ೪೩. | ರಾಜನಕೋಳೂರು | ರಾಘವೇಂದ್ರ ಜಹಗೀರದಾರ | ೩೦/– |
| ೪೪. | ಭಾಲ್ಕಿ | ಡಾ. ರಘುಶಂಖ ಭಾತಂಬ್ರಾ | ೩೦/– |
| ೪೫. | ಗೋರಟಾ | ಷ.ಬ್ರ. ಡಾ. ರಾಜಶೇಖರ ಶಿವಾಚಾರ್ಯ ಸ್ವಾಮಿಗಳು | ೩೦/– |
| ೪೬. | ಕೇಂದ್ರ ಮೈದಾನ | ಡಾ. ವಸಂತಕುಮಾರ್ ಪೆರ್ಲ | ೩೦/– |
| ೪೭. | ರಾಮಶಾಲಾ ಬಯಲು | ರಾಮಣ್ಣ ಹವಳೆ | ೩೦/– |
| ೪೮. | ಉಳ್ಳಾಲ | ಡಾ. ಜ್ಯೋತಿ ಚೇಳ್ಯಾರು | ೩೦/– |
| ೪೯. | ಅಮರಸುಳ್ಯ | ಸಹನಾ ಕಾಂತಬೈಲು | ೩೦/– |
| ೫೦. | ಅಜ್ಜರಕಾಡು ಮೈದಾನ | ಡಾ. ಪೃಥ್ವೀರಾಜ ಕವತ್ತಾರು | ೩೦/– |
| ೫೧. | ಬಸರೂರು–ಕುಂದಾಪುರ | ಮಂಜುನಾಥ್ ಚಾಂದ್ | ೩೦/– |
| ೫೨. | ಪೊನ್ನಂಪೇಟೆ | ಸೊಮೆಯಂಡ ಕೌಸಲ್ಯ ಸತೀಶ್ | ೩೦/– |
| ೫೩. | ಮಡಿಕೇರಿ | ಪ್ರೊ. ಕೆ.ಆರ್. ದೀಕ್ಷಿತ್ | ೩೦/– |
| ೫೪. | ಅಜ್ಜಂಪುರ | ಚಿ.ಸ. ಪ್ರಭುಲಿಂಗ ಶಾಸ್ತ್ರಿ | ೩೦/– |
| ೫೫. | ಚಿಕ್ಕಮಗಳೂರು | ಚಿ.ಸ. ಪ್ರಭುಲಿಂಗ ಶಾಸ್ತ್ರಿ | ೩೦/– |

| | | | |
|---|---|---|---|
| ೫೬. | ಕಲಬುರಗಿ | ಡಾ. ಶಂಭುಲಿಂಗವಾಣಿ | ೩೦/– |
| ೫೭. | ಮುಧೋಳ–ಸೇಡಂ | ಮುಡಬಿ ಗುಂಡೇರಾವ | ೩೦/– |
| ೫೮. | ಅಂಕೋಲಾ | ಶಾಂತಾರಾಮ ನಾಯಕ | ೩೦/– |
| ೫೯. | ಶಿರಸಿ | ಪದ್ಮಾಕರ ಮಡಗಾಂವಕರ | ೩೦/– |
| ೬೦. | ಕಾರವಾರ | ಡಾ. ಉದಯ ಶಂಕರ ಪುರಾಣಿಕ | ೩೦/– |
| ೬೧. | ಬಳ್ಳಾರಿ | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೨. | ಹೊಸಪೇಟೆ | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೩. | ಕೊಟ್ಟೂರು | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೪. | ಕೂಡ್ಲಿಗಿ | ಡಾ. ಕೆ. ಸತೀಶ | ೩೦/– |
| ೬೫. | ಕಿತ್ತೂರು | ಪ್ರಕಾಶ ಗಿರಿಮಲ್ಲನವರ | ೩೦/– |
| ೬೬. | ಹುದಲಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೭. | ಬೆಳಗಾವಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೮. | ಹುಲಕುಂದ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೯. | ಬೆಂಗೇರಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೭೦. | ಕೊಪ್ಪಳ | ಮಹೇಶ ಬಳ್ಳಾರಿ | ೩೦/– |
| ೭೧. | ಗಂಗಾವತಿ | ರಮೇಶ ಸಿ. ಬನ್ನಿಕೊಪ್ಪ | ೩೦/– |
| ೭೨. | ಅಳವಂಡಿ | ಡಾ. ಪ್ರಕಾಶ ಬಳ್ಳಾರಿ | ೩೦/– |
| ೭೩. | ತುಮಕೂರು | ಡಾ. ಬಿ. ನಂಜುಂಡಸ್ವಾಮಿ | ೩೦/– |
| ೭೪. | ಮಧುಗಿರಿ | ಡಾ. ಬಿ. ನಂಜುಂಡಸ್ವಾಮಿ | ೩೦/– |
| ೭೫. | ತಾವರೆಕೆರೆ | ಪ್ರೊ. ಕೆ. ಪುಟ್ಟರಂಗಪ್ಪ | ೩೦/– |